prajavani.net prajavani | ಮಂಗಳವಾರ, ಜೂನ್ 23, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 173 | ಪುಟ 14 | www.prajavani.net

ಮೆಸ್ಸಿ ದಾಖಲೆ
ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ ಅವರು ಫಿಫಾ ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲೇ ಅತಿ ಹೆಚ್ಚು ಗೋಲು (18) ಹೊಡೆದ ಆಟಗಾರನೆಂಬ ದಾಖಲೆ ಬರೆದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,094 | ನಿಫ್ಟಿ 24,102 | $/₹ 94.63 | ಚಿನ್ನ (Std. 10g) ₹1,50,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,50,300 (ಬೆಂಗಳೂರು)

15 ಮಂದಿ ಸಜೀವ ದಹನ

ಲಖನೌದಲ್ಲಿ ಕಟ್ಟಡಕ್ಕೆ ಬೆಂಕಿ • ಮೃತರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಉತ್ತರ ಲಖನೌ ವಸತಿ ಪ್ರದೇಶದಲ್ಲಿರುವ ಮೂರು ಅಂತಸ್ತಿನ ಕಟ್ಟಡದಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಭೀಕರ ಅಗ್ನಿ ದುರಂತದಲ್ಲಿ ವಿದ್ಯಾರ್ಥಿಗಳು ಸೇರಿದಂತೆ 15 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ದುರಂತದಲ್ಲಿ ಬಲಿಯಾದವರಲ್ಲಿ ಹೆಚ್ಚಿನವರು ಕಟ್ಟಡದಲ್ಲಿದ್ದ ಆ್ಯನಿಮೇಷನ್ ಸೆಂಟರ್‌ನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು. ಮೃತರಲ್ಲಿ ಮೂವರು ಮಹಿಳೆಯರೂ ಸೇರಿದ್ದಾರೆ. ಬೆಂಕಿಯಿಂದ ತಪ್ಪಿಸಿಕೊಳ್ಳಲು ಕೆಲವು ವಿದ್ಯಾರ್ಥಿಗಳು ಮೊದಲ ಮಹಡಿಯಿಂದ ಜಿಗಿದಿದ್ದಾರೆ. ಕಟ್ಟಡದಲ್ಲಿ ಸಿಲುಕಿದ್ದ ಹಲವರನ್ನು ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿ, ಸ್ಥಳೀಯರ ನೆರವಿನಿಂದ ರಕ್ಷಿಸಿದ್ದಾರೆ.

ಅಲೀಗಂಜ್ ಪ್ರದೇಶದ ಉಷಾ ಮೆಹ್ತಾ ರಸ್ತೆಯಲ್ಲಿರುವ ಕಟ್ಟಡದಲ್ಲಿ ಮಧ್ಯಾಹ್ನ 3ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಅಗ್ನಿಶಾಮಕ ದಳದ 19 ವಾಹನಗಳು ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡವು. ಬೆಂಕಿ ಹತೋಟಿಗೆ ತಂದ ಬಳಿಕ ಕಟ್ಟಡದಲ್ಲಿ ಶೋಧ ನಡೆಸಿದಾಗ 15 ಮೃತದೇಹಗಳು ಪತ್ತೆಯಾದವು.

ಕಟ್ಟಡದ ನೆಲಮಹಡಿಯಲ್ಲಿ ಸಾಕು ಪ್ರಾಣಿಗಳನ್ನು ಮಾರಾಟ ಮಾಡುವ ಮತ್ತು ಚಿಕಿತ್ಸೆ ನೀಡುವ ಮಳಿಗೆ ಇದ್ದು, ಹಲವು ಬೆಕ್ಕು ಹಾಗೂ ಶ್ವಾನಗಳು ಸತ್ತಿವೆ. ದಕ್ಷಿಣ ದೆಹಲಿಯ ಹೋಟೆಲ್‌ನಲ್ಲಿ ಅಗ್ನಿ ಅವಘಡ ಸಂಭವಿಸಿ 20 ಮಂದಿ ಮೃತಪಟ್ಟ ಘಟನೆ ಮಾಸುವ ಮುನ್ನವೇ ಈ ದುರ್ಘಟನೆ ಸಂಭವಿಸಿದೆ.

ಬೆಂಕಿಗೆ ಕಾರಣ ಏನು ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ. ಉತ್ತರ ಪ್ರದೇಶ ಸರ್ಕಾರ ಘಟನೆ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದೆ. '11ರಿಂದ 12 ಮೃತದೇಹಗಳನ್ನು ಕಟ್ಟಡದಿಂದ ಹೊರಗೆ ತಂದ ದೃಶ್ಯವನ್ನು ಕಣ್ಣಾರೆ ಕಂಡೆ' ಎಂದು ಸ್ಥಳದಲ್ಲಿದ್ದ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಸುದ್ದಿಗಾರರಿಗೆ ತಿಳಿಸಿದರು.

ಬೆಂಕಿ ಕಾಣಿಸಿಕೊಂಡ ಕೂಡಲೇ ಸ್ಥಳೀಯರು ಕಟ್ಟಡದ ಕಿಟಕಿಯ ಗಾಜುಗಳನ್ನು ಒಡೆದು ವಿದ್ಯಾರ್ಥಿಗಳು ಹೊರಬರಲು ಸಹಕರಿಸಿದರು.

▶8

₹7 ಲಕ್ಷ ಪರಿಹಾರ

ಪ್ರಧಾನಿ ನರೇಂದ್ರ ಮೋದಿ ಅವರು ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದು, ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಾಳುಗಳಿಗೆ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಹಾಗೂ ಗಾಯಾಳುಗಳಿಗೆ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ನಾಲ್ವರ ಬಂಧನ

ಬೆಂಕಿ ಅವಘಡ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ವಸತಿ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿತ್ತು ಎಂಬ ಆರೋಪ ಕೇಳಿಬಂದಿದೆ.



ಬೆಂಕಿ ಅವಘಡ ಸಂಭವಿಸಿದ ಕಟ್ಟಡದಲ್ಲಿದ್ದ ಬೆಕ್ಕೊಂದನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದರು —ಪಿಟಿಐ ಚಿತ್ರ

ಜಿಗಿದು ಪ್ರಾಣ ಉಳಿಸಿಕೊಂಡರು

ಬೆಂಕಿಯ ಕೆನ್ನಾಲಿಗೆ ಕಟ್ಟಡವನ್ನು ಆವರಿಸುತ್ತಿದ್ದಂತೆಯೇ ಕೆಲವರು ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಕೆಲವು ವಿದ್ಯಾರ್ಥಿಗಳು ಕೇಬಲ್ ಹಿಡಿದು ಕೆಳಕ್ಕಿಳಿಯುವಾಗ ಹಾಗೂ ಒಬ್ಬರು ಪಾರಾಗಲು ಯತ್ನಿಸುವಾಗ ಆಯತಪ್ಪಿ ಬಿದ್ದ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ.

'ನಾನು ಸ್ಥಳಕ್ಕೆ ಬಂದಾಗ ಕಟ್ಟಡವನ್ನು ದಟ್ಟ ಹೊಗೆ ಆವರಿಸಿತ್ತು. ಕೆಲವು ಮಂದಿಯನ್ನು ಆಗಲೇ ರಕ್ಷಿಸಲಾಗಿತ್ತು. 4–5 ವಿದ್ಯಾರ್ಥಿಗಳು ಕಟ್ಟಡದಿಂದ ಹೊರಬರುವಲ್ಲಿ ಯಶಸ್ವಿಯಾದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು. 'ಏಳರಿಂದ ಎಂಟು ವಿದ್ಯಾರ್ಥಿಗಳು ಕಟ್ಟಡದಿಂದ ಜಿಗಿದರು' ಎಂದು ಇನ್ನೊಬ್ಬರು ವಿವರಿಸಿದರು.

ರಾಜ್ಯದ 500 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ

• ಎ.ಎಂ.ಸುರೇಶ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ 500 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ.

ಇಂತಹ ಗ್ರಾಮಗಳಿಗೆ ಖಾಸಗಿ ಕೊಳವೆಬಾವಿ ಮತ್ತು ಟ್ಯಾಂಕರ್ ಮೂಲಕ ನೀರು ಪೂರೈಸ ಲಾಗುತ್ತಿದೆ. ಮುಂಗಾರಿನಲ್ಲಿ ವಾಡಿಕೆ ಪ್ರಕಾರ ಮಳೆ ಬಾರದೆ ಇರುವುದರಿಂದ ಇನ್ನಷ್ಟು ಗ್ರಾಮಗಳಲ್ಲಿ ನೀರಿನ ಅಭಾವ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಮಾರ್ಚ್‌ನಲ್ಲಿ 230 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇತ್ತು. ಈಗ ಅಂತಹ ಗ್ರಾಮಗಳ ಸಂಖ್ಯೆ 500ಕ್ಕೆ ಏರಿದೆ. 145 ಟ್ಯಾಂಕರ್‌ಗಳು ಮತ್ತು 618 ಖಾಸಗಿ ಕೊಳವೆಬಾವಿಗಳನ್ನು ಒಪ್ಪಂದದ ಮೂಲಕ ಬಾಡಿಗೆಗೆ ಪಡೆದು, ಅವುಗಳ ಮೂಲಕ ಜನರಿಗೆ ನೀರು ಪೂರೈಸಲಾಗುತ್ತಿದೆ.

'ಸಾಮಾನ್ಯವಾಗಿ ಮಾರ್ಚ್‌ನಿಂದ ಮೇ ತಿಂಗಳವರೆಗೆ ಕುಡಿಯುವ ನೀರಿನ ಅಭಾವ ಇರುತ್ತದೆ. ಜೂನ್‌ನಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಬರುತ್ತದೆ. ಆದರೆ, ಈ ವರ್ಷ ಜೂನ್‌ನಲ್ಲಿ ಮಳೆ ಕೊರತೆಯಾಗಿರುವ ಕಾರಣ ನೀರಿನ ಸಮಸ್ಯೆ ಇರುವ ಗ್ರಾಮಗಳ ಸಂಖ್ಯೆ ಹೆಚ್ಚಾಗಿದೆ' ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ಎಲ್ ನಿನೊ ಪರಿಣಾಮದಿಂದಾಗಿ ಮುಂಗಾರು ಮಳೆ ಕೊರತೆಯಾಗಲಿದೆ ಎಂದು ಹವಾಮಾನ ಇಲಾಖೆ ಈಗಾಗಲೇ ಮುನ್ಸೂಚನೆ ನೀಡಿದೆ.

▶5

ಡಿಕೆ–ಎಚ್‌ಡಿಕೆ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆ ಕುರಿತಂತೆ ಇದೇ 26ರಂದು ವಿಧಾನಸೌಧಕ್ಕೆ ಚರ್ಚೆಗೆ ಬರುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಪತ್ರ ಬರೆದು ಪಂಥಾಹ್ವಾನ ನೀಡಿದ್ದಾರೆ.

ಇದಕ್ಕೆ ಪತ್ರದ ಮೂಲಕವೇ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, '26ರಂದು ಪೂರ್ವ ನಿಯೋಜಿತ ಕಾರ್ಯಕ್ರಮ ಇದೆ. ಅದರ ಬದಲು ಇದೇ 27 ರಂದು ಬಿಡದಿ ಅಥವಾ ಬೈರಮಂಗಲದಲ್ಲಿ ಚರ್ಚೆಗೆ ಸಿದ್ಧ. ಬಾಧಿತ ರೈತರು, ಗ್ರಾಮಸ್ಥರು, ಅಹವಾಲುದಾರರನ್ನು ಹೊರಗಿಟ್ಟು ವಿಧಾನಸೌಧದಲ್ಲಿ ಸಭೆ ನಡೆಸುವುದರಿಂದ ಅದು ಫಲಪ್ರದವಾಗುವುದಿಲ್ಲ' ಎಂದಿದ್ದಾರೆ.

ಸೋಮವಾರ ಬೆಳಿಗ್ಗೆ ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ, ಬಹಿರಂಗ ಚರ್ಚೆಗೆ ಬರುವಂತೆ ಶಿವಕುಮಾರ್ ಅವರಿಗೆ ಸವಾಲು ಹಾಕಿದ್ದರು.

ಅದಕ್ಕೆ ಪ್ರತಿಕ್ರಿಯಿಸಿದ್ದ ಶಿವಕುಮಾರ್, 'ಹಿಂದೆಯೇ ಚರ್ಚೆಗೆ ಕರೆದಿದ್ದೆ. ಆದರೆ ಬರಲಿಲ್ಲ. ಮುಂದಿನ ಅಧಿವೇಶನದಲ್ಲಿ ಚರ್ಚಿಸಿ' ಎಂದಿದ್ದರು.

ಸಂಜೆ ಹೊತ್ತಿಗೆ, ಕುಮಾರಸ್ವಾಮಿಗೆ ಪತ್ರ ಬರೆದ ಶಿವಕುಮಾರ್, 'ನೀವು ಪ್ರಾರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಉತ್ಸುಕನಾಗಿದ್ದೇನೆ. ಇದೇ 26 ರಂದು ವಿಧಾನಸೌಧಕ್ಕೆ ನೀವು ಮತ್ತು ನಿಮ್ಮ ತಂಡದ 5 ಪ್ರತಿನಿಧಿಗಳು ಚರ್ಚೆಗೆ ನನ್ನ ಕಚೇರಿಗೆ ಬರುವಂತೆ ಕೋರುತ್ತೇನೆ' ಎಂದು ಆಹ್ವಾನ ನೀಡಿದ್ದರು.

ಬ್ರಿಟನ್ ಪ್ರಧಾನಿ ರಾಜೀನಾಮೆ ಘೋಷಣೆ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಪ್ರಧಾನಿ ಹುದ್ದೆ ಮತ್ತು ಲೇಬರ್ ಪಕ್ಷದ ನಾಯಕನ ಸ್ಥಾನಕ್ಕೆ ಸೋಮವಾರ ರಾಜೀನಾಮೆ ಘೋಷಿಸಿದರು.



ಕಿಯರ್ ಸ್ಟಾರ್ಮರ್

ನೂತನ ನಾಯಕನ ಆಯ್ಕೆ ಪ್ರಕ್ರಿಯೆಯು ಮುಂದಿನ ವಾರದಿಂದ ಆರಂಭವಾಗಲಿದೆ.

'ಆಡಳಿತಾರೂಢ ಲೇಬರ್ ಪಕ್ಷವು ನೂತನ ಪ್ರಧಾನಿಯನ್ನು ಆಯ್ಕೆ ಮಾಡುವವರೆಗೆ ಹುದ್ದೆಯಲ್ಲಿ ಮುಂದುವರಿಯುತ್ತೇನೆ' ಎಂದು ಅವರು ತಿಳಿಸಿದರು.

'ಅಧಿಕಾರ ಹಸ್ತಾಂತರ ಪ್ರಕ್ರಿಯೆಯು ಸುಗಮವಾಗಿ ನಡೆಯುವ ಸಲುವಾಗಿ, ನೂತನ ನಾಯಕನಿಗೆ ಸಂಪೂರ್ಣ ಬೆಂಬಲ ನೀಡುತ್ತೇನೆ' ಎಂದು ಅವರು ಘೋಷಿಸಿದರು. ಕಳೆದ ವಾರ ನಡೆದ ಉಪ ಚುನಾವಣೆಯಲ್ಲಿ ಪಕ್ಷದ ಆ್ಯಂಡಿ ಬರ್ನ್‌ಹಮ್ ಅವರು ಅಭೂತಪೂರ್ವ ಗೆಲುವು ಸಾಧಿಸಿದ್ದು, ಪ್ರಧಾನಿ ಹುದ್ದೆಯ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ.

▶8

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬ್ಯಾಂಕ್ ಉದ್ಯೋಗಿ ಸೇರಿ ಮೂವರ ಸಾವು

ಮೇಡಹಳ್ಳಿ, ಎಚ್‌ಎಂಟಿ ಲೇಔಟ್, ವರ್ತೂರು–ಗುಂಜೂರು ಮುಖ್ಯರಸ್ತೆಯಲ್ಲಿ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ, ವೈಟ್‌ಫೀಲ್ಡ್ ಹಾಗೂ ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಬ್ಯಾಂಕ್ ಉದ್ಯೋಗಿ ಸೇರಿ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಆವಲಹಳ್ಳಿ ಸಮೀಪದ ಮೇಡಹಳ್ಳಿ ಕೆರೆ ಬಳಿ ಸೋಮವಾರ ಬೆಳಿಗ್ಗೆ ರಸ್ತೆ ವಿಭಜಕಕ್ಕೆ ದ್ವಿಚಕ್ರ ವಾಹನ ಡಿಕ್ಕಿಯಾಗಿ ರಾಜೇಂದ್ರ (59) ಎಂಬುವರು ಮೃತಪಟ್ಟಿದ್ದಾರೆ.

ಕನ್ನಮಂಗಲ ನಿವಾಸಿಯಾಗಿದ್ದ ರಾಜೇಂದ್ರ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಎಂ.ಜಿ.ರಸ್ತೆ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು.

ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ಹೋಗುತ್ತಿದ್ದ ರಾಜೇಂದ್ರ ಅವರು ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ವಾಹನ ಡಿಕ್ಕಿ ಹೊಡೆಸಿದ್ದರು. ಕೆಳಗೆ ಬಿದ್ದ ಅವರ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆ.ಆರ್.ಪುರ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಫಾರ್ಮಾ ಕಂಪನಿ ಉದ್ಯೋಗಿ ಸಾವು: ಯಶವಂತಪುರದ ಬಳಿಯ ಎಚ್‌ಎಂಟಿ ಲೇಔಟ್‌ನಲ್ಲಿ ಸೋಮವಾರ ಮುಂಜಾನೆ ದ್ವಿಚಕ್ರ ವಾಹನ ಹಾಗೂ ಟೆಂಪೊ ಟ್ರಾವೆಲರ್ ನಡುವೆ ಸಂಭವಿಸಿದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಮೃತಪಟ್ಟಿದ್ದಾರೆ.

ಗೌರಿಶಂಕರ್(34) ಮೃತಪಟ್ಟವರು.

ಹೇರೋಹಳ್ಳಿ ನಿವಾಸಿಯಾಗಿದ್ದ ಗೌರಿಶಂಕರ್, ತುಮಕೂರು ರಸ್ತೆಯ ಫಾರ್ಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ.

ಮುಖ್ಯರಸ್ತೆಯಲ್ಲಿ ನಿರ್ಲಕ್ಷ್ಯದಿಂದ ಅತಿ ವೇಗವಾಗಿ ಟೆಂಪೊ ಟ್ರಾವೆಲರ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಚಾಲಕ, ಅಡ್ಡರಸ್ತೆಯಿಂದ ದ್ವಿಚಕ್ರ ವಾಹನದಲ್ಲಿ ಬಂದ ಗೌರಿಶಂಕರ್‌ಗೆ ವಾಹನ ಗುದ್ದಿಸಿದ್ದಾನೆ. ಡಿಕ್ಕಿಯ ತೀವ್ರತೆಗೆ ಸುಮಾರು 40 ಅಡಿ ದೂರ ಹೋಗಿ ಬಿದ್ದ ಗೌರಿಶಂಕರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಟೆಂಪೊ ಟ್ರಾವೆಲರ್ ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭದ್ರತಾ ಸಿಬ್ಬಂದಿ ಸಾವು: ವರ್ತೂರು–ಗುಂಜೂರು ಮುಖ್ಯರಸ್ತೆಯಲ್ಲಿ ಭಾನುವಾರ ರಾತ್ರಿ ನೀರಿನ ಟ್ಯಾಂಕರ್ ಡಿಕ್ಕಿಯಾಗಿ ಮಹೇಂದ್ರ ಕಪೇಂದ್ರ ಮಾಜೆ (42) ಎಂಬುವರು ಮೃತಪಟ್ಟಿದ್ದಾರೆ.

ನೇಪಾಳದ ಮಹೇಂದ್ರ ಅವರು ವರ್ತೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದರು. ರಸ್ತೆ ದಾಟುವಾಗ ವೇಗವಾಗಿ ಬಂದ ನೀರಿನ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಆಗ ಕೆಳಗೆ ಬಿದ್ದ ಅವರ ಮೇಲೆ ಟ್ಯಾಂಕರ್ ಚಕ್ರ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವೈಟ್‌ಫೀಲ್ಡ್ ಸಂಚಾರ ಠಾಣೆ ಪೊಲೀಸರು ಟ್ಯಾಂಕರ್ ಚಾಲಕನನ್ನು ಬಂಧಿಸಿ ವಾಹನ ಜಪ್ತಿಮಾಡಿದ್ದಾರೆ.

ಮದ್ಯ ಸೇವಿಸಿ ವಾಹನ ಚಾಲನೆ: 669 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಜೂನ್ 15ರಿಂದ 21ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ನಿಯಮ ಉಲ್ಲಂಘಿಸಿದ್ದ 669 ಚಾಲಕರ ವಿರುದ್ಧ ವಿವಿಧ ಠಾಣೆಯ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 43,057 ವಿವಿಧ ಮಾದರಿಯ ವಾಹನಗಳನ್ನು ಪರಿಶೀಲನೆ ನಡೆಸಲಾಯಿತು. ಆ ಪೈಕಿ, 669 ವಾಹನ ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಅತಿವೇಗವಾಗಿ ವಾಹನ ಚಲಾಯಿಸುವವರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ 46 ಪ್ರಕರಣ ದಾಖಲಿಸಿ ₹46 ಸಾವಿರ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.


ನಗರದಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿವೇಗದಿಂದ ವಾಹನ ಚಲಾಯಿಸುವವರ ಹಾವಳಿ ತಡೆಗಟ್ಟಲು ಮತ್ತು ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

ಕೋಟ್ಪಾ ಉಲ್ಲಂಘನೆ: 10 ಪ್ರಕರಣ ದಾಖಲು

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸೂಚನೆಯ ಮೇರೆಗೆ ಈಶಾನ್ಯ ವಿಭಾಗದ 'ರಾಣಿ ಚೆನ್ನಮ್ಮ ಪಡೆ' ಸಿಬ್ಬಂದಿ, ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದರು. ಕೋಟ್ಪಾ ಕಾಯ್ದೆ(ಸಿಗರೇಟ್ ಮತ್ತಿತರ ತಂಬಾಕು ಉತ್ಪನ್ನಗಳ ಕಾಯ್ದೆ) ಉಲ್ಲಂಘಿಸಿದವರ ವಿರುದ್ಧ 10 ಪ್ರಕರಣ ದಾಖಲು ಮಾಡಿದರು.

ಕಾರ್ಯಾಚರಣೆಯ ವೇಳೆ ರಾಣಿ ಚೆನ್ನಮ್ಮ ಪಡೆ ಹಾಗೂ ಚಿಕ್ಕಜಾಲ ಠಾಣೆಯ ಸಿಬ್ಬಂದಿ ತಂಡವು ಬಸ್ ನಿಲ್ದಾಣಗಳು, ಪ್ರಮುಖ ವಾಣಿಜ್ಯ ಸಂಕೀರ್ಣಗಳ ಸುತ್ತಮುತ್ತಲಿನ ಪ್ರದೇಶಗಳು, ಸಾರ್ವಜನಿಕ ರಸ್ತೆ ಬದಿ ಹಾಗೂ ಜನಸಂದಣಿ ಹೆಚ್ಚಿರುವ ಸ್ಥಳಗಳಲ್ಲಿ ದಿಢೀರ್ ಪರಿಶೀಲನೆ ನಡೆಸಿತು.

ಈ ಸಂದರ್ಭದಲ್ಲಿ ಸಾರ್ವಜನಿಕ ಸ್ಥಳಗಳಲ್ಲೇ ನಿಯಮ ಉಲ್ಲಂಘಿಸಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಗಳನ್ನು ಪತ್ತೆಹಚ್ಚಿ ಒಟ್ಟು 10 ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಗಿದೆ. ಪೊಲೀಸರು ಸ್ಥಳದಲ್ಲೇ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಮಾಡಿದರು.



ಈಶಾನ್ಯ ವಿಭಾಗದಲ್ಲಿ 'ರಾಣಿ ಚೆನ್ನಮ್ಮ ಪಡೆ'ಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು

ವಂಚನೆ: 'ರೀಲ್ಸ್ ಸ್ಟಾರ್' ಬಂಧನ

ಬೆಂಗಳೂರು: ಸಾಮಾಜಿಕ ಜಾಲತಾಣದ ಮೂಲಕ ಉದ್ಯಮಿಗಳನ್ನು ಪರಿಚಯಿಸಿಕೊಂಡು ನಂಬಿಸಿ ವಂಚಿಸುತ್ತಿದ್ದ 'ರೀಲ್ಸ್ ಸ್ಟಾರ್' ವನಿತಾ (31) ಅವರನ್ನು ಮಹಾಲಕ್ಷ್ಮಿ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ವಂಚನೆಗೆ ಒಳಗಾದ ಯುವಕ ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಕಿರುತೆರೆ ನಟಿ ಎಂದು ವನಿತಾ ಹಲವರ ಬಳಿ ಹೇಳಿಕೊಂಡಿದ್ದಾರೆ. ಯಾವ ಧಾರಾವಾಹಿಗಳಲ್ಲಿ ನಟಿಸಿದ್ದಾರೆ ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ತನಿಖಾ ಮೂಲಗಳು ತಿಳಿಸಿವೆ. 'ಸಾಮಾಜಿಕ ಮಾಧ್ಯಮಗಳ ಮೂಲಕ ಪರಿಚಯವಾದ ಸ್ನೇಹಿತರ ಬಳಿ 'ತಾನು ತೀವ್ರ ಕಷ್ಟದಲ್ಲಿದ್ದೇನೆಂದು ನಂಬಿಸುತ್ತಿದ್ದ ವನಿತಾ ಅವರು, 'ನನ್ನ ಚಿನ್ನದ ಆಭರಣಗಳನ್ನು ಅಡವಿಟ್ಟಿದ್ದೇನೆ, ಅದನ್ನು ಬಿಡಿಸಿಕೊಳ್ಳಲು ತುರ್ತಾಗಿ ಹಣ ಬೇಕಾಗಿದೆ. ಎರಡರಿಂದ ಮೂರು ದಿನ ಗಳಲ್ಲಿ ಹಣವನ್ನು ವಾಪಸ್ ನೀಡುತ್ತೇನೆ' ಎಂದು ನಂಬಿಸಿ, ಹಣ ಪಡೆಯುತ್ತಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾಗಳು ಇಲ್ಲದ ಸ್ಥಳಕ್ಕೆ ಹಣ ನೀಡುವವರನ್ನು ಕರೆದೊಯ್ದು ಅಲ್ಲಿ ಹಣ ಪಡೆದು ಪರಾರಿ ಆಗುತ್ತಿದ್ದರು' ಎಂದು ಪೊಲೀಸರು ಹೇಳಿದರು.



ವನಿತಾ

'ಉದ್ಯಮಿಗಳನ್ನು ಪತ್ತೆ ಹಚ್ಚುತ್ತಿದ್ದ ವನಿತಾ, ಮೊದಲು ನಟಿ ಎಂದು ಪರಿಚಯಿಸಿಕೊಂಡು. ಬಳಿಕ ಸ್ನೇಹ ಗಳಿಸುತ್ತಿದ್ದರು. ಹಣ ನೀಡಿದವರು ವಾಪಸ್ ಕೇಳಿದಾಗ ಪ್ರತಿಕ್ರಿಯೆ ನೀಡುತ್ತಿರಲಿಲ್ಲ' ಎಂದು ಪೊಲೀಸರು ಹೇಳಿದರು. ವನಿತಾ ವಿರುದ್ಧ ಗೋವಿಂದರಾಜ ನಗರ, ಜ್ಞಾನಭಾರತಿ ಪೊಲೀಸ್ ಠಾಣೆಗಳಲ್ಲಿಯೂ ಇದೇ ಮಾದರಿ ಪ್ರಕರಣಗಳು ದಾಖಲಾಗಿವೆ. ಆರೋಪಿ ಇನ್ನೂ ಯಾರಿಗೆಲ್ಲಾ ವಂಚಿಸಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದಿದ್ದಾರೆ.

75,487 ಪ್ರಕರಣ ಇತ್ಯರ್ಥ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ಅವಕಾಶ ಕಲ್ಪಿಸಿದ್ದು, ಎರಡು ದಿನದಲ್ಲಿ ₹ 2.24 ಕೋಟಿ ದಂಡ ಸಂಗ್ರಹವಾಗಿದೆ. ಭಾನುವಾರ– ಸೋಮವಾರ 75,487 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಪೊಲೀಸರು ಹೇಳಿದರು.

ಅಬಕಾರಿ ಕಾಯ್ದೆ ಉಲ್ಲಂಘನೆ: 3 ಪ್ರಕರಣ ದಾಖಲು

ಬೆಂಗಳೂರು: ಉತ್ತರ ವಿಭಾಗದ ಪೊಲೀಸರು ಕಾರ್ಯಾಚರಣೆ ನಡೆಸಿ, ಅಬಕಾರಿ ಕಾಯ್ದೆ ಉಲ್ಲಂಘಿಸಿದವರ ವಿರುದ್ಧ ಮೂರು ಪ್ರಕರಣ ದಾಖಲಿಸಿದ್ದಾರೆ.

ಸೋಮವಾರ ಬೆಳಿಗ್ಗೆ 10ರಿಂದ 13 ಠಾಣಾ ವ್ಯಾಪ್ತಿಯ 69 ವೈನ್ ಶಾಪ್, 64 ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮೇಲೆ ವಿಶೇಷ ತಂಡಗಳು ದಾಳಿ ನಡೆಸಿವೆ. ಆ ಪೈಕಿ ನಿಯಮ ಉಲ್ಲಂಘಿಸಿದ ಮೂರು ಮಳಿಗೆಯ ಮಾಲೀಕರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಸುಲಿಗೆ ಪ್ರಕರಣ: ಇಬ್ಬರ ಬಂಧನ

ಬೆಂಗಳೂರು: ರಸ್ತೆಯಲ್ಲಿ ತೆರಳುವ ದ್ವಿಚಕ್ರ ವಾಹನ ಸವಾರರನ್ನು ಅಡ್ಡಗಟ್ಟಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದ ಇಬ್ಬರನ್ನು ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ ಹಳ್ಳಿಯ ಮೊಹಮ್ಮದ್ ನಯಿಂ (20), ಸೈಯದ್ ವಸೀಂ (26) ಬಂಧಿತರು ಎಂದು ಪೊಲೀಸರು ಹೇಳಿದರು.

ಸಾರ್ವಜನಿಕರಿಂದ ಸುಲಿಗೆ ಮಾಡಿದ್ದ ಹಣ ಹಾಗೂ ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಅಮೃತಹಳ್ಳಿಯ ನಿವಾಸಿ ಕೃಷ್ಣಸ್ವಾಮಿ (70) ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಸಾರಾಯಿಪಾಳ್ಯದ ಹಾಲಿನ ಡೇರಿ ಬಳಿಯ ರಸ್ತೆಯಲ್ಲಿ ಕೃಷ್ಣಸ್ವಾಮಿ ನಡೆದು ತೆರಳುತ್ತಿದ್ದರು. ಸ್ಕೂಟರ್‌ನಲ್ಲಿ ಬಂದಿದ್ದ ಆರೋಪಿಗಳು, ದೂರುದಾರರಿಗೆ ಚಾಕು ತೋರಿಸಿ ಬೆದರಿಸಿ ಜೇಬಿನಲ್ಲಿದ್ದ ನಗದು ಕಸಿದುಕೊಂಡು ಪರಾರಿ ಆಗಿದ್ದರು.



ಮೊಹಮ್ಮದ್ ನಯಿಂ



ಸೈಯದ್ ವಸೀಂ

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದಾಗ, ಆರೋಪಿಗಳು ಡಿಜೆ ಹಳ್ಳಿ ನಿವಾಸಿಗಳು ಎಂಬುದು ಗೊತ್ತಾಯಿತು. ಡಿಜೆ ಹಳ್ಳಿ ಮಸೀದಿ ಬಳಿ ಪೊಲೀಸರು ಗಸ್ತು ನಡೆಸುತ್ತಿದ್ದ ವೇಳೆ, ಇಬ್ಬರು ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿದ್ದರು. ವಿಚಾರಣೆಗೆ ನಡೆಸಿದಾಗ ಸುಲಿಗೆಕೋರರು ಎಂಬುದು ಪತ್ತೆ ಆಯಿತು ಎಂದು ಪೊಲೀಸರು ಹೇಳಿದರು.

ಸಿದ್ದರಾಮಯ್ಯ ಸೇರಿದಂತೆ ಎಲ್ಲ ಕಾಂಗ್ರೆಸ್ ನಾಯಕರಿಂದ ಜಾಣಮೌನ: ಎಚ್‌ಡಿಕೆ ಆಕ್ಷೇಪ

ವಿರೋಧ- ಸಮರ್ಥನೆ: ಕಾಂಗ್ರೆಸ್ ನಡೆಗೆ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡದಿ ಟೌನ್ ಶಿಪ್ ಯೋಜನೆಯನ್ನು 2006ರಲ್ಲಿ ಪ್ರಸ್ತಾಪಿಸಿದಾಗ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು ವಿರೋಧ ವ್ಯಕ್ತಪಡಿಸಿದ್ದರು. ಎಚ್.ಕೆ.ಪಾಟೀಲ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಸತ್ಯಶೋಧನಾ ಸಮಿತಿ ರಚಿಸಿತ್ತು. ಸತ್ಯಶೋಧನಾ ವರದಿ ಎಲ್ಲಿದೆ ಎನ್ನುವುದೇ ಯಕ್ಷಪ್ರಶ್ನೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಅಂದು ರೈತರು, ಬಡವರು, ಫಲವತ್ತಾದ ಭೂಮಿ, ಅರಣ್ಯ ಪ್ರದೇಶ ಮತ್ತಿತರ ಅಂಶಗಳ ಆಧಾರದಲ್ಲಿ ಕಾಂಗ್ರೆಸ್ ನಾಯಕರು ಭಾರಿ ವಿರೋಧ ಮಾಡಿದ್ದರು. ವೀರಾವೇಷದ ಮಾತುಗಳನ್ನು ಆಡಿದ್ದರು. ಕಾಂಗ್ರೆಸ್ ರಚಿಸಿದ್ದ ಸತ್ಯಶೋಧನಾ ಸಮಿತಿಯು ಬಿಡದಿ, ಸೋಲೂರು, ಕಸಬಾ, ಹೊಸಕೋಟೆ ಮೊದಲಾದ ಗ್ರಾಮಗಳ ವ್ಯಾಪ್ತಿಯಲ್ಲಿ ಸತ್ಯಶೋಧನೆ ನಡೆಸಿತ್ತು. ಆ ವರದಿಯ ಬಗ್ಗೆ ಮತ್ತು ಕಾಂಗ್ರೆಸ್ ನಾಯಕರ ದ್ವಂದ್ವ ನಿಲುವುಗಳ ಬಗ್ಗೆ ಸದನದಲ್ಲಿ ಮೂರು ದಿನಗಳು ಚರ್ಚೆ ನಡೆದಿತ್ತು' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ ಅವರು ಅಂದಿನ ಸದನದ ಕಾರ್ಯಕಲಾಪಗಳ ದಾಖಲೆ ಬಿಡುಗಡೆ ಮಾಡಿದರು.

'ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಸೇರಿದಂತೆ ಎಲ್ಲಾ ಕಾಂಗ್ರೆಸ್ ನಾಯಕರು ಈಗ ಜಾಣಮೌನ ವಹಿಸಿದ್ದಾರೆ. ಸತ್ಯಶೋಧನಾ ಸಮಿತಿ ರಚನೆ ಮತ್ತು ಕಲಾಪದಲ್ಲಿ ಸುದೀರ್ಘವಾಗಿ ಮಾತನಾಡಿದ್ದ ಸಿದ್ದರಾಮಯ್ಯ ಅವರು ತಮ್ಮ ಪಕ್ಷದ ಸರ್ಕಾರ ನಡೆಸುತ್ತಿರುವ ರೈತ ವಿರೋಧಿ ಯೋಜನೆಯನ್ನು ತಡೆಯದೇ ಇರುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ರಿಯಲ್ ಎಸ್ಟೇಟ್ ದುರಾಸೆಯಿಂದ ಮುಗ್ಧ ರೈತರ ಫಲವತ್ತಾದ ಭೂಮಿಯನ್ನು ಕಸಿದುಕೊಂಡು ದಂಧೆಕೋರರಿಗೆ ನೀಡಲು ರಾಜ್ಯ ಸರ್ಕಾರವೇ ಮಧ್ಯವರ್ತಿಗಳ ಕೆಲಸ ಮಾಡುತ್ತಿದೆ. ಈಗ ಸರ್ಕಾರದ ನೇತೃತ್ವ ವಹಿಸಿರುವ ಶಿವಕುಮಾರ್ ಅವರೇ ಬಿಡದಿ ಟೌನ್‌ಶಿಪ್ ಯೋಜನೆಗೆ ವಿಧಾನಸಭೆ ಕಲಾಪದಲ್ಲಿಯೇ ವಿರೋಧ ವ್ಯಕ್ತಪಡಿಸಿದ್ದರು. ಈಗ ಅವರೇ ಯೋಜನೆ ಕಾರ್ಯಗತ ಮಾಡಲು ಪಣತೊಟ್ಟಿದ್ದಾರೆ. ಅವರು ಒಮ್ಮೆ 2007ರ ಕಲಾಪದ ಚರ್ಚೆ ನೆನಪು ಮಾಡಿಕೊಳ್ಳಬೇಕು. ಇಂತಹ ದ್ವಿಮುಖ ತೋರಬಾರದು' ಎಂದರು.

'ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಮಾಡಲು ಬಿಡದಿ ಸೇರಿದಂತೆ ಐದು ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಲು ನಾನೇ ಯೋಜನೆ ರೂಪಿಸಿದ್ದು ನಿಜ. 2006ನೇ ಅಕ್ಟೋಬರ್‌ನಲ್ಲಿ ಯೋಜನೆಗೆ ಅಧಿಸೂಚನೆ ಹೊರಡಿಸಲಾಯಿತು. ಕಾಂಗ್ರೆಸ್ ಹೇಳಿದಂತೆ ಎಚ್.ಡಿ. ಕುಮಾರಸ್ವಾಮಿ ಆರ್ಕಿಟೆಕ್ಟ್ ಆಫ್ ಬಿಡದಿ ಟೌನ್ ಶಿಪ್ ಎನ್ನುವುದನ್ನು ನಿರಾಕರಿಸುವುದಿಲ್ಲ. ಆದರೆ, ರೈತರ ಭೂಮಿಯನ್ನು ಕಿತ್ತುಕೊಂಡು ರಿಯಲ್ ಎಸ್ಟೇಟ್ ಮಾಡಲು ಯೋಜನೆಯನ್ನು ರೂಪಿಸಿರಲಿಲ್ಲ. ರೈತರು ಬೇಡ ಎಂದ ತಕ್ಷಣ ಯೋಜನೆ ಕೈಬಿಟ್ಟೆ. ಸದನಕ್ಕೂ ಮಾಹಿತಿ ನೀಡಿದ್ದೆ' ಎಂದರು.

'ಈಗ ಕೆಂಪು ವಲಯ ಎಂಬ ವಿಷಯ ಚರ್ಚಿಸುತ್ತಿದ್ದಾರೆ. ಈಗಲೂ ಶೇ 80ರಿಂದ ಶೇ 90ರಷ್ಟು ರೈತರು ಯೋಜನೆಗೆ ವಿರೋಧ ಮಾಡುತ್ತಿದ್ದಾರೆ. ಹಾಸನ, ಮಂಡ್ಯದಲ್ಲಿ ಮಾಡಲಿ. ಬಿಡದಿಯಲ್ಲಿ ಅತ್ಯಂತ ಫಲವತ್ತಾದ ಕೃಷಿ ಭೂಮಿ ಇದ್ದು ಅಪಾರ ಪ್ರಮಾಣದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ 4,000ಕ್ಕೂ ಹೆಚ್ಚು ರೈತರು ಆಕ್ಷೇಪ ಸಲ್ಲಿಸಿದ್ದಾರೆ. ಸರ್ಕಾರ ಒಬ್ಬ ರೈತರಿಗೂ ಉತ್ತರ ಕೊಡುವ ಸೌಜನ್ಯ ತೋರಿಸಿಲ್ಲ. ಪ್ರಜಾ ಸೇವೆ ಎಂದರೆ ಇದೇನಾ? ಯಾವ ಪುರುಷಾರ್ಥಕ್ಕೆ ಪ್ರತ್ಯೇಕ ಪ್ರಜಾಸೇವೆ ಸಚಿವಾಲಯ ಮಾಡುತ್ತೀರಿ? ಯೋಜನೆ ತಕ್ಷಣ ಕೈಬಿಡಿ' ಎಂದು ಒತ್ತಾಯಿಸಿದರು.



ಬಿಡದಿ ಟೌನ್‌ಶಿಪ್ ಕುರಿತ ಹಿಂದಿನ ದಾಖಲೆಗಳನ್ನು ಎಚ್‌.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು

'ನಿಖಿಲ್ 5 ಎಕರೆ ಬಿಟ್ಟುಕೊಡುತ್ತಾನೆ'

'ಪುತ್ರ ನಿಖಿಲ್ ಕುಮಾರಸ್ವಾಮಿ ಹೆಸರಲ್ಲಿ ಐದು ಎಕರೆ ಜಮೀನಿದೆ. ಆ ಜಮೀನನ್ನು ಆಸ್ಪತ್ರೆ, ಶಾಲೆ ಸೇರಿದಂತೆ ಸಾರ್ವಜನಿಕ ಉಪಯೋಗಕ್ಕೆ ಬಿಟ್ಟುಕೊಡೋದಾಗಿ ಹೇಳಿದ್ದಾನೆ' ಎಂದು ಕುಮಾರಸ್ವಾಮಿ ಹೇಳಿದರು.

'ಬಿಡದಿ ಟೌನ್‌ಶಿಪ್ ಯೋಜನೆ ಹಿಂಪಡೆದರೆ ತಮ್ಮ ಕುಟುಂಬದ ಹೆಸರಿನಲ್ಲಿ ಬಿಡದಿ ಬಳಿ ಇರುವ 32 ಜಮೀನನ್ನು ಬಿಟ್ಟುಕೊಡುತ್ತೇನೆ' ಎಂಬ ನಿಖಿಲ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು 'ನಿಖಿಲ್ ಖರೀದಿಸಿದ ಜಮೀನು ಬಿಟ್ಟು ಕೊಡುತ್ತಾನೆ' ಎಂದರು. ಆದರೆ, ಉಳಿದ ಜಮೀನಿನ ವಿಚಾರ ಪ್ರಸ್ತಾಪಿಸಲಿಲ್ಲ.

ನಾಗರಬಾವಿ ಬಾಡಿಗೆ ಮನೆಯಲ್ಲಿ ದಂಧೆ

'ವಿಧಾನಸೌಧ ಅಥವಾ ರಾಮನಗರ ಕಚೇರಿಯಲ್ಲಿ ಕೆಲಸಗಳು ನಡೆದರೆ ಎಲ್ಲರಿಗೂ ಗೊತ್ತಾಗುತ್ತದೆ, ಕುಮಾರಸ್ವಾಮಿಗೆ ಮಾಹಿತಿ ಹೋಗುತ್ತದೆ ಎಂಬ ಕಾರಣಕ್ಕೆ ನಾಗರಬಾವಿಯ ಬಾಡಿಗೆ ಮನೆಯಲ್ಲಿ ಕುಳಿತು ಟೌನ್‌ಶಿಪ್ ದಂಧೆ ಮಾಡುತ್ತಿದ್ದಾರೆ. ಕೆಲವು ಪುಢಾರಿಗಳು, ಕಿಂಗ್‌ಪಿನ್ ಚೇಲಾಗಳು ಸೇರಿಕೊಂಡು ವ್ಯವಹಾರ ನಡೆಸುತ್ತಿದ್ದಾರೆ' ಎಂದು ಆರೋಪಿಸಿದರು.

'ಶಿವಕುಮಾರ್ ಪಾಪದ ಕೊಡ ತುಂಬಿದೆ. ಎಲ್ಲವನ್ನೂ ಜನರು ನೋಡುತ್ತಿದ್ದಾರೆ. ಶಾಸ್ತಿಯಾಗುವ ಕಾಲ ಸನಿಹದಲ್ಲಿದೆ. ನೈಸ್ ರಸ್ತೆ ಬಳಿ ಶೋಭಾ ಹೆಸರಿನ ದೊಡ್ಡ ಅಪಾರ್ಟ್‌ಮೆಂಟ್‌ಗಳು ತಲೆ ಎತ್ತಿವೆ. ಯಾರ ಹೆಸರಿನಲ್ಲಿ ನೈಸ್ ಕಂಪನಿಯಿಂದ ಅನುಮತಿ ಪಡೆದುಕೊಂಡಿದ್ದಾರೆ. ಆಗ ಯಾರೂ ಅವರನ್ನು ಜೈಲಿಗೆ ಕಳಿಸಲಿಲ್ಲ, ಈಗ ರೈತರ ಭೂಮಿ ಡಿನೋಟಿಫಿಕೇಶನ್ ಮಾಡಿದರೆ ಕಳಿಸುತ್ತಾರಾ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಜೈಲಿಗೆ ಹೋಗಿದ್ದರಾ?'

'ನೋಟಿಫಿಕೇಶನ್ ಆಗಿರುವ ಭೂಮಿಯನ್ನು ಡಿನೋಟಿಫಿಕೇಷನ್ ಮಾಡಿ ನಾನು ಜೈಲಿಗೆ ಹೋಗಲೇ? ಎಂದು ಮುಖ್ಯಮಂತ್ರಿ ಕೇಳುತ್ತಿದ್ದಾರೆ. ನೋಟಿಫಿಕೇಷನ್ ಮಾಡಿದವರೆಲ್ಲ ಜೈಲಿಗೆ ಹೋಗಿದ್ದಾರಾ? ಅರ್ಕಾವತಿಯಲ್ಲಿ ರೀ–ಡೂ ಮಾಡಿದ್ದ ಸಿದ್ದರಾಮಯ್ಯ ನೆಮ್ಮದಿಯಾಗಿ ಓಡಾಡಿಕೊಂಡಿದ್ದಾರೆ. ಅವರೇನು ಜೈಲಿಗೆ ಹೋಗಿದ್ದರಾ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ರೈತರ ಉದ್ಧಾರಕ್ಕಾಗಿ ಇಡೀ ಯೋಜನೆಯನ್ನೇ ಕೈಬಿಟ್ಟರೆ ಮುಖ್ಯಮಂತ್ರಿ ಏತಕ್ಕೆ ಜೈಲಿಗೆ ಹೋಗುತ್ತಾರೆ? ಇವರು ಕೇವಲ ಸಬೂಬು ಹೇಳಿಕೊಂಡು ರೈತರಿಗೆ ವಂಚಿಸುತ್ತಿದ್ದಾರೆ. ಇವರಿಗೆ ಟೌನ್ ಶಿಪ್ ಮಾಡಿ ಭೂಮಿ ಕೊಳ್ಳೆ ಹೊಡೆಯುವುದೇ ಮುಖ್ಯವಾಗಿದೆ. ರೈತರನ್ನು ಉಳಿಸಿಕೊಳ್ಳಲು ಡಿನೋಟಿಫಿಕೇಷನ್ ಮಾಡಿದರೆ ಯಾರು ಕೂಡ ಜೈಲಿಗೆ ಹೋಗುವುದಿಲ್ಲ' ಎಂದು ಸಚಿವರು ಆಕ್ರೋಶ ವ್ಯಕ್ತಪಡಿಸಿದರು.

ಪದೋನ್ನತಿ ಪರೀಕ್ಷೆ ರದ್ದು ಬೇಡ: ರೈಲ್ವೆ ನೌಕರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆಯ ಪದೋನ್ನತಿ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಲು ಅವಕಾಶ ಇಲ್ಲ ಎಂಬ ಕಾರಣಕ್ಕೆ ಪರೀಕ್ಷೆ ನಡೆಯದಂತೆ ಮಾಡಿದರೆ ಕನ್ನಡಿಗರಿಗೆ ಅನ್ಯಾಯವಾಗಲಿದೆ. ಪರೀಕ್ಷೆ ನಡೆಸಲು ಬಿಡಿ ಎಂದು ರೈಲ್ವೆಯ ಕನ್ನಡ ನೌಕರರು ತಿಳಿಸಿದ್ದಾರೆ.

ಈ ಬಗ್ಗೆ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ಅವರಿಗೆ ನೌಕರರು ಪತ್ರ ಬರೆದಿದ್ದಾರೆ.

ಹುಬ್ಬಳ್ಳಿ ವಿಭಾಗ, ಮೈಸೂರು ವಿಭಾಗಗಳಲ್ಲಿ ನಡೆಯಲಿರುವ ಪದೋನ್ನತಿ ಪರೀಕ್ಷೆಗಳಲ್ಲಿ ಹಾಜರಾಗಲಿರುವ ಪರೀಕ್ಷಾರ್ಥಿಗಳಲ್ಲಿ ಕನ್ನಡಿಗರೇ ಶೇ 90ಕ್ಕೂ ಅಧಿಕ ಇದ್ದಾರೆ. ಪರೀಕ್ಷೆ ರದ್ದಾದರೆ ಕನ್ನಡಿಗರಿಗೆ ಅನ್ಯಾಯವಾಗಲಿದೆ. ಕನ್ನಡದಲ್ಲಿ ಪರೀಕ್ಷೆ ನಡೆಸಲು ಸಂಘಟನೆಗಳು ಆಗ್ರಹಿಸುವುದರಲ್ಲಿ ತಪ್ಪಿಲ್ಲ. ಆದರೆ, ಪರೀಕ್ಷೆ ನಡೆಯದಂತೆ ಹೋರಾಟ ಮಾಡಿದರೆ ಸಮಸ್ಯೆ ಆಗಲಿದೆ ಎಂದು ನೌಕರರು ತಿಳಿಸಿದ್ದಾರೆ.

ಜೂನ್ 25ರ ರೈಲ್ವೆ ಪರೀಕ್ಷೆ ಯಾವುದೇ ಅಡೆತಡೆಗಳಿಲ್ಲದೆ ನಡೆದರೆ ಮಾತ್ರ ಮಾರ್ಚ್ 17, 18ರಂದು ರದ್ದುಗೊಂಡಿರುವ ಎಲ್ಲ ಪರೀಕ್ಷೆಗಳನ್ನು ಆದಷ್ಟು ಬೇಗನೆ ನಡೆಸುವುದಾಗಿ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಒಂದು ವೇಳೆ ಪರೀಕ್ಷೆ ನಡೆಯದೇ ಇದ್ದರೆ ಬಹುತೇಕರ ನಿಗದಿತ ವಯಸ್ಸು ದಾಟಿ ಹೋಗಲಿದೆ ಎಂದೂ ಹೇಳಿದ್ದಾರೆ.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಸದಸ್ಯರಿಂದ ಪ್ರತಿಭಟನೆ

ಬಿಡದಿ: ರೈತರ ಭೂಮಿ ರಕ್ಷಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆ ಕೈ ಬಿಟ್ಟು ರೈತರ ಭೂಮಿಯನ್ನು ರಕ್ಷಿಸಬೇಕು ಎಂದು ಆಗ್ರಹಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ವತಿಯಿಂದ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಿಡದಿ ಟೌನ್‌ಶಿಪ್ ಎಂಬ ಉಪನಗರ ನಿರ್ಮಾಣಕ್ಕೆ ಸದ್ಯಕ್ಕೆ 7482 ಎಕರೆ ಗುರುತಿಸಲಾಗಿದೆ. ಇದು 11,500 ಜನರ ಜೀವನಕ್ಕೆ ಆಧಾರವಾಗಿದೆ ಎಂಬುದನ್ನು ಸರ್ಕಾರ ಮರೆಯಬಾರದು. 518 ಎಕರೆ ಕೃಷಿ ಭೂಮಿಯ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಆರ್‌ಪಿಐ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ ಮಾತನಾಡಿ, ಇದು ಬಿಡದಿ ಭಾಗದ ರೈತರ ಬದುಕಿನ ಅಸ್ತಿತ್ವದ ಪ್ರಶ್ನೆ. ತೋಟಗಾರಿಕೆ, ಹೈನುಗಾರಿಕೆ, ರೇಷ್ಮೆ ಕೃಷಿಯ ಹಸಿರು ವಲಯವನ್ನು ಉಳಿಸಬೇಕು. ರಾಜ್ಯ ಸರ್ಕಾರ ಈ ಯೋಜನೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಭೂಸ್ವಾಧೀನಕ್ಕೆ ರೈತರ ಒಪ್ಪಿಗೆ ಇಲ್ಲದ ಕಾರಣ ಹಿಂದಿನ ಮೂವರು ಮುಖ್ಯಮಂತ್ರಿಗಳು ಈ ಯೋಜನೆಯನ್ನು ಕೈಬಿಟ್ಟಿದ್ದರು ಎಂದು ಹೇಳಿದರು.

ಸುಮಾರು ಒಂದೂವರೆ ವರ್ಷದಿಂದ ಬೈರಮಂಗಲದಲ್ಲಿ ಪ್ರತಿಭಟನೆ ನಡೆಯುತ್ತಿದ್ದರೂ ರೈತರ ಮನವೊಲಿಸುವಲ್ಲಿ ಸರ್ಕಾರ ವಿಫಲವಾಗಿದೆ. ರೈತರ ಬದುಕು, ಪರಿಸರ ಸುಸ್ಥಿರತೆಯಂತಹ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಭೀಮಸೇನೆಯ ಶಂಕರ್ ರಾಮಲಿಂಗಯ್ಯ, ದಲಿತ ಸೇನೆಯ ಬನಶಂಕರಿ ನಾಗು, ಸಮತಾ ಸೈನಿಕದಳದ ಅಂಬರೀಶ್, ಆರ್‌ಪಿಐನ ನಾಗರತ್ನ ಪಾಲ್ಗೊಂಡಿದ್ದರು.



ಬಿಡದಿ ಟೌನ್ ಶಿಪ್ ಯೋಜನೆ ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾದ ಸದಸ್ಯರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸ್ಥಾಪನೆ: 1969

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
JANATHA SEVA CO-OPERATIVE BANK LTD.,

ನಂ.24 "ಸುವರ್ಣ ಭವನ" 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104. ದೂರವಾಣಿ: 080-23300497, 23359600, 41159606. ಇ-ಮೇಲ್: jscb_ho@jscbl.bank.in, ವೆಬ್‌ಸೈಟ್: www.jscbl.bank.in

ದಿನಾಂಕ 31-03-2026 ರ ಅಂತ್ಯಕ್ಕೆ ಆಸ್ತಿ-ಜವಾಬ್ದಾರಿ ತಃಖ್ತೆ/ Balance Sheet As at 31st March 2026

ಮೊಬಲಗು ರೂ ಗಳಲ್ಲಿ / (Amount in Rs)

ವಿವರಗಳು/Particulars	ಕುಳುವಾರು ಸಂಖ್ಯೆ/ Schedule No.	ದಿನಾಂಕ31/03/2026 ಕ್ಕೆ ಇದ್ದಂತೆ /AS on 31-03-2026	ದಿನಾಂಕ31/03/2025 ಕ್ಕೆ ಇದ್ದಂತೆ / AS on 31-03-2025
ಬಂಡವಾಳ ಮತ್ತು ಜವಾಬ್ದಾರಿಗಳು / **CAPITAL LIABILITIES**			
ಷೇರು ಬಂಡವಾಳ/Capital	1	36,61,31,200.00	36,67,58,800.00
ಅಪದ್ಧನ ಮತ್ತು ಇತರೆ ನಿಧಿಗಳು / Reserves and surplus	2	1,53,29,28,180.00	1,37,22,78,784.00
ಠೇವಣಿಗಳು / Deposits	3	15,00,28,53,424.00	12,37,90,51,019.00
ಹೊಣೆಗಾರಿಕೆ / Borrowings	4		
ಇತರೆ ಜವಾಬ್ದಾರಿಗಳು ಮತ್ತು ಅವಕಾಶಗಳು/Other liabilities and provisions	5	1,06,34,06,192.00	1,10,27,23,575.00
ಶಾಖಾ ಹೊಂದಾಣಿಕೆ/Branch Adjustment		0.00	2,44,163.00
ಸುಸ್ತಿ ಸಾಲದ ಮೇಲಿನ ಬಡ್ಡಿ (ಕಾಂಟ್ರ)/Overdue Interest Reserve (As per contra)		8,61,81,211.00	11,02,29,210.00
ಒಟ್ಟು / Total		**18,05,15,00,207.00**	**15,33,12,85,551.00**
ಆಸ್ತಿಗಳು / **ASSETS**			
ಕೈಯಲ್ಲಿರುವ ನಗದು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಶಿಲ್ಕುಗಳು/ Cash and Balances with Reserve Bank of India	6	49,47,28,642.00	45,74,13,161.00
ಇತರೆ ಬ್ಯಾಂಕುಗಳ ಚಾಲ್ತಿ ಖಾತೆಯ ಶಿಲ್ಕು / Balances with other Banks and money at call and short notice	7	21,83,86,945.00	16,40,71,976.00
ಹೂಡಿಕೆಗಳು / Investments	8	7,31,24,62,974.00	6,93,46,07,807.00
ಸಾಲ ಮತ್ತು ಮುಂಗಡಗಳು / Advances	9	9,42,50,02,199.00	7,26,16,77,974.00
ಸ್ಥಿರ ಆಸ್ತಿಗಳು / Fixed Assets	10	18,96,47,096.00	19,64,37,876.00
ಇತರೆ ಆಸ್ತಿಗಳು / Other Assets	11	32,50,29,006.00	20,68,47,571.00
ಶಾಖೆಗಳ ಹೊಂದಾಣಿಕೆ/Branch Adjustment		62,263.00	0.00
ಸಾಲದ ಮೇಲಿನ ಸುಸ್ತಿ ಬಡ್ಡಿ (ಕಾಂಟ್ರ))/ Overdue Interest Reserve (As per contra)		8,61,81,082.00	11,02,29,186.00
ಒಟ್ಟು / Total		**18,05,15,00,207.00**	**15,33,12,85,551.00**
ಅನಿಶ್ಚಿತ ಹೊಣೆಗಾರಿಕೆಗಳು/Contingent liabilities	12	4,42,92,539.00	4,07,63,791.00
ಮಹತ್ವದ ಲೆಕ್ಕಪತ್ರ ನೀತಿಗಳು ಮತ್ತು ಇತರ ವಿವರಣಾತ್ಮಕ ಮಾಹಿತಿ	18		
ಖಾತೆಗಳು ಮೇಲಿನ ಟಿಪ್ಪಣಿಗಳು	19		

1 ರಿಂದ 12 ರವರೆಗಿನ ಕುಳುವಾರುಗಳು ಆಸ್ತಿ-ಜವಾಬ್ದಾರಿ ತಃಖ್ತೆಯ ಅವಿಭಾಜ್ಯ ಅಂಗವಾಗಿದೆ /Schedule 1 to 12 form an integral part of Balance sheet.

ಇದು ನಮ್ಮ ವರದಿಯಲ್ಲಿ ಉಲ್ಲೇಖಿಸಲಾದ ಆಸ್ತಿ-ಜವಾಬ್ದಾರಿ ತಃಖ್ತೆ ಆಗಿರುತ್ತದೆ./ This is the Balance Sheet referred to in our report.

ದಿನಾಂಕ: 31-03-2026 ನೇ ಸಾಲಿನ ಲಾಭ-ನಷ್ಟ ತಃಖ್ತೆ / Statement of Profit and Loss for the year ended 31st March 2026

ಮೊಬಲಗು ರೂ ಗಳಲ್ಲಿ / (Amount in Rs)

ವಿವರಗಳು/Particulars	ಕುಳುವಾರು ಸಂಖ್ಯೆ/ Schedule No.	ದಿನಾಂಕ31/03/2026 ಕ್ಕೆ ಇದ್ದಂತೆ / AS on 31-03-2026	ದಿನಾಂಕ31/03/2025 ಕ್ಕೆ ಇದ್ದಂತೆ/ AS on 31-03-2025
I. ಆದಾಯ / Income			
ಬಡ್ಡಿ ಗಳಿಸಿದ್ದು / Interest Earned	13	1,39,25,46,851.00	1,17,06,50,539.00
ಇತರೆ ಆದಾಯಗಳು / Other Income	14	3,84,80,639.00	4,58,07,963.00
ಒಟ್ಟು / Total		**1,43,10,27,490.00**	**1,21,64,58,502.00**
II. ವೆಚ್ಚಗಳು / Expenditure			
ಬಡ್ಡಿ ವ್ಯಯಿಸಲಾಗಿರುವ ವೆಚ್ಚಗಳು / Interest Expended	15	96,40,74,365.00	82,97,95,700.00
ಕಾರ್ಯಾಚರಣೆಯ ವೆಚ್ಚಗಳು / Operating Expenses	16	14,48,38,813.00	15,39,02,173.00
ಕಾಯ್ದಿರಿಸಿರುವುದು ಮತ್ತು ಆಕಸ್ಮಿಕಗಳು / Provisions and Contingencies	17	15,33,97,126.00	7,96,77,071.00
ಒಟ್ಟು / Total		**1,26,23,10,304.00**	**1,06,33,74,944.00**
III. ವಾರ್ಷಿಕ ಲಾಭ / Profit for the Year		**16,87,17,186.00**	**15,30,83,558.00**

13 ರಿಂದ 17 ರವರೆಗಿನ ಕುಳುವಾರುಗಳು ಲಾಭ-ನಷ್ಟ ತಃಖ್ತೆ ಅವಿಭಾಜ್ಯ ಅಂಗವಾಗಿದೆ/ 13 to 17 form an integral part of Statement of Profit and Loss.

ಇದು ನಮ್ಮ ವರದಿಯಲ್ಲಿ ಉಲ್ಲೇಖಿಸಲಾದ ಲಾಭ ಮತ್ತು ನಷ್ಟದ ಹೇಳಿಕೆಯಾಗಿದೆ/This is the Statement of Profit and Loss referred to in our report.

Suhedule:18 - SIGNIFICANT ACCOUNTING POLICIES:

01. **BASIS OF PREPARATION OF FINANCIAL STATEMENTS:**

1.1 The financial statements have been prepared and presented under the historical cost convention and is in accordance with the generally accepted accounting principles, statutory requirements prescribed under the Banking Regulation Act, 1949, circulars and guidelines issued by the Reserve Bank of India (RBI) from time to time, the provisions of Karnataka Co-operative Societies Act, 1959 and Rules framed there under and Accounting Standards (AS) issued by the Institute of Chartered Accountants of India (ICAI) to the extent applicable and current practices prevailing within the Banking Industry in India.

1.2 USE OF ESTIMATES: The preparation of the financial statements, in conformity with generally accepted accounting principles, requires management to make estimates and assumptions that affect the reported amounts of assets and liabilities, revenues and expenses and disclosure of contingent liabilities at the date of the financial statements. Actual results could differ from those estimates. Management believes that the estimates used in the preparation of the financial statements are prudent and reasonable. Any revisions to the accounting estimates are recognized prospectively.

02. **REVENUE RECOGNITION:**

2.1 Interest Income on Government Securities is accounted on accrual basis.

2.2 Interest Income on Fixed deposits is accounted on accrual basis.

2.3 Interest on loans and advances are accounted on accrual basis except in case of NPA accounts which are accounted on cash basis.

03. **ADVANCES:**

3.1 Advances are categorized under performing and Non-Performing Advances (NPAs) as per RBI guidelines. Further, NPAs are classified into Sub-Standard, Doubtful and Loss Assets based on the criteria stipulated by RBI.

3.2 Provisioning norms for performing and nonperforming advances are adopted as per RBI guidelines.

3.3 Advances are reflected at gross amount without netting off provisions. Provisions for nonperforming and standard advances are shown under "Provisions".

04. **INVESTMENTS:**

4.1 Investments have been presently classified under the heads a) Held to Maturity, b) Available for Sale

4.2 Investments in "Available for sale" are marked to market, on the basis of guidelines issued by the RBI. Net depreciation, if any, under each classification has been provided for, net appreciation, if any, has been ignored.

05. **FIXED ASSETS AND DEPRECIATION:**

5.1 Fixed Assets are carried at cost of acquisition including directly attributable cost for bringing the asset into use, less accumulated depreciation.

5.2 Depreciation on Fixed Assets is provided for as per the provisions of Income Tax Rules, 1962, as mentioned below: However, on Computer Hardware and Software, Depreciation is provided as per RBI Guidelines under SLM.

Nature of Asset	Method	Rate (%)
Site	NA	NIL
Building	WDV	10
Furniture & Fixtures	WDV	10
Computer Hardware	SLM	33.33
Computer Software	SLM	33.33
Vehicle	WDV	15

06. **STOCK OF STATIONERY:** Closing Stock of Stationery as at the end of the year is valued at cost.

07. **EMPLOYEE BENEFITS:**

7.1 Bank's contribution to the provident fund is recognized in the profit and loss account as per relevant rules.

7.2 Gratuity is being handled by creating trust fund with LIC. The premium demanded by LIC annually is paid and expensed off since 01/06/2007. During the year gratuity has been provided fully.

7.3 During the financial year, Bank has paid full amount of leave encashment premium as per the demand raised by LIC of India towards group leave encashment policy and the same has been charged as expense during the financial year.

Schedule:19 – Disclosers in Financial Statement- Note to Account

(1) Regulatory capital: (i) Composition of regulatory capital (Amount in ₹ crore)

Sr.No.	Particulars	Current Year	Previous Year
i)	Paid up share capital and reserves (net of deductions, if any)	34.96	35.41
ii)	Other Tier 1 capital	100.23	90.02
iii)	Tier 1 capital (i + ii)	135.19	125.43
iv)	Tier 2 capital	31.26	30.21
v)	Total capital (Tier 1 + Tier 2)	166.45	155.64
vi)	Total Risk Weighted Assets (RWAs)	891.19	653.54
vii)	Tier 1 Ratio (Tier 1 capital as a percentage of RWAs)	15.17%	19.19%
viii)	Tier 2 Ratio (Tier 2 capital as a percentage of RWAs)	3.52%	4.62%
ix)	Capital to Risk Weighted Assets Ratio (CRAR) (Total Capital as a percentage of RWAs)	18.68%	23.51%
x)	Amount of paid-up equity capital raised during the year	-0.07	5.61
xii)	Amount of Tier 2 capital raised during the year	1.15	1.88

(ii) Draw down from Reserves - NIL

(2) Asset liability management: (i) Maturity pattern of certain items of assets and liabilities (Amount in ₹ crore)

	Day 1	2 to 7 days	8 to 14 days	15 to 30 days	31 days to 2 months	Over 2 months and to 3 months	Over 3 months and up to 6 Months	Over 6 months and up to 1 year	Over 1 year and up to 3 years	Over 3 years and up to 5 years	Over 5 years	Total
Deposits	10.76	25.89	34.71	63.71	69.81	71.51	231.16	364.65	567.35	36.54	24.19	1500.28
Advances	2.94	0.57	1.44	2.90	8.64	8.62	34.80	65.62	43.47	102.50	671.00	942.50
Investments	0.00	5.00	00.00	5.00	00.00	20.00	10.80	128.31	0.00	89.14	473.00	731.25
Borrowings	-	-	-	-	-	-	-	-	-	-	-	-

(3) Investments: (i) Composition of investment portfolio AS at 31.03.2026 (Amount in Crore)

	Investments in India						
	Government Securities	Other Approved Securities	Shares	Debentures and Bonds	Subsidiaries and / or joint venture	Others	Total investments in India
Held to Maturity							
Gross	166.83	5.77				172.52	345.12
Less: Provision investments (NPI) for non-performing	0.00	4.42				0.00	4.42
Net	166.83	1.35				172.52	340.70
Available for Sale							
Gross	386.12						386.12
Less: Provision for depreciation and NPI	21.07						21.07
Net	365.04						365.04
Held for Trading							
Gross							
Less: Provision for depreciation and NPI							
Net							
Total Investments	552.95	5.77				172.52	731.24
Less: Provision investments for non-performing	0.00	0.00				0.00	0.00
Less: Provision for depreciation and NPI	21.07	4.42				0.00	25.49
Net	531.88	1.35				172.52	705.75

AS at 31.03.2025 (Amount in Crore)

	Investments in India						
	Government Securities	Other Approved Securities	Shares	Debentures and Bonds	Subsidiaries and / or joint venture	Others	Total investments in India
Held to Maturity							
Gross	216.86	5.52				183.16	405.54
Less: Provision for non-performing investments (NPI)	0.00	4.42				0.00	4.42
Net	216.86	1.10				183.16	401.12
Available for Sale							
Gross	287.91	-				-	287.91
Less: Provision for depreciation and NPI	16.47	-					16.47
Net	271.44	-					271.44
Held for Trading							
Gross							
Less: Provision for depreciation and NPI							
Net							
Total Investments	504.78	5.52				183.16	693.46
Less: Provision for non-performing investments	0.00	0.00				0.00	0.00
Less: Provision for depreciation and NPI	16.47	4.42				0.00	20.89
Net	488.31	1.10				183.16	672.57

(ii) Movement of provisions for depreciation on investments and investment fluctuation reserve (IFR) (Amount in ₹ crore)

Particulars	Current Year	Previous Year
i) Movement of provisions held towards depreciation on investments		
a) Opening balance	**16.47**	**16.47**
b) Add: Provisions made during the year	**4.60**	**0.00**
c) Less: Write off / write back of excess provisions during the year	**0.00**	**0.00**
d) Closing balance	**21.07**	**16.47**
ii) Movement of Investment Fluctuation Reserve		
a) Opening balance	**18.79**	**16.85**
b) Add: Amount transferred during the year	**2.08**	**1.94**
c) Less: Drawdown	**0.00**	**0.00**
d) Closing balance	**20.87**	**18.79**
iii) Closing balance in IFR as a percentage of closing balance of investments13 in AFS and HFT/Current category	**5.41%**	**6.53%**

(iii) Sale and transfers to / from HTM category- NIL

(iv) Non-SLR investment portfolio : (a) Non-performing non - SLR investments (Amount in ₹ crore)

Sr. No.	Particulars	Current Year	Previous Year
a)	Opening balance	5.52	5.52
b)	Additions during the year since 1st April	0.00	0.00
c)	Reductions during the above period	0.00	0.00
d)	Closing balance	5.52	5.52
e)	Total provisions held	4.42	4.42

(b) Issuer composition of non-SLR investments (Amount in ₹ crore)

Sr. No.	Issuer	Amount		Extent of Private Placement		Extent of 'Below Investment Grade' Securities		Extent of 'Unrated' Securities		Extent of 'Unlisted' Securities	
(1)	(2)	(3)		(4)		(5)		(6)		(7)	
		Current year	Previous Year	Current year	Previous Year	Current year	Previous Year	Current year	Previous Year	Current year	Previous Year
a)	PSUs										
b)	FIs										
c)	Banks			5.52	5.52						
d)	Private Corporates			0.25							
e)	Provision held towards depreciation			4.42	4.42						
	Total			**5.77**	**5.52**						

(v) Repo transactions (in face value and market value terms) - NIL

(vi) Government Security Lending (GSL) transactions (in market value terms) -NIL

(4) Asset quality: (i) Classification of advances and provisions held (Amount in Crores)

Particulars	Standard	Non-Performing				Total
	Total Standard Advances	Sub-standard	Doubtful	Loss	Total Non-Performing Advances	
Gross Standard Advances and NPAs						
Opening Balance	669.86	9.60	37.13	9.58	56.31	726.17
Add: Additions during the year	[redacted]					
Less: Reductions during the year*	[redacted]					
Closing balance	905.47	14.74	12.89	9.40	37.03	942.50
*Reductions in Gross NPAs due to:	[redacted]					
i) Upgradation	[redacted]				11.46	11.46
ii) Recoveries (excluding recoveries from upgraded accounts)	[redacted]				17.08	17.08
iii) Technical / Prudential Write-offs	[redacted]				0.0	0.0
iv) Write-offs other than those under (iii) above	[redacted]				0.0	0.0
Provisions (excluding Floating Provisions)						
Opening balance of provisions held	4.90	7.31	61.72	11.54	80.57	85.47
Add: Fresh provisions made during the year	[redacted]				2.25	2.45
Less: Excess provision reversed/ Write-off loans	[redacted]				0.0	0.0
Closing balance of provisions held	5.10	61.28	12.14	9.40	82.82	87.92
Net NPAs						
Opening Balance	0	0.0	0.0	0.0	0.0	0.0
Add: Fresh additions during the year	[redacted]					
Less: Reductions during the year	[redacted]					
Closing Balance	0	0.0	0.0	0.0	0.0	0.0
Floating Provisions	[redacted]					0.0
Opening Balance	[redacted]					
Add: Additional provisions made during the year	[redacted]					
Less: Amount drawn down26 during the year	[redacted]					
Closing balance of floating provisions	[redacted]					0.0
Technical write-offs and the recoveries made thereon						
Opening balance of Technical/ Prudential written-off accounts	[redacted]					0.0
Add: Technical/ Prudential write-offs during the year	[redacted]					
Less: Recoveries made from previously technical/ prudential written-off accounts during the year	[redacted]					
Closing balance	[redacted]					0.0

Ratios (in Percent)	Current Year	Previous Year
Gross NPA to Gross Advances	3.93%	7.75%
Net NPA to Net Advances	0.00%	0.00%
Provision coverage ratio	223.67%	143.08%

(ii) Sector-wise advances and Gross NPAs (Amount in Crores)

Sr. No	Sector*	Current Year			Previous Year		
		Outstanding Total Advances	Gross NPAs	Percentage of Gross NPAs to Total Advances in that Sector	Outstanding Total Advances	Gross NPAs	Percentage of Gross NPAs to Total Advances in that Sector
i)	**Priority Sector**						
a)	Agriculture and allied activities	**9.92**	**0.00**	**0.00%**	**5.72**	**0.00**	**0.00%**
b)	Advances to industries sector eligible as priority sector lending	**298.29**	**4.64**	**1.56%**	**228.31**	**2.05**	**0.90%**
c)	Services	**56.49**	**0.00**	**0.00%**	**22.98**	**8.50**	**36.99%**
d)	Other Loans including Personal loans	**65.73**	**11.69**	**17.78%**	**66.85**	**17.66**	**26.42%**
	Subtotal (i)	**430.43**	**16.33**	**3.79%**	**323.86**	**28.21**	**8.71%**
ii)	**Non-priority Sector**						
a)	Agriculture and allied activities	**0.11**	**0.00**	**0.00%**	**0.00**	**0.00**	**0.00%**
b)	Industry	**0.00**	**0.00**	**0.00%**	**0.00**	**0.00**	**0.00%**
c)	Services	**64.81**	**2.03**	**3.13%**	**12.33**	**0.00**	**0.00%**
d)	Other Loans including Personal loans	**447.15**	**18.67**	**4.17%**	**389.98**	**28.10**	**7.21%**
	Subtotal (i)	**512.07**	**20.70**	**4.04%**	**402.31**	**28.10**	**6.98%**
	Total (i+ii)	**942.50**	**37.03**	**3.93%**	**726.17**	**56.31**	**7.75%**

(iii) Overseas assets, NPAs and revenue - NIL

(iv) Details of accounts subjected to restructuring (restructuring as defined as per applicable regulations) -NIL

(v) Divergence in asset classification and provisioning -NIL

(vi) Disclosure of transfer of loan exposure- NIL

(vii) Non – Fund Based Credit Facilities - NIL

(viii) Fraud accounts -NIL

(ix) Disclosures related to Project Finance -NIL

(x) Disclosure under resolution framework for COVID-19-related Stress (Amounts in ₹ crore)

Type of borrower	Exposure to accounts classified as Standard consequent to implementation of resolution plan– Position as at the end of the previous year End (A)	Of (A), aggregate debt that slipped into NPA during the year	Of (A) amount written off during the year	Of (A) amount paid by the borrowers during the Financial year	Exposure to accounts classified as Standard consequent to implementation of resolution plan – Position as at the end of this half-year
Personal Loans	0.00	-	-	0.00	0.00
Corporate persons*	0.00	-	-	0.00	0.00
Of which MSMEs	22.59	-	-	14.34	8.25
Others	102.25	-	-	45.07	57.18
Total	124.84	-	-	59.41	65.43

(5) Exposures : (i) Exposure to real estate sector (Amount in ₹ crore)

Category	Current year	Previous Year
a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	**114.99**	**97.03**
b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits	**50.25**	**52.03**
Total Exposure to Real Estate Sector	**165.24**	**149.06**

(ii) Exposure to capital market – NIL

(iii) Risk category-wise country exposure - NIL

(iv) Unsecured advances (Amounts in ₹ crore)

Particulars	Current Year	Previous Year
Total unsecured advances of the bank	1.02	1.24
Out of the above, amount of advances for which intangible securities such as charge over the rights, licenses, authority, etc. have been taken	0.00	0.00
Estimated value of such intangible securities	0.00	0.00

(v) Factoring exposures: NIL

(vi) Unhedged foreign currency exposure: NIL

(vii) Loans against gold and silver collateral: (a) Details of loans extended against eligible gold and silver collateral

Particulars	Loan outstanding		Average ticket size (₹ crore)	Average LTV ratio	Gross NPA (%)
	₹ crore	As % of Total Loans			
1. Opening balance of the FY [(a)+(b)]	15.69	2.16%	6.04	68.10%	0.0%
(a) Consumption loans	15.69	2.16%	6.04	68.10%	0.0%
of which bullet repayment loans	3.12	0.43%	0.01	64.91%	
(b) Income generating loans					
2. New loans sanctioned and disbursed during the FY [(c)+(d)]					NA
(c) Consumption loans	56.20	5.96%			NA
of which bullet repayment loans	6.88				NA
(d) Income generating loans					NA
3. Renewals sanctioned and disbursed during the FY	-				NA
4. Top-up loans sanctioned and disbursed during the FY	-				NA
5. Loans repaid during the FY [(e)+(f)]				NA	NA
(e) Consumption loans	30.05	3.19%		NA	NA
of which bullet repayment loans	5.51			NA	NA
(f) Income generating loans				NA	NA
6. Non-Performing Loans recovered during the FY [(g) + (h)]	0.09			NA	NA
(g) Consumption loans	0.09			NA	NA
of which bullet repayment loans				NA	NA
(h) Income generating loans				NA	NA
7. Loans written off during the FY [(i) + (j)]				NA	NA
(i) Consumption loans				NA	NA
of which bullet repayment loans				NA	NA
(j) Income generating loans				NA	NA
8. Closing balance at the end of FY [(k) + (l)]	41.84	4.44%	0.05	67.51%	0.0%
(k) Consumption loans	41.84	4.44%	0.05	67.51%	0.0%
of which bullet repayment loans	4.50	0.48%	0.01	63.60%	
(l) Income generating loans					

(b) Details of gold and silver collateral and auctions- NIL

[1][(viii) Exposures to Related Parties -NIL

(6) Concentration of deposits, advances, exposures and NPAs: (i) Concentration of deposits (Amount in ₹ crore)

Particulars	Current Year	Previous Year
Total deposits of the twenty largest depositors	231.41	128.87
Percentage of deposits of twenty largest depositors to total deposits of the bank	15.42%	10.41%

(ii) Concentration of advances* (Amount in ₹ crore)

Particulars	Current Year	Previous Year
Total advances to the twenty largest borrowers	245.98	149.64
Percentage of advances to twenty largest borrowers to total advances of the bank	26.10%	20.61%

(iii) Concentration of exposures** (Amount in ₹ crore)

Particulars	Current Year	Previous Year
Total exposure to the twenty largest borrowers / customers	265.93	198.53
Percentage of exposures to the twenty largest borrowers / customers to the total exposure of the bank on borrowers / customers	20.83%	19.01%

**Exposures shall be computed as per applicable RBI regulation.

(iv) Concentration of NPAs (Amount in ₹ crore)

Particulars	Current Year	Previous Year
Total Exposure to the top twenty NPA accounts	36.45	54.07
Percentage of exposures to the twenty largest NPA exposure to total Gross NPAs.	98.43%	96.02%

(7) Derivatives -NIL

(8) Transfers to Depositor Education and Awareness Fund (DEA Fund) (Amount in ₹ crore)

Sr. No.	Particulars	Current Year	Previous Year
i)	Opening balance of amounts transferred to DEA Fund	3.18	2.75
ii)	Add: Amounts transferred to DEA Fund during the year	0.35	0.47
iii)	Less: Amounts reimbursed by DEA Fund towards claims	0.47	0.04
iv)	Closing balance of amounts transferred to DEA Fund	3.06	3.18

(9) Disclosure of complaints

Sr. No		Particulars	Current Year	Previous Year
	Complaints received by the bank from its customers			
1.		Number of complaints pending at beginning of the year	0	0
2.		Number of complaints received during the year	0	0
3.		Number of complaints disposed during the year	0	0
	3.1	Of which, number of complaints rejected by the bank	0	0
4.		Number of complaints pending at the end of the year	0	0
	Maintainable complaints received by the bank from Office of Ombudsman			
5.		Number of maintainable complaints received by the bank from Office of Ombudsman	1	3
	5.1.	Of 5, number of complaints resolved in favour of the bank by Office of Ombudsman	1	3
	5.2	Of 5, number of complaints resolved through conciliation / mediation / advisories issued by Office of Ombudsman	0	0
	5.3	Of 5, number of complaints resolved after passing of Awards by Office of Ombudsman against the bank	0	0
6.		Number of Awards unimplemented within the stipulated time (other than those appealed)	0	0

(i) Top five grounds of complaints received by the bank from customers

Grounds of complaints, (i.e. complaints relating to)	Number of complaints pending at the beginning of the year	Number of complaints received during the year	% increase / decrease in the number of complaints received over the previous year	Number of complaints pending at the end of the year	Of 5, number of complaints pending beyond 30 days
1	2	3	4	5	6
	Current Year				
Ground - 1	0	42	90.91%	0	0
Ground - 2					
Ground - 3					
Ground - 4					
Ground - 5					
Others	0	1	–66.67%		
Total	0	43	72.00%	0	0
	Previous Year				
Ground - 1	1	22	-71.79%	0	0
Ground - 2					
Ground - 3					
Ground - 4					
Ground - 5					
Others	0	3	200.00%	0	0
Total	1	25	-68.35%	0	0

(10) Disclosure of penalties imposed by the Reserve Bank of India- NIL

(11) Other Disclosures : (i) Business ratios

Particular	Current Year	Previous Year
i) Interest Income as a percentage to Working Funds[1]	8.28%	7.64%
ii) Non-interest income as a percentage to Working Funds[1]	0.23%	0.29%
iii) Cost of Deposits	7.00%	6.70%
iv) Net Interest Margin[2]	2.55%	2.23%
v) Operating Profit as a percentage to Working Funds[1]	1.88%	1.50%
vi) Return on Assets[3]	1.37%	1.47%
vii) Business (deposits plus advances) per employee[4] (in ₹ crore)	33.46	26.19
viii) Profit per employee (in ₹ crore)	0.31	0.30

(ii) Bancassurance business (Amount in ₹ crore)

Particulars	Current Year	Previous Year
Total exposure to the twenty largest borrowers / customers	0.02	0.02

(iii) Marketing and distribution –NIL

(iv) Disclosures regarding Priority Sector Lending Certificates (PSLCs) (Amount in ₹ crore)

Category of PSLC	Purchase Amount	Sold Amount	Premium Paid	Premium Received
PSLC General	**320.00**	**-**	**0.03**	**-**
PSLC Small and Marginal Farmers	**20.00**	**22.00**	**0.55**	**0.63**
Total	**340.00**	**22.00**	**0.58**	**0.63**

(v) Provisions and contingencies (Amount in ₹ crore)

Provision debited to Profit and Loss Account	Current Year	Previous Year
i) Provisions for Standard Assets	0.20	0.00
ii) Provision towards NPA	2.25	1.94
iii) Provision made towards Income tax	6.18	5.38
iv) Provision towards IT Asset	1.50	0.50
v) Provision towards Staff Gratuity and Leave Encashment Premium	1.00	0.30
vi) Provision towards Investment Depreciation Reserves	4.60	0.00
Total	15.73	8.12

(vi) Payment of DICGC Insurance Premium (Amount in Crores)

Sl No	Particulars	Current Year	Previous Year
i)	Payment of DICGC Insurance Premium	**1.56**	**1.42**
ii)	Arrears in payment of DICGC premium	**0.0**	**0.00**

(vii) Disclosure of facilities granted to directors and their relatives
Bank has not provided any fund or non-fund (guarantees, letters of credit, etc.) facilities to the Bank directors, their relatives, companies or firms in which they are interested except Loan against FD's.

ರಾಮ ರಾಜ್ ಮತ್ತು ಕಂಪನಿ ಪರವಾಗಿ, / For Ramraj & Co,
ಸನ್ನದು ಲೆಕ್ಕಪರಿಶೋಧಕರು / Chartered Accountants
ಸಂಸ್ಥೆಯ ನೋಂದಣಿ ಸಂಖ್ಯೆ:002839S / FRN No: 002839S

(ಸಿಎ. ಲಸಿತ್ ಜಿ ವೆಂಕಟ್) / (CA Lasith G Venkat)
ಪಾಲುದಾರರು / Partner
ಸದಸ್ಯತ್ವ ಸಂಖ್ಯೆ: 269288 / Membership No: 269288

ಲೀಲಾವತಿ.ಆರ್/ Leelavathi R
ಸಹಾಯಕ ವ್ಯವಸ್ಥಾಪಕರು/Assistant Manager

ಭಾಗ್ಯ.ಎಸ್/ Bhagya.S
ಮುಖ್ಯಕಾರ್ಯನಿರ್ವಾಹಣಾಧಿಕಾರಿ/ Chief Executive Officer

ಸ್ಥಳ : ಬೆಂಗಳೂರು/Place: Bangalore
ದಿನಾಂಕ : 21/05/2026 Date:21/05/2026

ರಾಜಗೋಪಾಲ್ ಹೆಗ್ಡೆ/ Rajgopal Hegde
ವೃತ್ತಿಪರ ನಿರ್ದೇಶಕರು/Professional Director

ಡಾ. ವೆಂಕಟೇಶ್ ಮೂರ್ತಿ ಪಿ.ಎಲ್./ Dr. Venkatesh Murthy P.L
ಉಪಾಧ್ಯಕ್ಷರು/ Vice President

ಗೋಪಾಲ್ ಎಚ್.ಸಿ./ Gopal H C
ಅಧ್ಯಕ್ಷರು/ President

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ವಿರೋಧ

ಗುತ್ತಿಗೆದಾರರ ಸಂಘದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ
• ಸರ್ಕಾರದ ವಿರುದ್ಧ ಆಕ್ರೋಶ • ಬೇಡಿಕೆ ಈಡೇರಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ವಿತರಣೆ ಖಾಸಗೀಕರಣ ಮಾಡುವುದನ್ನು ನಿಲ್ಲಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಗುತ್ತಿಗೆದಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ನ್ಯಾಯಯುತ ಬೇಡಿಕೆಯನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ವಿದ್ಯುತ್ ಕ್ಷೇತ್ರ ಖಾಸಗೀಕರಣ ಗೊಳಿಸಿದರೆ ಅನೇಕ ಸಮಸ್ಯೆ ಎದುರಿಸಬೇಕಾಗುತ್ತದೆ. ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಮುಂದುವರಿಕೆಗೆ ತೊಂದರೆ ಉಂಟಾಗುತ್ತದೆ ಎಂದು ಗುತ್ತಿಗೆದಾರರು ಆತಂಕ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಪಂಪ್‌ಸೆಟ್‌ಗೆ ನೀಡುವ ಉಚಿತ ವಿದ್ಯುತ್ ಸೌಲಭ್ಯ ರದ್ದಾಗುವ ಅಪಾಯ
- ಕೃಷಿ ಕ್ಷೇತ್ರಕ್ಕೆ ದೊಡ್ಡ ಹೊಡೆತ: ಆತಂಕ
- ರೈತರ ಮೇಲೆ ಬೀಳಲಿದೆ ಹೆಚ್ಚುವರಿ ಹೊರೆ

ಸಂಘದ ರಾಜ್ಯ ಅಧ್ಯಕ್ಷ ಸಿ.ರಮೇಶ್ ಮಾತನಾಡಿ, ‘ಕೃಷಿ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿರುವ ಉಚಿತ ಮತ್ತು ರಿಯಾಯಿತಿ ವಿದ್ಯುತ್ ಸೌಲಭ್ಯಗಳು ಕಡಿಮೆಯಾಗುವ ಹಾಗೂ ರದ್ದಾಗುವ ಅಪಾಯವಿದೆ. ಇದರಿಂದ ಕೃಷಿ ಕ್ಷೇತ್ರಕ್ಕೆ ದೊಡ್ಡ ಹೊಡೆತ ಬೀಳಲಿದೆ. ವಿದ್ಯುತ್ ವೆಚ್ಚ ಹೆಚ್ಚುವುದರಿಂದ ಕೃಷಿ ಚಟುವಟಿಕೆಗಳ ಖರ್ಚು ಹೆಚ್ಚಾಗಿ ರೈತರ ಮೇಲೆ ಹೆಚ್ಚುವರಿ ಭಾರ ಬೀಳುತ್ತದೆ’ ಎಂದು ಹೇಳಿದರು.

‘ಗ್ರಾಮೀಣ ಭಾಗಗಳ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ದುರ್ಬಲ ವರ್ಗಗಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀಳುತ್ತದೆ. ಅಲ್ಲದೇ ವಿದ್ಯುತ್ ಕ್ಷೇತ್ರದ ಸಿಬ್ಬಂದಿ, ಗುತ್ತಿಗೆದಾರರು ಹಾಗೂ ಸಂಬಂಧಿತ ವಲಯಗಳಲ್ಲಿ ಕಾರ್ಯನಿರ್ವಹಿಸುವ ಸಾವಿರಾರು ಜನರ ಉದ್ಯೋಗ ಭದ್ರತೆಗೆ ಧಕ್ಕೆಯಾಗುವ ಸಾಧ್ಯತೆ ಇದೆ’ ಎಂದು ಎಚ್ಚರಿಸಿದರು.

‘ಸಾರ್ವಜನಿಕ ಹಿತಕ್ಕಿಂತ ಲಾಭದ ಉದ್ದೇಶ ಹೆಚ್ಚಾಗಿ ಸೇವಾ ಗುಣಮಟ್ಟ ಕುಸಿಯುವುದರ ಜತೆಗೆ ವಿದ್ಯುತ್ ಬಿಲ್‌ಗಳು, ಸೇವಾ ಶುಲ್ಕಗಳು ಹೆಚ್ಚಾಗಿ ಗ್ರಾಹಕರಿಗೆ ಹೆಚ್ಚುವರಿ ಭಾರ ಬೀಳಲಿದೆ’ ಎಂದರು.

‘ಪರವಾನಗಿ ಪಡೆದ ವಿದ್ಯುತ್ ಗುತ್ತಿಗೆದಾರರಿಂದಲೇ ವಿದ್ಯುತ್ ಕಾಮಗಾರಿ ನಿರ್ವಹಿಸಬೇಕೆಂಬ ಆದೇಶವನ್ನು ಮುಂದುವರಿಸಬೇಕು. ವಿದ್ಯುತ್ ಗುತ್ತಿಗೆದಾರರು ಮಾಡಿರುವ ಕಾಮಗಾರಿಗಳಿಗೆ ಅವರಿಂದಲೇ ಸಮಾಪನ ವರದಿ ಸಲ್ಲಿಸುವುದನ್ನು ಮುಂದುವರಿಸಬೇಕು. ಸಂಘದಲ್ಲಿರುವ 69 ಸಾವಿರಕ್ಕೂ ಅಧಿಕ ಸದಸ್ಯರ ಹಿತ ಕಾಪಾಡಬೇಕು’ ಎಂದು ಮನವಿ ಮಾಡಿದರು.



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ: 15 ದಿನ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2,400 ಚದರ ಅಡಿವರೆಗಿನ (ಶೇ 20ರಷ್ಟು ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ನಿವೇಶನಗಳಲ್ಲಿ ನಿರ್ಮಿಸಿರುವ ಜಿ + 3 ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳಿರುವ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುವ ಕುರಿತು ಇಂಧನ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಕಳೆದ ತಿಂಗಳ 31ರ ಒಳಗೆ ನಿರ್ಮಾಣವಾಗಿರುವ ವಸತಿ ಕಟ್ಟಡಗಳಿಗೆ ಒಮ್ಮೆಗೆ ಮಾತ್ರ ಅನ್ವಯವಾಗುವಂತೆ ಸ್ವಾಧೀನಾನುಭವ ಪ್ರಮಾಣ ಪತ್ರಕ್ಕೆ (ಒ.ಸಿ) ವಿನಾಯಿತಿ ನೀಡಲಾಗಿದೆ. ವಿದ್ಯುತ್ ಸಂಪರ್ಕಕ್ಕಾಗಿ ಈಗಾಗಲೇ ಅರ್ಜಿ ಸಲ್ಲಿಸಿರುವ ಅಥವಾ ತಾತ್ಕಾಲಿಕ ಸಂಪರ್ಕ ಪಡೆದಿರುವ, ಯಾವುದೇ ವಿದ್ಯುತ್ ಸಂಪರ್ಕ ಪಡೆಯದೆ ನಿರ್ಮಿಸಿರುವ ಕಟ್ಟಡಗಳಿಗೆ ಇದು ಅನ್ವಯವಾಗಲಿದೆ.

ವಸತಿ ಕಟ್ಟಡ ನಿರ್ಮಾಣವಾಗಿದ್ದರೂ ಇದುವರೆಗೆ ಅರ್ಜಿ ಸಲ್ಲಿಸದೆ ಇರುವವರು, 15 ದಿನಗಳ ಒಳಗೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಬಹುದು. ಈ ಸಂಬಂಧ ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು ಪ್ರತ್ಯೇಕ ಮಾರ್ಗಸೂಚಿಯನ್ನು ಹೊರಡಿಸಿವೆ.

ಒ.ಸಿ ಇಲ್ಲದೆ ಇದ್ದರೆ ನೀರು ಮತ್ತು ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಕಳೆದ ವರ್ಷ ತೀರ್ಪು ನೀಡಿತ್ತು. ಇದನ್ನು ರಾಜ್ಯದಲ್ಲೂ ಜಾರಿಗೊಳಿಸಿದ್ದ ಕಾರಣ 2025ರ ಏಪ್ರಿಲ್‌ನಿಂದ ಒ.ಸಿ ಇಲ್ಲದವರಿಗೆ ವಿದ್ಯುತ್ ಸಂಪರ್ಕ ನೀಡಿರಲಿಲ್ಲ. ಈಗ ಒ.ಸಿಗೆ ವಿನಾಯಿತಿ ನೀಡಿರುವುದರಿಂದ ಸುಮಾರು 60 ಸಾವಿರ ಕಟ್ಟಡಗಳಿಗೆ ಅನುಕೂಲವಾಗಬಹುದು ಎಂದು ಅಂದಾಜಿಸಲಾಗಿದೆ. ಅಂದರೆ, ಒಂದು ಕಟ್ಟಡದಲ್ಲಿ 4–5 ಮೀಟರ್ ಅಳವಡಿಸಬೇಕಾಗಿರುವುದರಿಂದ ಹೊಸದಾಗಿ 3.5 ಲಕ್ಷ ಸಂಪರ್ಕಗಳನ್ನು ನೀಡಬೇಕಾಗುತ್ತದೆ. ಕಟ್ಟಡ ಪೂರ್ಣಗೊಂಡಿರುವ ಮತ್ತು ನಿಯಮಾನುಸಾರ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡದ ಚಿತ್ರ ಲಗತ್ತಿಸಿ ವಿದ್ಯುತ್ ಸಂಪರ್ಕ ನೀಡುವುದು ಸೇರಿದಂತೆ ಕೆಲ ಅಂಶಗಳನ್ನು ಮಾರ್ಗಸೂಚಿಯಲ್ಲಿ ಪ್ರಸ್ತಾಪಿಸಲಾಗಿದೆ.

ದರ ಇಳಿಕೆ, ಅಡುಗೆ ಅನಿಲ ಸಮರ್ಪಕ ಪೂರೈಕೆಗೆ ಸಂಘಟನೆಗಳ ಒತ್ತಾಯ

ಇಂಧನ ಬೆಲೆ ಏರಿಕೆ: ಕೇಂದ್ರದ ವಿರುದ್ಧ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ದರ ಏರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಹಾಗೂ ‘ಗ್ಯಾರಂಟಿ ಯೋಜನೆಗಳು ರಾಜ್ಯದ ಮತದಾರರಿಗಷ್ಟೇ’ ಎಂಬ ಮುಖ್ಯಮಂತ್ರಿ ಹೇಳಿಕೆ ವಿರೋಧಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಬೆಂಗಳೂರು ಮನೆ ಕೆಲಸಗಾರರ ಸಂಘಟನೆಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಧರಣಿ ನಡೆಸಿದವು.

ಅಮೆರಿಕ–ಇರಾನ್ ಯುದ್ಧದಿಂದಾಗಿ ದೇಶದಲ್ಲಿ ಪೆಟ್ರೋಲ್, ಡಿಸೇಲ್ ಹಾಗೂ ಎಲ್.ಪಿ.ಜಿ ದರ ಹೆಚ್ಚಾಗುತ್ತಿದೆ. ಇದು ಜನಸಾಮಾನ್ಯರ ಜೀವನಕ್ಕೆ ಹೊರೆಯಾಗಿದೆ. ಕೂಡಲೇ ಕೇಂದ್ರ ಸರ್ಕಾರ ಇಂಧನ ದರವನ್ನು ಇಳಿಕೆ ಮಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಪೆಟ್ರೋಲ್ ಲೀಟರ್‌ಗೆ ₹110, ಡೀಸೆಲ್ ₹95 ತಲುಪಿದೆ. ಇನ್ನೂ ಬೆಲೆ ಹೆಚ್ಚಳವಾಗುವ ಆತಂಕವಿದೆ. ಇಂಧನ ದರ ಏರಿಕೆಯಿಂದಾಗಿ ಸಾರಿಗೆ ವೆಚ್ಚ ಹೆಚ್ಚಾಗಿ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಬಡ, ಮಧ್ಯಮ ಹಾಗೂ ಕಾರ್ಮಿಕರ ಬದುಕು ಸಂಕಷ್ಟದಲ್ಲಿದೆ ಎಂದು ಹೇಳಿದರು.

ಮುಖ್ಯಾಂಶಗಳು
- ಸಮಸ್ಯೆ ಪರಿಹರಿಸುವಲ್ಲಿ ಪ್ರಧಾನ ಮಂತ್ರಿ ವಿಫಲ: ಆರೋಪ
- ‘ಮುಖ್ಯಮಂತ್ರಿ ಹೇಳಿಕೆ: ಜನರಲ್ಲಿ ಅನಗತ್ಯ ಗೊಂದಲ’

ಗ್ರಾಹಕರಿಗೆ ಸಮರ್ಪಕವಾಗಿ ಅಡುಗೆ ಅನಿಲ ಮತ್ತು ಇಂಧನ ದೊರೆಯುವಂತೆ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಸ್ವಾಮ್ಯದ ತೈಲ ಪೂರೈಕೆ ಕಂಪನಿಗಳು ತಮ್ಮ ನಷ್ಟ ಸರಿದೂಗಿಸಲು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಾದ ಬೆಲೆ ಏರಿಕೆಯನ್ನು ಗ್ರಾಹಕರಿಗೆ ವರ್ಗಾಯಿಸುತ್ತಿವೆ. ಸಮಸ್ಯೆ ಪರಿಹರಿಸುವಲ್ಲಿ ಪ್ರಧಾನಮಂತ್ರಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.



ಇಂಧನ ದರ ಇಳಿಕೆ ಮಾಡುವಂತೆ ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹಾಗೂ ಬೆಂಗಳೂರು ಮನೆ ಕೆಲಸಗಾರರ ಸಂಘಟನೆಗಳ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದರು —ಪ್ರಜಾವಾಣಿ ಚಿತ್ರ

ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಗೀತಾ ರವಿಕುಮಾರ್ ಮಾತನಾಡಿ, ‘ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗ್ಯಾರಂಟಿ ಯೋಜನೆಗಳು ರಾಜ್ಯದ ಮತದಾರರಿಗೆ ಅಷ್ಟೇ ಎಂದು ಹೇಳಿರುವುದು ಜನ ವಿರೋಧಿ, ಸಂವಿಧಾನ ವಿರೋಧಿಯಾಗಿದೆ. ಜನರ ತೆರಿಗೆ ಹಣದಿಂದ ಜಾರಿಯಾಗುತ್ತಿರುವ ಸಾರ್ವಜನಿಕ ಯೋಜನೆಗಳಾಗಿವೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಹೇಳಿಕೆ ನೀಡುವುದರಿಂದ ಜನರಲ್ಲಿ ಅನಗತ್ಯ ಗೊಂದಲ ಮತ್ತು ಆತಂಕ ಸೃಷ್ಟಿ ಮಾಡುತ್ತದೆ’ ಎಂದು ಹೇಳಿದ್ದಾರೆ.

ಮನೆ ಕೆಲಸಗಾರರ ಸಂಘಟನೆ ಪ್ರಧಾನ ಕಾರ್ಯದರ್ಶಿ ರೇಣುಕಾ ಮಾತನಾಡಿ, ‘ಎಸ್‌ಐಆರ್ ಬಗ್ಗೆ ಸರ್ಕಾರ ಎಚ್ಚರ ವಹಿಸಬೇಕು. ರಾಜ್ಯದ ಮಹಿಳೆಯರ ಮತದಾನದ ಹಕ್ಕು ಹಾಗೂ ಸರ್ಕಾರಿ ಸೌಲಭ್ಯಗಳ ಹಕ್ಕುಗಳ ರಕ್ಷಿಸಲು ಕ್ರಮ ಕೈಗೊಳ್ಳಬೇಕು. ಮಹಿಳೆಯರನ್ನು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಹಾಗೂ ಸರ್ಕಾರಿ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಬಾರದು’ ಎಂದು ಮನವಿ ಮಾಡಿದರು.

ಸಂಘಟನೆಯ ಪದಾಧಿಕಾರಿಗಳಾದ ಸುನಂದಾ, ಲತಾ ಪಾಲ್ಗೊಂಡಿದ್ದರು.

‘ನೀಟ್: ನಷ್ಟ ತುಂಬಿಕೊಡಲು ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಸಂಕಲ್ಪ ಸಮಾವೇಶದ ಕಾರಣಕ್ಕೆ 2–3 ವಿದ್ಯಾರ್ಥಿಗಳು ನೀಟ್‌ಗೆ ಹಾಜರಾಗದೆ ಉಳಿದಿದ್ದರೆ ವಿಷಾದ ವ್ಯಕ್ತಪಡಿಸುತ್ತೇವೆ. ವಿದ್ಯಾರ್ಥಿಗಳ ಸಂಕಷ್ಟ ಕೇಳಲು ತಂಡ ಮಾಡಿ, ಅವರಿಗೆ ಆಗಿರುವ ನಷ್ಟ ತುಂಬಿ ಕೊಡಲು ಸಿದ್ಧರಿದ್ದೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.



ಬಿ.ಕೆ. ಹರಿಪ್ರಸಾದ್

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನರೇಂದ್ರ ಮೋದಿ ಸರ್ಕಾರದ ನೀಟ್ ಅಕ್ರಮಗಳಿಂದ 12 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೋದಿ ಅವರಾಗಲಿ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಾಗಲಿ ವಿಷಾದ ವ್ಯಕ್ತಪಡಿಸಿದ್ದಾರೆಯೇ’ ಎಂದು ದೂರಿದರು.

‘ಲಕ್ಷಾಂತರ ಜನರಿಗೆ ಪದೇ ಪದೇ ಪರೀಕ್ಷೆ ಬರೆಯುವಂತೆ ಮಾಡುತ್ತಿರುವುದು ಬಿಜೆಪಿ. ಪ್ರಶ್ನೆಪತ್ರಿಕೆ ಸೋರಿಕೆಯಿಂದ 1.40 ಕೋಟಿ ವಿದ್ಯಾರ್ಥಿಗಳ ಭವಿಷ್ಯ ಅನಿಶ್ಚಿತತೆಗೆ ಸಿಲುಕಿದೆ. ಕಾಂಗ್ರೆಸ್ ಬಗ್ಗೆ ಗೂಬೆ ಕೂರಿಸುತ್ತಿರುವ ಬಿಜೆಪಿಯ ಗೂಬೆಗಳು ಈ ಬಗ್ಗೆ ಮಾತನಾಡಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ಮೈಸೂರಿನಲ್ಲಿ 1400 ವಿದ್ಯಾರ್ಥಿಗಳು, ಯಾದಗಿರಿಯಲ್ಲಿ 286, ದಕ್ಷಿಣ ಕನ್ನಡ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇಲ್ಲಿ ಯಾವ ಕಾರ್ಯಕ್ರಮ ನಡೆದಿತ್ತು? ಸುಳ್ಳಿನ ಕಾರ್ಖಾನೆ ಇಟ್ಟುಕೊಂಡಿರುವ ಬಿಜೆಪಿಯವರು ತಮ್ಮ ತಪ್ಪು ಮರೆಮಾಚಲು ಕಾಂಗ್ರೆಸ್ ವಿರುದ್ಧ ಕುಂಟು ನೆಪ ಹೇಳುವುದು ಬೇಡ’ ಎಂದರು.

‘ವಿಮಾನ ನಿಲ್ದಾಣದಲ್ಲಿ ಕಾದಿದ್ದ ಮೋದಿ ಅವರನ್ನು ನೋಡಿ ಕಲಿಯಲಿ’ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಹರಿಪ್ರಸಾದ್, ‘ಎಷ್ಟು ನಿಮಿಷ ಕಾದರು? ಯಾವ ಹೆಲಿಕಾಪ್ಟರ್‌ನಲ್ಲಿ ಹೋದರು ಎಂದು ಅವರಿಂದ ನಾವು ಕಲಿಯಬೇಕಾಗಿಲ್ಲ. ಮೋದಿ ಅವರು ವಿಮಾನ ನಿಲ್ದಾಣದಲ್ಲಿ 45 ನಿಮಿಷ ಯಾವ ಕಾರಣಕ್ಕೆ ಇದ್ದರು ಎಂಬುದು ನನಗೆ ಗೊತ್ತಿದೆ. ಈಗ ಆ ವಿಚಾರ ಮಾತನಾಡುವುದಿಲ್ಲ’ ಎಂದು ತಿರುಗೇಟು ನೀಡಿದರು.

ಮೋದಿ ನೋಡಿ ಕಲಿಯಲಿ: ಎಚ್‌ಡಿಕೆ

‘ನೀಟ್ ಸೇರಿದಂತೆ ಯಾವುದೇ ಪರೀಕ್ಷೆ ನಡೆಯುವ ಸಮಯದಲ್ಲಿ ಸಾರ್ವಜನಿಕ ಸೇವಕರು ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಪ್ರಧಾನಿ ನರೇಂದ್ರ ಮೋದಿ ಅವರನ್ನು ನೋಡಿ ಕಲಿಯಬೇಕು’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭದ ಕಾರಣ ಬೆಂಗಳೂರಿನ ಕೆಲವಡೆ ಸಂಚಾರ ದಟ್ಟಣೆಯಿಂದ ಕೆಲ ವಿದ್ಯಾರ್ಥಿಗಳು ನೀಟ್ ಮರುಪರೀಕ್ಷೆ ಬರೆಯಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾಂಗ್ರೆಸ್ ಹೊಣೆ’ ಎಂದರು.

ಪ್ರಧಾನಮಂತ್ರಿ ವಿಮಾನನಿಲ್ದಾಣದಿಂದ ದೆಹಲಿಯ ತಮ್ಮ ನಿವಾಸಕ್ಕೆ ಹೋಗಲು ಪರೀಕ್ಷೆಯ ಕಾರಣಕ್ಕೆ 45 ನಿಮಿಷ ವಿಮಾನ ನಿಲ್ದಾಣದಲ್ಲೇ ಕಳೆದಿದ್ದಾರೆ. ಇತ್ತ ಬೆಂಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕ್ರಮದ ಕಾರಣ ಹಲವು ಮಕ್ಕಳ ಭವಿಷ್ಯವೇ ಹಾಳಾಗಿದೆ. ಇಂತಹ ತಪ್ಪನ್ನು ತಿದ್ದಿಕೊಂಡು ಭವಿಷ್ಯದಲ್ಲಾದರೂ ಸರಿಯಾದ ನಡೆ ಅನುಸರಿಸಬೇಕು’ ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು,ತುಂತುರು ಮಳೆಯಾಗುವ ಸಾಧ್ಯತೆ ಇದೆ.

‘ಬಿಲ್ ಮಾಡುವುದಕ್ಕೇ ಕಾಮಗಾರಿ ಮಾಡುತ್ತೀರಾ?’

ವೈಟ್ ಟಾಪಿಂಗ್ ಮೇಲೆ ಮೇಲ್ಸೇತುವೆ ಏಕೆ?

• ಬಿ–ಸ್ಮೈಲ್ ಅಧಿಕಾರಿಗಳಿಗೆ ಸಚಿವ ಕೃಷ್ಣ ಬೈರೇಗೌಡ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲಿವೇಟೆಡ್ ಕಾರಿಡಾರ್ ಅಥವಾ ಮೇಲ್ಸೇತುವೆ ನಿರ್ಮಿಸುವ ಯೋಜನೆ ನಿಮ್ಮ ಮುಂದಿದ್ದರೂ ಜೆ.ಸಿ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸಿದ್ದೇಕೆ? ಆ ರಸ್ತೆಯನ್ನು ಅಗೆದರೆ ಅದರಿಂದಾಗುವ ನಷ್ಟ ಭರಿಸುವವರು ಯಾರು? ಬಿಲ್ ಮಾಡುವುದಕ್ಕೇ ಕಾಮಗಾರಿ ಮಾಡುತ್ತೀರಾ...’

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ಈ ಪ್ರಶ್ನೆಗಳಿಗೆ ಬೆಂಗಳೂರು ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ರಚನೆಯಾಗಿರುವ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ (ಬಿ–ಸ್ಮೈಲ್) ಅಧಿಕಾರಿಗಳು ನಿರುತ್ತರರಾದರು. ಉತ್ತರ ನೀಡಲು ತಡಕಾಡಿದಾಗ, ‘ಇಂತಹ ಕೆಲಸ ಮುಂದೆ ಆಗಬಾರದು. ಸಮಗ್ರ ಯೋಜನೆ ರೂಪಿಸಿ, ಕಾರ್ಯಗತಗೊಳಿಸಬೇಕು’ ಎಂದು ತಾಕೀತು ಮಾಡಿದರು.

ಬಿ–ಸ್ಮೈಲ್ ಯೋಜನೆಗಳ ಪರಿಶೀಲನಾ ಸಭೆಯನ್ನು ಸೋಮವಾರ ನಡೆಸಿದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ‘ಬೆಂಗಳೂರಿನ ದೀರ್ಘಕಾಲದ ಸಂಚಾರ ದಟ್ಟಣೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ. ಬಿ-ಸ್ಮೈಲ್ ವತಿಯಿಂದ ಸಂಚಾರ ಸಮಸ್ಯೆಗಳಿಗೆ ದೀರ್ಘಾವಧಿಯ ಪರಿಹಾರ ಒದಗಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ನೀಲನಕ್ಷೆ ರೂಪಿಸಿದ್ದು, ಅನೇಕ ಯೋಜನೆಗಳು ಅನುಷ್ಠಾನದ ಹಂತದಲ್ಲಿವೆ. ನಾನು ಯಾವುದೇ ಹೊಸ ಸಲಹೆ-ಸೂಚನೆಗಳನ್ನು ನೀಡಿಲ್ಲ. ಈಗಾಗಲೇ ರೂಪಿಸಿರುವ ಯೋಜನೆಗಳನ್ನು ತ್ವರಿತವಾಗಿ ಮತ್ತು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗಿದೆ’ ಎಂದು ಹೇಳಿದರು.

ನಗರದಲ್ಲಿ ಹೆಚ್ಚು ಸಂಚಾರ ದಟ್ಟಣೆ ಇರುವ ರಸ್ತೆಗಳು ಹಾಳಾದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ 2016ರಿಂದ ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮುಖ್ಯ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು, ಪದೇಪದೇ ಹಾಳಾಗುವುದನ್ನು ತಡೆಯಲು ಹಾಗೂ 20 ವರ್ಷಗಳಿಂದ 30 ವರ್ಷ ಬಾಳಿಕೆ ಬರುವ ರಸ್ತೆಗಳನ್ನು ನಿರ್ಮಿಸಲು ಈ ಕಾಮಗಾರಿ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಒಂದು ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿಗೆ ಸುಮಾರು ₹10 ಕೋಟಿ ವೆಚ್ಚವಾಗುತ್ತದೆ. ಈ ರಸ್ತೆಗಳ ಬಾಳಿಕೆ ಅವಧಿಯಲ್ಲಿ ಡಾಂಬರೀಕರಣವನ್ನು ಐದಾರು ಬಾರಿ ಮಾಡಬೇಕಾಗಿದ್ದು, ಅದಕ್ಕೆ ಹೆಚ್ಚು ವೆಚ್ಚವಾಗುತ್ತದೆ. ಆದ್ದರಿಂದ ದೀರ್ಘಕಾಲ ಬಾಳಿಕೆ ಬರುವ, ಗುಂಡಿ ಮುಕ್ತ ರಸ್ತೆಗಳನ್ನು ನಿರ್ಮಿಸುವ ಉದ್ದೇಶದಿಂದ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದರು.

‘ವೈಜ್ಞಾನಿಕ ರೀತಿಯಲ್ಲಿ ರಸ್ತೆಗಳನ್ನು ನಿರ್ಮಿಸುವುದರ ಜೊತೆಗೆ ಗುಣಮಟ್ಟದ ಪಾದಚಾರಿ ಮಾರ್ಗಗಳನ್ನೂ ನಿರ್ಮಿಸಲಾಗುತ್ತಿದೆ. ವೈಟ್ ಟಾಪಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಯಾವುದೇ ಸಮಸ್ಯೆ ಇಲ್ಲ. ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಒತ್ತಡ ಹೇರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದ್ದೇನೆ’ ಎಂದು ಮಾಹಿತಿ ನೀಡಿದರು.

‘ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ಎಲ್ಲಾ ಸ್ಥಳಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳಬೇಕು. ರಸ್ತೆ ಬದಿಯಲ್ಲಿ ಸಾಮಗ್ರಿಗಳನ್ನು ರಾಶಿ ಮಾಡುವುದು, ಜೆಲ್ಲಿ ಹಾಕಿ ಹಾಗೆಯೇ ಬಿಡುವುದು ಹಾಗೂ ರಸ್ತೆ ಅಗೆದು ನಿರ್ಲಕ್ಷ್ಯ ವಹಿಸುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಅರಿತು ಕಾರ್ಯನಿರ್ವಹಿಸಬೇಕು. ಸ್ಥಳ ಪರಿಶೀಲನೆ ವೇಳೆ ಸಮಸ್ಯೆಗಳು ಕಂಡುಬಂದರೆ ಅವುಗಳನ್ನು ತಕ್ಷಣ ಪರಿಹರಿಸಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದೇನೆ’ ಎಂದರು.

ಹೊರ ವರ್ತುಲ ರಸ್ತೆಯ ಮರು ವಿನ್ಯಾಸಕ್ಕಾಗಿ ₹450 ಕೋಟಿ ವೆಚ್ಚದ ಸಮಗ್ರ ಯೋಜನೆ ರೂಪಿಸಲಾಗಿದೆ. ಮೆಟ್ರೊ ಕಾಮಗಾರಿಯೊಂದಿಗೆ ಈ ಯೋಜನೆಯನ್ನು ಏಕಕಾಲದಲ್ಲಿ ಆರಂಭಿಸಿದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಸಂಚಾರ ಪೊಲೀಸರೊಂದಿಗೆ ಚರ್ಚಿಸಿ ಸೂಕ್ತ ಸಮಯದಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.

ಸುರಂಗ ರಸ್ತೆ: ಟೆಂಡರ್ ಪ್ರಕ್ರಿಯೆ ಪೂರ್ಣ



ಕೃಷ್ಣ ಬೈರೇಗೌಡ

‘ಉತ್ತರ-ದಕ್ಷಿಣಕ್ಕೆ 16.7 ಕಿ.ಮೀ. ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಪ್ರಕ್ರಿಯೆಪೂರ್ಣಗೊಳಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಸಚಿವ ಸಂಪುಟದ ಅನುಮೋದನೆಯ ಬಳಿಕ ಯೋಜನೆ ಅನುಷ್ಠಾನಗೊಳ್ಳಲಿದೆ. ಪೂರ್ವ-ಪಶ್ಚಿಮ ಸುರಂಗ ಮಾರ್ಗ ಯೋಜನೆಯಡಿ ಹಳೆ ಮದ್ರಾಸ್ ರಸ್ತೆಯಿಂದ ಮೈಸೂರು ರಸ್ತೆಯವರೆಗೆ 22 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಮುಂದಿನ ಹಂತದಲ್ಲಿ ಟೆಂಡರ್ ಆಹ್ವಾನಿಸಲಾಗುವುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ನಗರದ ಸಂಚಾರ ದಟ್ಟಣೆಗೆ ದೀರ್ಘಾವಧಿಯ ಪರಿಹಾರ ಕಲ್ಪಿಸುವ ಉದ್ದೇಶದಿಂದ 150 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದರಲ್ಲಿ 75 ಕಿ.ಮೀ. ಉದ್ದದ ಕಾರಿಡಾರ್ ನಿರ್ಮಾಣಕ್ಕೆ ಟೆಂಡರ್ ಕರೆಯಲು ತೀರ್ಮಾನಿಸಲಾಗಿದೆ ಎಂದರು.

ಎಲಿವೇಟೆಡ್ ಹಾಗೂ ಸುರಂಗ ರಸ್ತೆ ನಿರ್ಮಾಣವಾದ ನಂತರ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸಲು ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಹೇಳಿದರು.

ಕೃಷ್ಣ ಬೈರೇಗೌಡ ಮಾತು

- 196 ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. 126 ಕಿ.ಮೀ. ರಸ್ತೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಅದರಲ್ಲಿ 58 ಕಿ.ಮೀ. ಪೂರ್ಣಗೊಂಡಿದೆ.
- 6 ತಿಂಗಳಲ್ಲಿ ಬಾಕಿ ಉಳಿದಿರುವ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು
- 2026-27ನೇ ಸಾಲಿನಲ್ಲಿ ₹3,000 ಕೋಟಿ ವೆಚ್ಚದಲ್ಲಿ 450 ಕಿ.ಮೀ. ಉದ್ದದ ವೈಟ್ ಟಾಪಿಂಗ್ ಕಾಮಗಾರಿ
- ಸಮಗ್ರ ಯೋಜನೆ ರೂಪಿಸಿ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ



ಶ್ರೀ ತ್ಯಾಗರಾಜ ಕೋಆಪರೇಟಿವ್ ಬ್ಯಾಂಕ್‌ನ ಬನಶಂಕರಿ ಒಂದನೇ ಹಂತದ ಸ್ವಂತ ಕಟ್ಟಡದಲ್ಲಿನ ಶಾಖೆಯನ್ನು ಲೋಕಸಭಾ ಸದಸ್ಯ ತೇಜಸ್ವಿ ಸೂರ್ಯ ಉದ್ಘಾಟಿಸಿದರು. ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್, ಶಾಸಕ ರವಿಸುಬ್ರಮಣ್ಯ, ಹೆಚ್ಚುವರಿ ನಿಬಂಧಕ ಬಾಲಶೇಖರ್ ಉಪಸ್ಥಿತರಿದ್ದರು

‘ಸುರಕ್ಷತಾ ವೈಫಲ್ಯ: ಕಾರ್ಮಿಕರ ಸಾವು’

ಬೆಂಗಳೂರು: ಜಲಮಂಡಳಿಯ ವರ್ತೂರು ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ (ಎಸ್‌ಟಿಪಿ) ದುರಸ್ತಿ ಕಾರ್ಯದಲ್ಲಿ ತೊಡಗಿದ್ದ ಕಾರ್ಮಿಕರು ಸುರಕ್ಷತಾ ಸಾಧನಗಳನ್ನು ಬಳಸಿರಲಿಲ್ಲ ಹಾಗೂ ಒಳಚರಂಡಿ ನೀರನ್ನು ಬೇರೆಡೆಗೆ ತಿರುಗಿಸಲು ಕ್ರಮ ಕೈಗೊಂಡಿರಲಿಲ್ಲ. ಇದು ಅವಘಡಕ್ಕೆ ಕಾರಣವಾಗಿದೆ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಗುರುವಾರ ರಾತ್ರಿ ಆಯತಪ್ಪಿ ಬಿದ್ದು, ಇಬ್ಬರು ಕಾರ್ಮಿಕರು ಮೃತಪಟ್ಟಿದ್ದರು. ಒಬ್ಬರ ಮೃತದೇಹ ಹೊರ ತೆಗೆಯಲಾಯಿತು. ಮತ್ತೊಬ್ಬರ ಮೃತದೇಹಕ್ಕಾಗಿ ಇನ್ನೂ ಶೋಧ ಕಾರ್ಯ ನಡೆದಿದೆ. ಘಟನೆಯ ಸಮಗ್ರ ತನಿಖೆಗೆ ಮೂವರು ಎಂಜಿನಿಯರ್‌ಗಳನ್ನು ಒಳಗೊಂಡ ಸಮಿತಿಯನ್ನು ಜಲಮಂಡಳಿ ರಚಿಸಿತ್ತು.

ಮೂಲಗಳ ಪ್ರಕಾರ, ಆಂತರಿಕ ಸಮಿತಿಯು ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರಿಗೆ ವರದಿ ಸಲ್ಲಿಸಿದ್ದು, ಗುತ್ತಿಗೆದಾರರ ನಿರ್ಲಕ್ಷ್ಯ ಮತ್ತು ಒಪ್ಪಂದದ ಪ್ರಕಾರ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಹಾಗೂ ಮಾರ್ಗಸೂಚಿಗಳನ್ನು ಪಾಲಿಸದಿರುವುದೇ ಅವಘಡಕ್ಕೆ ಮೂಲ ಕಾರಣ ಎಂದು ತಿಳಿಸಿದೆ.

40 ಅಡಿ ಆಳದ ತ್ಯಾಜ್ಯ ನೀರು ಸಂಸ್ಕರಣಾ ಟ್ಯಾಂಕ್‌ಗೆ ಇಳಿದಿದ್ದ ಕಾರ್ಮಿಕರು ಸುರಕ್ಷತಾ ಬೆಲ್ಟ್ ಕಟ್ಟಿಕೊಂಡಿರಲಿಲ್ಲ. ಅವರು ಬೆಲ್ಟ್ ಧರಿಸಿದ್ದರೆ, ಅವರನ್ನು ಹೊರಗೆಳೆಯಬಹುದಿತ್ತು. ನಿರ್ಲಕ್ಷ್ಯದ ಕಾರಣದಿಂದ ಸಾವು ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ.

‘ಕಾರ್ಮಿಕರು ಸುಮಾರು ಎಂಟು ವರ್ಷಗಳಿಂದ ಘಟಕದಲ್ಲಿ ಕೆಲಸ ಮಾಡುತ್ತಿದ್ದು, ಅವರು ಸುರಕ್ಷತಾ ಕ್ರಮಗಳನ್ನು ಕಡೆಗಣಿಸಿರುವಂತೆ ತೋರುತ್ತದೆ. ಒಳಚರಂಡಿ ನೀರಿನ ಹರಿವನ್ನು ಬೇರೆಡೆಗೆ ತಿರುಗಿಸಿದ್ದರೆ, ಯಾವುದೇ ಅಪಾಯ ಉಂಟಾಗುತ್ತಿರಲಿಲ್ಲ. ದೊಡ್ಡ ಎಸ್‌ಟಿಪಿಗಳಲ್ಲಿ ಕೊಳಚೆ ನೀರು ಒತ್ತಡದಿಂದ ಹರಿಯುತ್ತದೆ ಮತ್ತು ಜನರು ಕೊಚ್ಚಿಕೊಂಡು ಹೋಗುವ ಸಾಧ್ಯತೆ ಹೆಚ್ಚು. ಅದಕ್ಕಾಗಿಯೇ ಸುರಕ್ಷತಾ ಸಾಧನಗಳ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಪಾದಚಾರಿ ಮಾರ್ಗದಲ್ಲಿ ಕಸ; ನಿತ್ಯವೂ ಸಮಸ್ಯೆ

ಸುಮನಹಳ್ಳಿಯಿಂದ ನಾಗರಬಾವಿ ಕಡೆಗೆ ಹೋಗುವ ಪ್ರದೇಶದಲ್ಲಿರುವ ರಾಜಕಾಲುವೆಯ ಪಕ್ಕದಲ್ಲಿರುವ ಸರ್ವಿಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ನಿತ್ಯವೂ ಕಸ ತುಂಬಿರುತ್ತದೆ. ಹಸಿ ಕಸದ ಜೊತೆಗೆ, ಮನೆಯ ಅನುಪಯುಕ್ತ ವಸ್ತುಗಳು, ಕಟ್ಟಡ ನಿರ್ಮಾಣ ತ್ಯಾಜ್ಯವೂ ಇಲ್ಲಿರುತ್ತವೆ. ಬಿಎಸ್‌ಡಬ್ಲ್ಯುಎಂಎಲ್‌ನ ಅಧಿಕಾರಿಗಳಿಗೆ ಸಾಕಷ್ಟು ಬಾರಿ ದೂರು ನೀಡಿದ್ದರೂ ಇಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿಲ್ಲ. ಅಲ್ಲದೆ, ಮಳೆಯ ಸಂದರ್ಭದಲ್ಲಿ ಪಾದಚಾರಿ ಮಾರ್ಗ ಸಂಪೂರ್ಣ ಮಣ್ಣುಮಯವಾಗಿ ನಡೆದಾಡಲು ಕಷ್ಟವಾಗುತ್ತಿದೆ.

ಮಾಧವರ ರಾವ್, ಬಸವೇಶ್ವರನಗರ

ಇಲ್ಲಿದೆ ನೋಡಿ ಕಸ...


ಪ್ರಜಾವಾಣಿ ಸಿಟಿಜನ್ ಕನೆಕ್ಟ್ — ಉತ್ತಮ ಬೆಂಗಳೂರಿಗಾಗಿ ಸಹಯೋಗ

96060 38256

dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ‘ಪ್ರಜಾವಾಣಿ’ಗೂ ಕಳುಹಿಸಿಕೊಡಿ. ಅದನ್ನು ಪ್ರಕಟಿಸಲಾಗುತ್ತದೆ.



ಶಂಕರಪುರ ಮುಖ್ಯರಸ್ತೆಯಲ್ಲಿರುವ ಮಾಸ್ತಿ ರಂಗಮಂದಿರದ ಎದುರು ಬಿದ್ದಿರುವ ತ್ಯಾಜ್ಯ



ಕೆ.ಪಿ.ಅಗ್ರಹಾರ– ಭುವನೇಶ್ವರಿ ನಗರದ 25ನೇ ಅಡ್ಡರಸ್ತೆಯಲ್ಲಿನ ಕನ್ನಡ ಧ್ವಜ ಸ್ತಂಭದ ಬಳಿಯೇ ಕಸ ಬಿದ್ದಿದೆ



ನಾಗಶೆಟ್ಟಿಹಳ್ಳಿಯ ಆರ್‌ಎಂವಿ 2ನೇ ಹಂತದ ಮುಖ್ಯರಸ್ತೆ ಬದಿಯಲ್ಲಿಯೇ ಬಿದ್ದಿರುವ ತ್ಯಾಜ್ಯದ ರಾಶಿ



ಸುಮನಹಳ್ಳಿ ಬಳಿಯ ಸರ್ವಿಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ಕಸ



ನಾಯಂಡಹಳ್ಳಿಯ ಐಟಿಐ ಬಡಾವಣೆಯಲ್ಲಿನ ಜಿಆರ್‌ಸಿ ಬೃಂದಾವನ ಅಪಾರ್ಟ್‌ಮೆಂಟ್ ಎದುರಿನ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬಳಿ ಸುರಿದಿರುವ ತ್ಯಾಜ್ಯದ ರಾಶಿ




ಅರ್ಕಾವತಿ ಬಡಾವಣೆಯ 7ನೇ ಬ್ಲಾಕ್‌ನ ರಾಜಕಾಲುವೆಯ ಪಕ್ಕದ ರಸ್ತೆಯುದ್ಧಕ್ಕೂ ಹಾಕಿರುವ ಕಸದ ರಾಶಿ

ನಗರದಲ್ಲಿ ಇಂದು

ರಾಮಾಂಜನೇಯಸ್ವಾಮಿ ಮಹಾಕುಂಭಾಭಿಷೇಕ ಮಹೋತ್ಸವ: ಆಯೋಜನೆ ಮತ್ತು ಸ್ಥಳ: ರಾಮಾಂಜನೇಯ ದೇವಸ್ಥಾನ, 2ನೇ ಮುಖ್ಯರಸ್ತೆ, ನಾಗಸಂದ್ರ, ಬೆಳಿಗ್ಗೆ 9

‘ಸಂವಿಧಾನ ನುಡಿ ಸಂಹಿತೆ’ ಕೃತಿ ಜನಾರ್ಪಣೆ: ಉದ್ಘಾಟನೆ: ಶಿವರಾಜ ವಿ.ಪಾಟೀಲ, ಲೇಖಕ: ಸಂತೋಷ ಹಾನಗಲ್ಲ, ಕೃತಿ ಕುರಿತು ಮಾತು: ಎ.ನಾರಾಯಣ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 11



ಶಿವರಾಜ ವಿ. ಪಾಟೀಲ

‘ಚಿತ್ರ ಭಾರತಿ’ ಕಲಾ ಶಿಬಿರ: ದೇಶದ ವಿವಿಧ ರಾಜ್ಯಗಳ ಚಿತ್ರ ಪ್ರಕಾರಗಳ ಕಲಾಕೃತಿಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾ ಭವನ, ಬೆಳಿಗ್ಗೆ 11ರಿಂದ 1 ಮತ್ತು ಮಧ್ಯಾಹ್ನ 3ರಿಂದ ಸಂಜೆ 6

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

26ನೇ ವರ್ಷದ ಪ್ರವಚನ ವಾಹಿನಿ: ‘ಭಾಗವತದಲ್ಲಿ ನಾರಾಯಣ ಪರ್ವ’ ಕುರಿತು ಉಪನ್ಯಾಸ: ಪವಮಾನಾಚಾರ್ ಮಡನೂರು, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ಮಿತ್ತಬೈಲ್ ಯಮುನಕ್ಕ’ ನಾಟಕ ಪ್ರದರ್ಶನ: ರಚನೆ: ಡಿ.ಕೆ.ಚೌಟ, ರಂಗರೂಪ: ಬಸವರಾಜ ಸೂಳೇರಿಪಾಳ್ಯ, ನಿರ್ದೇಶನ: ರಾಜ್ ಗುರು, ತಂಡ: ರಂಗ ಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಮಿಸ್ಟರ್ ರಾವ್ ಅಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ: ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ತಂಡ: ಅಂತರಂಗ ಬಹಿರಂಗ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಒಂದು ಕೆ.ಜಿ ಚಿನ್ನ ಜಪ್ತಿ; ಇಬ್ಬರ ಸೆರೆ

ದೇವನಹಳ್ಳಿ: ದುಬೈ ಮತ್ತು ಮಲೇಷ್ಯಾದಿಂದ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಇಬ್ಬರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದು, ಒಂದು ಕೆ.ಜಿ ಚಿನ್ನ ಜಪ್ತಿ ಮಾಡಿದ್ದಾರೆ.

ಕೌಲಾಲಂಪುರದಿಂದ ಭಾನುವಾರ ತಡರಾತ್ರಿ ಬಂದ ಪ್ರಯಾಣಿಕರೊಬ್ಬರ ಬಳಿ ದಾಖಲೆ ಇಲ್ಲದೆ 427 ಗ್ರಾಂ ಚಿನ್ನದ ಒಡವೆ ಪತ್ತೆಯಾಗಿದ್ದು, ಕಳ್ಳಸಾಗಣೆ ಆರೋಪದ ಮೇಲೆ ಬಂಧಿಸಿದ್ದಾರೆ. ಜೂನ್ 20ರಂದು ದುಬೈ ನಿಂದ ಬಂದ ಪ್ರಯಾಣಿಕರೊಬ್ಬರ ಬಳಿ 575 ಗ್ರಾಂ ಚಿನ್ನ, ₹32 ಸಾವಿರ ಬೆಲೆಯ ಸಿಗರೇಟ್‌ಗಳನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಒಟ್ಟು ಮೌಲ್ಯ ₹89.40 ಲಕ್ಷ ಎಂದು ಅಂದಾಜಿಸಲಾಗಿದೆ.

ನಿಧನ ವಾರ್ತೆ

ನೀರದ ಉಪಾಧ್ಯಾಯ



ಬೆಂಗಳೂರು: ಆರ್.ಟಿ. ನಗರದ ಎಚ್‌ಎಂಟಿ ಬಡಾವಣೆ ನಿವಾಸಿ ನೀರದ ಉಪಾಧ್ಯಾಯ (83) ಭಾನುವಾರ ನಿಧನರಾದರು.

ಉಡುಪಿಯವರಾದ ನೀರದ ಅವರು ಹೈಕೋರ್ಟ್ ವಕೀಲರಾಗಿದ್ದ ದಿವಂಗತ ವಿ.ವಿ. ಉಪಾಧ್ಯಾಯ ಅವರ ಪತ್ನಿ. ಅವರಿಗೆ ಮೂವರು ಹೆಣ್ಣು ಮಕ್ಕಳು ಇದ್ದಾರೆ. ಹೆಬ್ಬಾಳದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಮದ್ಯದಂಗಡಿ: ಪರಿಶಿಷ್ಟರಿಗೆ ಮೀಸಲು

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಅನ್ವಯ; ಪರಿಶಿಷ್ಟ ಪಂಗಡಕ್ಕೆ ಶೇ 3

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಣಗೊಳ್ಳದ, ರದ್ದಾದ ಮತ್ತು ಮುಟ್ಟುಗೋಲು ಹಾಕಿಕೊಂಡ ಮದ್ಯದಂಗಡಿಗಳ ಪರವಾನಗಿಗಳ ಇ-ಹರಾಜಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಕಲ್ಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಆ ಮೂಲಕ, ಇಡೀ ದೇಶದಲ್ಲಿ ಇತರೆ ಯಾವುದೇ ರಾಜ್ಯದಲ್ಲಿ ಇಲ್ಲದ ಸಾಮಾಜಿಕ ನ್ಯಾಯದ ಹೊಸ ಮಾದರಿ ಪರಿಚಯಿಸಲು ಸರ್ಕಾರ ಮುಂದಾಗಿದೆ.

ಮೀಸಲಾತಿ ಪ್ರಮಾಣವು ಪರಿಶಿಷ್ಟ ಜಾತಿಯಲ್ಲಿ ಈಗಾಗಲೇ ಹಂಚಿಕೆಯಾಗಿರುವ ಒಳಮೀಸಲಾತಿಗೆ ಅನುಗುಣವಾಗಿ ಅಂದರೆ, ಪ್ರವರ್ಗ 'ಎ'ಗೆ ಮತ್ತು 'ಬಿ'ಗೆ ತಲಾ ಶೇ 5.25, ಪ್ರವರ್ಗ 'ಸಿ'ಗೆ ಶೇ 4.5 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ 3ರಷ್ಟು ಲಭ್ಯವಾಗಲಿದೆ ಎಂದೂ ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಈ ಕುರಿತಂತೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 5ನೇ ನಿಯಮದಲ್ಲಿ ತಿದ್ದುಪಡಿ ಮಾಡಿ ಆರ್ಥಿಕ ಇಲಾಖೆ ಜೂನ್ 17ರಂದು ಅಧಿಸೂಚನೆ ಹೊರಡಿಸಿದೆ. ಈ ತಿದ್ದುಪಡಿ ಅನ್ವಯ ಸಿಎಲ್ 2ಎ (ಚಿಲ್ಲರೆ ಮದ್ಯದಂಗಡಿ) ಮತ್ತು ಸಿಎಲ್ 9ಎ (ಬಾರ್ ಆ್ಯಂಡ್ ರೆಸ್ಟೋರೆಂಟ್) ಪರವಾನಗಿಗಳ ಇ-ಹರಾಜುಗಳಲ್ಲಿ ಮೀಸಲಾತಿ ಅನ್ವಯ ಆಗಲಿದೆ.

ಯಾವುದೆಲ್ಲ ಇ- ಹರಾಜು?

ಸಿಎಲ್ 2ಎ: ಸ್ಥಗಿತಗೊಂಡಿರುವ ಮತ್ತು 1987ರ ಕೋಟಾದಡಿ ಇನ್ನೂ ಮಂಜೂರು ಮಾಡಲು ಬಾಕಿ ಇರುವ ಎಲ್ಲ ಸಿಎಲ್ 2 ಪರವಾನಗಿಗಳು, ಸ್ಥಗಿತಗೊಂಡಿರುವ ಮತ್ತು ಅಬಕಾರಿ ಆಯುಕ್ತರಿಂದ ಪೂರ್ವಾನುಮೋದನೆ ಪಡೆದ, ಆದರೆ ಇನ್ನೂ ತೆರೆಯದ ಹಾಗೂ ಎಂಎಸ್ಐಎಲ್‌ಗೆ 2009 ಮತ್ತು 2016ರ ಆದೇಶದಲ್ಲಿ ಹಂಚಿಕೆ ಮಾಡಿ ಇನ್ನೂ ಮಂಜೂರು ಮಾಡಬೇಕಾದ ಸಿಎಲ್-11ಸಿ (ಎಂಎಸ್ಐಎಲ್) ಮದ್ಯದಂಗಡಿಗಳ ಪರವಾನಗಿಗಳು

ಸಿಎಲ್ 9ಎ: ಸ್ಥಗಿತಗೊಂಡಿರುವ ಸಿಎಲ್-9 (ಬಾರ್ ಆ್ಯಂಡ್ ರೆಸ್ಟೋರೆಂಟ್) ಪರವಾನಗಿಗಳು



ಈ ಆದೇಶವು ಇದೇ ಮೇ 26ರಿಂದ ಜಾರಿಗೆ ಬಂದಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಇ-ಹರಾಜು ಪ್ರಕ್ರಿಯೆಗಳಲ್ಲಿ ಈ ಮೀಸಲಾತಿ ಅನ್ವಯವಾಗಲಿದೆ. ಈ ತಿದ್ದುಪಡಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965ರ 71ನೇ ವಿಧಿಯಡಿ ಮಾಡಲಾಗಿದೆ ಎಂದೂ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ದೀರ್ಘ ಅವಧಿಯಿಂದ ನವೀಕರಣವಾಗದೆ ಸ್ಥಗಿತಗೊಂಡಿರುವ ಮತ್ತು ಎಂಎಸ್ಐಎಲ್ ಸಂಸ್ಥೆ ಇನ್ನೂ ಆರಂಭಿಸದ ಚಿಲ್ಲರೆ ಮದ್ಯದಂಗಡಿಗಳು ಹಾಗೂ ಸ್ಥಗಿತಗೊಂಡಿರುವ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು ಸೇರಿ ಒಟ್ಟು 569 ಮದ್ಯದಂಗಡಿಗಳ ಪರವಾನಗಿಗಳನ್ನು (ಸನ್ನದು) ನಿಗದಿತ ಮೀಸಲಾತಿಗೆ ಅನುಗುಣವಾಗಿ ಇ-ಹರಾಜು ಮಾಡಲು ರಾಜ್ಯ ಸರ್ಕಾರಕ್ಕೆ ಇತ್ತೀಚೆಗೆ ಹೈಕೋರ್ಟ್ ಅನುಮತಿ ನೀಡಿತ್ತು.

ಸ್ಥಗಿತಗೊಂಡಿದ್ದ 477 ಸಿಎಲ್-2ಎ ಮತ್ತು 92 ಸಿಎಲ್-9ಎ ಸನ್ನದು ಸೇರಿದಂತೆ ಒಟ್ಟು 569 ಪರವಾನಗಿಗಳನ್ನು 2026ರ ಜ. 13ರಿಂದ 20ರವರೆಗೆ ಹರಾಜು ಹಾಕಲು 2025ರ ನವೆಂಬರ್‌ನಲ್ಲಿ ಅಬಕಾರಿ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಹೈಕೋರ್ಟ್ ಅನುಮತಿ ನೀಡಿರುವುದರಿಂದ, ಮೀಸಲಾತಿ ಕಲ್ಪಿಸಿ ಇದೀಗ ಸರ್ಕಾರ ನಿಯಮ ತಿದ್ದುಪಡಿ ಮಾಡಿದೆ. ಹೀಗಾಗಿ, ಇ-ಹರಾಜಿನ ಹಾದಿ ಸುಗಮವಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ರೈತರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಬೆಂಬಲ

'ಬಿಡದಿ: ಟೌನ್‌ಶಿಪ್ ಕೈಬಿಡಿ'

ಪ್ರಜಾವಾಣಿ ವಾರ್ತೆ



ಬಿಡದಿ ಟೌನ್‌ಶಿಪ್ ವಿರೋಧಿಸಿ ಹೋಬಳಿಯ ಬೈರಮಂಗಲ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಸೋಮವಾರ ಹಮ್ಮಿಕೊಂಡಿದ್ದ ಪ್ರತಿರೋಧ ಸಮಾವೇಶದಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿದರು. ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಹೋರಾಟಗಾರರು ಉಪಸ್ಥಿತರಿದ್ದರು

ಬಿಡದಿ (ರಾಮನಗರ): 'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ಹೆಸರಿನಲ್ಲಿ ರೈತರನ್ನು ಬೀದಿಗೆ ತಂದು ನಿಲ್ಲಿಸುವುದು ಬೇಡ. ರೈತರಿಗೆ ಬೇಡವಾದ ಟೌನ್‌ಶಿಪ್ ಅನ್ನು ಸರ್ಕಾರ ಕೈ ಬಿಡಬೇಕು' ಎಂದು ಸರ್ವೋದಯ ಕರ್ನಾಟಕ ಪಕ್ಷದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಒತ್ತಾಯಿಸಿದರು.

ಟೌನ್‌ಶಿಪ್ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಬೈರಮಂಗಲದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿರೋಧ ಸಮಾವೇಶದಲ್ಲಿ ಮಾತನಾಡಿದರು. ಯೋಜನೆ ಕುರಿತು ರೈತ ಸಂಘ ಕೈಗೊಂಡಿರುವ ನಿರ್ಣಯಕ್ಕೆ ಸಹಮತ ವ್ಯಕ್ತಪಡಿಸಿದರು. ರೈತರ ಹೋರಾಟಕ್ಕೆ ಬೆಂಬಲ ಘೋಷಿಸಿದರು.

ಯೋಜನೆ ವಿರುದ್ಧ ಹೋರಾಡುತ್ತಿರುವ ಬೈರಮಂಗಲ, ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರ ಭೂ ಹಿತರಕ್ಷಣಾ ಸಮಿತಿ ಹಾಗೂ ರೈತ ಸಂಘಗಳ ಪದಾಧಿಕಾರಿಗಳ ನಿಯೋಗವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಳಿಗೆ ಕರೆದೊಯ್ದು ಟೌನ್‌ಶಿಪ್ ಕೈ ಬಿಡುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಅಥವಾ ಕೈಗಾರಿಕಾ ಪ್ರದೇಶದ ಹೆಸರಿನಲ್ಲಿ ದೊಡ್ಡ ಕಟ್ಟಡಗಳನ್ನು ಕಟ್ಟಿ ರೈತರನ್ನು ಬೀದಿಗೆ ತಂದು ನಿಲ್ಲಿಸುವುದೇ ಅಭಿವೃದ್ಧಿಯಲ್ಲ. ಈ ದಿಸೆಯಲ್ಲಿ ಅಭಿವೃದ್ಧಿಯ ಪರಿಕಲ್ಪನೆ ಬದಲಾಗಬೇಕಿದೆ. ಕೃಷಿ ಮತ್ತು ರೈತರ ಹಿತ ಕಾಯುವ ಅಭಿವೃದ್ಧಿ ಬೇಕಿದೆ ಎಂದರು.

ವಿವಿಧ ಜಿಲ್ಲೆಗಳಿಂದ ರೈತ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸಮಾವೇಶಕ್ಕೆ ಬಂದಿದ್ದರು. ಸಮಾವೇಶಕ್ಕೆ ಮುಂಚೆ ರಾಮನಗರ ಮತ್ತು ಬಿಡದಿಯ ಬಿಜಿಎಸ್ ವೃತ್ತದಿಂದ ಬೈರಮಂಗಲದವರೆಗೆ ರೈತರು ಬೈಕ್ ರ‍್ಯಾಲಿ ನಡೆಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸಮಾವೇಶ ಮುಗಿಯುವವರೆಗೆ ಬೈರಮಂಗಲ ವೃತ್ತದಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು.

ರಾಜ್ಯ ರೈತ ಸಂಘದ ಪ್ರಮುಖರು, ಬೈರಮಂಗಲ, ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ರೈತರ ಭೂ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.

> **ಭೂಮಿ ಕೊಡಲು ರೈತರು ಒಪ್ಪಿದ್ದಾರೆ ಎನ್ನುವ ಮುಖ್ಯಮಂತ್ರಿ, ಆ ರೈತರ ಹೆಸರು ಹಾಗೂ ಜಮೀನಿನ ವಿವರ ಬಿಡುಗಡೆ ಮಾಡಲಿ. ಬೇಡ ಎನ್ನುವ ಬಹುಸಂಖ್ಯಾತ ರೈತರ ಮಾಹಿತಿಯನ್ನು ನಾವೂ ಬಿಡುಗಡೆ ಮಾಡುತ್ತೇವೆ**
> **ಬಡಗಲಪುರ ನಾಗೇಂದ್ರ,** ಅಧ್ಯಕ್ಷ, ರಾಜ್ಯ ರೈತ ಸಂಘ

ಸೈನಿಕರ ಕಲ್ಯಾಣ ನಿಧಿಗೆ ₹10 ಲಕ್ಷ ದೇಣಿಗೆ

ದಾವಣಗೆರೆ: ದಯಾಮರಣ ಹೋರಾಟಗಾರ್ತಿ, ಕ್ಯಾನ್ಸರ್‌ನಿಂದ ಬಳಲುತ್ತಿರುವ ನಿವೃತ್ತ ಶಿಕ್ಷಕಿ ಎಚ್.ಬಿ. ಕರಿಬಸಮ್ಮ ಅವರು ಸೈನಿಕರ ಕಲ್ಯಾಣ ನಿಧಿಗೆ ₹10 ಲಕ್ಷ ದೇಣಿಗೆ ನೀಡಿದರು.



ಎಚ್.ಬಿ. ಕರಿಬಸಮ್ಮ

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರನ್ನು ಸೋಮವಾರ ಭೇಟಿಯಾಗಿ ತಮ್ಮ ಸ್ವಂತ ಮನೆ ಮಾರಾಟದಿಂದ ಹಾಗೂ ಪಿಂಚಣಿಯಿಂದ ಬಂದಿದ್ದ ₹10 ಲಕ್ಷ ಮೊತ್ತದ ಚೆಕ್ ಹಸ್ತಾಂತರಿಸಿದರು.

'ನಿರಂತರ ಹೋರಾಟಗಳ ಪರಿಣಾಮ ರಕ್ತದೊತ್ತಡ, ಸಕ್ಕರೆ ಕಾಯಿಲೆ ಹಾಗೂ ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ತುತ್ತಾಗಿದ್ದೇನೆ. ದೇಶದ ಸೈನಿಕರಿಗೆ ಸಹಾಯ ಮಾಡಬೇಕೆಂಬ ತುಡಿತ ಇತ್ತು. ಅನಾರೋಗ್ಯದ ಕಾರಣ ಆದಷ್ಟು ಬೇಗ ಹಣವನ್ನು ದೇಶಕ್ಕೆ ಸಮರ್ಪಿಸಿ ಋಣಮುಕ್ತಳಾಗಬೇಕು ಎಂದು ಈ ನಿರ್ಧಾರ ಕೈಗೊಂಡಿದ್ದೇನೆ' ಎಂದು ಅವರು ಹೇಳಿದರು.

'ಕೇಂದ್ರ ಸರ್ಕಾರದ ಅಧಿಕೃತ ನಿಧಿಯಾದ 'ಭಾರತ್ ಕೆ ವೀರ್'ಗೆ ದೇಣಿಗೆಯ ಮೊತ್ತ ವರ್ಗಾಯಿಸಲಾಗುವುದು' ಎಂದು ಜಿಲ್ಲಾಧಿಕಾರಿ ತಿಳಿಸಿದರು. 86 ವರ್ಷದ ಕರಿಬಸಮ್ಮ ಸದ್ಯ ವೃದ್ಧಾಶ್ರಮವೊಂದರಲ್ಲಿ ನೆಲಸಿದ್ದಾರೆ.

ಕಾಂಗ್ರೆಸ್ ನಾಯಕರ ಜತೆ ಮೂವರು ಭಾಗಿ: ಡಿ.ವಿ. ಸದಾನಂದಗೌಡ ಹೇಳಿಕೆ

'ಅಡ್ಡ ಮತಕ್ಕೆ ಮುನ್ನ ರಹಸ್ಯ ಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಪರಿಷತ್ ಚುನಾವಣೆಗೂ ಮುನ್ನ ಕಾಂಗ್ರೆಸ್ ಮತ್ತು ಬಿಜೆಪಿಯ ಕೆಲವು ನಾಯಕರು ಐಷಾರಾಮಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ರಹಸ್ಯ ಸಭೆ ನಡೆಸಿದ್ದರು' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, 'ಚುನಾವಣೆಗೂ ಕೆಲವು ದಿನಗಳ ಮುಂಚೆಯೇ ಸಭೆ ನಡೆದಿತ್ತು. ಮೋದಿಯವರ ಅಭಿಮಾನಿಯೂ ಆಗಿರುವ ನನ್ನ ಆಪ್ತರೊಬ್ಬರು ದೂರವಾಣಿ ಕರೆ ಮಾಡಿ ರಹಸ್ಯ ಸಭೆಯ ವಿಚಾರ ನನ್ನ ಗಮನಕ್ಕೆ ತಂದಿದ್ದರು' ಎಂದರು.

'ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಮಹತ್ವದ ಸಭೆ ನಡೆಯುತ್ತಿದೆ. ಬಿಜೆಪಿಯ ಮೂವರು ನಾಯಕರು ಮತ್ತು ಕಾಂಗ್ರೆಸ್‌ನ ಇಬ್ಬರು ನಾಯಕರು ಭಾಗವಹಿಸಿದ್ದಾರೆ. ಪರಿಷತ್ ಚುನಾವಣೆಯಲ್ಲಿ ನಮ್ಮ ಶಾಸಕರನ್ನು ಬಳಸಿಕೊಳ್ಳುವ ಕುರಿತ ಸಭೆ ಇದಾಗಿರಬಹುದು ಎಂದು ಅವರು ನನಗೆ ತಿಳಿಸಿದ್ದರು' ಎಂದರು.

'ಕೂಡಲೇ ನಾನು ಈ ವಿಷಯವನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಗಮನಕ್ಕೆ ತರಲೆಂದು ಕರೆ ಮಾಡಿದೆ. ಇಬ್ಬರೂ ಸಂಪರ್ಕಕ್ಕೆ ಸಿಗಲಿಲ್ಲ. ಆನಂತರ ಪಕ್ಷದ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಕರೆ ಮಾಡಿ ವಿಚಾರ ತಿಳಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸುವಂತೆಯೂ ಹೇಳಿದ್ದೆ. ಆ ಬಳಿಕ ಇನ್ನೊಂದು ಸಭೆಯೂ ನಡೆಯಿತು. ಅದನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಯವರ ಗಮನಕ್ಕೆ ತಂದೆ. ಯಾವುದೇ ಪ್ರಯೋಜನ ಆಗಲಿಲ್ಲ' ಎಂದು ಸದಾನಂದಗೌಡ ಹೇಳಿದರು.

'ಚುನಾವಣೆ ಫಲಿತಾಂಶ ಬಂದ ನಂತರ ನಾನು ಯಾರಿಗೆ ಮಾಹಿತಿ ಕೊಟ್ಟಿದ್ದೆನೊ ಆ ಪ್ರಧಾನ ಕಾರ್ಯದರ್ಶಿ ನನಗೆ ಕರೆ ಮಾಡಿ, ನೀವು ಹೇಳಿದಂತೆಯೇ ಆಗಿದೆ ಎಂದಿದ್ದರು' ಎಂದರು.

'ಆಣೆ-ಪ್ರಮಾಣ ಸಲ್ಲದು'

'ಅಡ್ಡ ಮತದಾನ ಮಾಡಿದವರನ್ನು ಪತ್ತೆ ಮಾಡಲು ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡುವುದು ಸರಿಯಲ್ಲ. ಇದರಿಂದ, ಇಂಥ ವಿಷಯಗಳನ್ನು ನಿಭಾಯಿಸುವ ಶಕ್ತಿ ಪಕ್ಷಕ್ಕಿಲ್ಲ ಎಂಬ ಅಭಿಪ್ರಾಯ ಮೂಡುತ್ತದೆ' ಎಂದು ಸದಾನಂದಗೌಡ ಹೇಳಿದರು.

ವರಿಷ್ಠರಿಗೆ ಇಂದು ವಿವರಣೆ

ನವದೆಹಲಿ: ಕರ್ನಾಟಕ ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಡ್ಡ ಮತದಾನ ಪ್ರಕರಣದ ಬಗ್ಗೆ ಬಿಜೆಪಿ ರಾಜ್ಯ ನಾಯಕರು ಪಕ್ಷದ ವರಿಷ್ಠರಿಗೆ ಮಂಗಳವಾರ ವಿವರಣೆ ನೀಡಲಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹಾಗೂ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಅವರು ನವದೆಹಲಿಗೆ ಬಂದಿದ್ದು, ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರವಾಲ್ ಅವರನ್ನು ಮಂಗಳವಾರ ಬೆಳಿಗ್ಗೆ 11.30ಕ್ಕೆ ಭೇಟಿ ಮಾಡಲಿದ್ದಾರೆ. ಆ ಬಳಿಕ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿ ಮಾಡಲಿದ್ದಾರೆ.

'ಕೈ'ಗೆ ಮತ ಹಾಕುವ ದುಸ್ಥಿತಿ ಬಂದಿಲ್ಲ'

ಲಿಂಗಸುಗೂರು (ರಾಯಚೂರು ಜಿಲ್ಲೆ): 'ಪರಿಷತ್ ಚುನಾವಣೆಯಲ್ಲಿ ಪಕ್ಷದ ನಿರ್ದೇಶನದಂತೆ ಮತ ಚಲಾಯಿಸಿದ್ದೇನೆ. ನಾನು ಅಡ್ಡಮತದಾನ ಮಾಡಿರುವುದನ್ನು ಸಾಬೀತುಪಡಿಸಿದರೆ ಇಂದೇ ರಾಜಕೀಯದಿಂದ ನಿವೃತ್ತಿ ಪಡೆದು ಬಿಜೆಪಿ ಕಚೇರಿಯಲ್ಲಿ ಗೇಟ್ ಕಾಯ್ದುಕೊಂಡು, ಕಸಗುಡಿಸುವ ಕೆಲಸ ಮಾಡುತ್ತೇನೆ' ಎಂದು ಬಿಜೆಪಿ ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಗವಂತ ನನಗೆ ಸಾಕಷ್ಟು ಕೊಟ್ಟಿದ್ದಾನೆ. ಕಾಂಗ್ರೆಸ್ ಹಣಕ್ಕೆ ನನ್ನ ಮತ ಮಾರಿಕೊಳ್ಳುವ ದುಸ್ಥಿತಿ ಬಂದಿಲ್ಲ. ಬಿಜೆಪಿ ಶಾಸಕ ಎಂಬ ಕಾರಣಕ್ಕೆ ನನ್ನ ಕ್ಷೇತ್ರಕ್ಕೆ ಅನುದಾನ ನೀಡಿಲ್ಲ' ಎಂದು ದೂರಿದರು.

'ಪಕ್ಷದ ರಾಜ್ಯ ಘಟಕ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಧರ್ಮಸ್ಥಳಕ್ಕೆ ಬರುವಂತೆ ನನಗೆ ಸೂಚನೆ ನೀಡಿದರೆ ನಾನು ಖಂಡಿತ ಹೋಗುತ್ತೇನೆ' ಎಂದರು.

'ಖಾಲಿ ಹುದ್ದೆ ಭರ್ತಿ, ಬಡ್ತಿ ಚುರುಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು. ಅಧಿಕಾರಿ ಮತ್ತು ಸಿಬ್ಬಂದಿಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ವಿಳಂಬ ಆಗಬಾರದು' ಎಂದು ಅಧಿಕಾರಿಗಳಿಗೆ ಕಂದಾಯ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ ಸೂಚನೆ ನೀಡಿದರು.



ಜಿ. ಪರಮೇಶ್ವರ

ಇಲಾಖೆಯ ವಿವಿಧ ಯೋಜನೆಗಳು ಮತ್ತು ಸಾರ್ವಜನಿಕ ಸೇವೆಗಳ ಅನುಷ್ಠಾನ ಕುರಿತು ಸೋಮವಾರ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ಜ್ಯೇಷ್ಠತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಿ, ನಿಯಮಾನುಸಾರ ಪಾರದರ್ಶಕವಾಗಿ ಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದರು.

'ಬಾಕಿ ಉಳಿದಿರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡಬೇಕು. ಜೊತೆಗೆ, ಇಲಾಖೆಯ ಎಲ್ಲ ಕಾರ್ಯಗಳ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಗುರಿ ಸಾಧಿಸುವ ಕಡೆಗೆ ಗಮನಹರಿಸಬೇಕು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತಷ್ಟು ವೇಗ ನೀಡಬೇಕು' ಎಂದು ಸೂಚನೆ ನೀಡಿದರು.

'ಕಂದಾಯ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಉಪ ವಿಭಾಗಾಧಿಕಾರಿಗೆ (ಎಸಿ) ಹೆಚ್ಚಿನ ಜವಾಬ್ದಾರಿ ನೀಡಬೇಕು. ಭೂಮಾಪಕರ ಸಭೆ ಕರೆದು, ಅವರ ಸಮಸ್ಯೆಗಳು, ಅಹವಾಲುಗಳು ಹಾಗೂ ಬೇಡಿಕೆಗಳನ್ನು ಆಲಿಸಬೇಕು. ಭೂಮಾಪಕರ ಸೇವಾ ಹಾಗೂ ವೃತ್ತಿಪರ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಂಡು, ತ್ವರಿತವಾಗಿ ಇತ್ಯರ್ಥಪಡಿಸಬೇಕು' ಎಂದರು.

'ಇ-ಪೌತಿ ಖಾತೆ ಸೇರಿದಂತೆ ಇಲಾಖೆಯ ಎಲ್ಲ ಆನ್‌ಲೈನ್ ಮತ್ತು ಸಾರ್ವಜನಿಕ ಸೇವೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ನಾಗರಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಸೇವೆಗಳ ವಿತರಣೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಕಾಪಾಡಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಭೂ ದಾಖಲೆ, ಖಾತೆ ಬದಲಾವಣೆ, ಸರ್ವೆ ಕಾರ್ಯ, ಮ್ಯುಟೇಷನ್ ಹಾಗೂ ಇತರೆ ಕಂದಾಯ ಸೇವೆಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆ ಮಾಡಲು ನಿರಂತರವಾಗಿ ಮೇಲ್ವಿಚಾರಣೆ ನಡೆಸಬೇಕು' ಎಂದೂ ಹಿರಿಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

'ಹುರ್‍ರಾ ಟಾಪ್' ಏರಿದ ವಿದ್ಯಾರ್ಥಿನಿಯರು

ಗದಗ: ಗದಗ, ಧಾರವಾಡ ಮತ್ತು ಹಾವೇರಿ ಜಿಲ್ಲೆಯ ಮೂವರು ವಿದ್ಯಾರ್ಥಿನಿಯರು, ಸಮುದ್ರ ಮಟ್ಟದಿಂದ 15,500 ಅಡಿ ಎತ್ತರದ ಉತ್ತರಾಖಂಡದ ಉತ್ತರಕಾಶಿಯ 'ಹುರ್‍ರಾ ಟಾಪ್' ಪರ್ವತ ಏರಿದ್ದಾರೆ.

ಗದಗ ಜಿಲ್ಲೆಯ ಜಕ್ಕಲಿ ಗ್ರಾಮದ ನಿವಾಸಿ, ಗದಗದ ಜೆ.ಟಿ. ಕಾಲೇಜಿನ ಬಿ.ಎಸ್‌ಸಿ ವಿದ್ಯಾರ್ಥಿನಿ ಸೃಷ್ಟಿ ಉಮೇಶ ಮೇಟಿ, ಧಾರವಾಡ ಜಿಲ್ಲೆಯ ಅಣ್ಣಿಗೇರಿ ನಿವಾಸಿ, ಗದಗದ ಎಎಸ್‌ಎಸ್ ಕಾಲೇಜಿನ ವಿದ್ಯಾರ್ಥಿನಿ ಅಶ್ವಿನಿ ಮತ್ತು ಹಾವೇರಿ ಜಿಲ್ಲೆಯ ಯಕಲಾಸಪುರದ ನಿವಾಸಿ, ಮುಂಡರಗಿ ಕೆಆರ್‌ಬಿ ಕಾಲೇಜಿನ ಜಯಲಕ್ಷ್ಮಿ ಈ ಸಾಧಕಿಯರು.

ಎನ್‌ಸಿಸಿ ಕೆಡೆಟ್‌ಗಳಾದ ಈ ಮೂವರು, ಉತ್ತರಕಾಶಿಯಲ್ಲಿರುವ ನೆಹರೂ ಇನ್‌ಸ್ಟಿಟ್ಯೂಟ್ ಆಫ್ ಮೌಂಟೇನಿಯರಿಂಗ್ (ಎನ್ಐಎಂ) ಆವರಣದಲ್ಲಿ ಪರ್ವತಾರೋಹಣ ತರಬೇತಿಯಲ್ಲಿ ಪಾಲ್ಗೊಂಡಿದ್ದಾರೆ. ಸಮುದ್ರ ಮಟ್ಟದಿಂದ 12 ಸಾವಿರ ಅಡಿ ಎತ್ತರವಿರುವ ಬೇಸ್‌ಗೆ ಮೂರು ದಿನ, ರಸ್ತೆ ಮೂಲಕ ನಡೆದು ಹೋಗಿದ್ದಾರೆ. ಅಲ್ಲಿಂದ 3,500 ಅಡಿ ಎತ್ತರದ 'ಹುರ್‍ರಾ' ಟಾಪ್ ಶಿಖರವನ್ನು ಜೂನ್ 17ರಂದು ಎರಡೂವರೆ ಗಂಟೆಯಲ್ಲಿ ಏರಿದ್ದಾರೆ.



ಉತ್ತರಾಖಂಡದ ಉತ್ತರಕಾಶಿಯಲ್ಲಿ ಹುರ್‍ರಾ ಟಾಪ್ ಪರ್ವತ ಏರಿ, ಭಾರತದ ಧ್ವಜ ಹಿಡಿದು ಸಂಭ್ರಮಿಸಿದ ಜಯಲಕ್ಷ್ಮಿ, ಅಶ್ವಿನಿ ಮತ್ತು ಸೃಷ್ಟಿ

ಮೊಬೈಲ್ ಸಂದೇಶ, ಫೋಟೊಕ್ಕೆ ಮೂರು ಜೀವ ಬಲಿ

ತಿ.ನರಸೀಪುರ (ಮೈಸೂರು ಜಿಲ್ಲೆ): ಕೆಲವೇ ದಿನಗಳಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡಬೇಕಿದ್ದ ವಧು ಹಾಗೂ ಆಕೆಯ ಪೋಷಕರು ತಾಲ್ಲೂಕಿನ ಕೆಂಪಯ್ಯನಹುಂಡಿ ಗ್ರಾಮದ ಮನೆಯಲ್ಲಿ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮದ ಶಿವಣ್ಣ, ಅವರ ಪತ್ನಿ ನಾಗರತ್ನ ಹಾಗೂ ಪುತ್ರಿ ರಕ್ಷಿತಾ ಮೃತರು. ಜೂನ್ 24 ರಂದು (ಬುಧವಾರ) ರಕ್ಷಿತಾ ಮದುವೆ ನಡೆಯಬೇಕಿತ್ತು. ಗ್ರಾಮದ ಉಲ್ಲಾಸ್ ಗೌಡ ನೀಡುತ್ತಿದ್ದ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಸಂತ್ರಸ್ತರು ಮರಣಪತ್ರ ಬರೆದಿಟ್ಟಿದ್ದಾರೆ. ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ರಕ್ಷಿತಾ ಈ ಹಿಂದೆ ತನಗೆ ಕಳಿಸಿದ್ದ ಸಂದೇಶ ಹಾಗೂ ಕೆಲ ಫೋಟೊಗಳನ್ನು ಇಟ್ಟುಕೊಂಡು ಉಲ್ಲಾಸ್ ಗೌಡ ಬೆದರಿಸಿ ಕಿರುಕುಳ ನೀಡುತ್ತಿದ್ದ. ರಕ್ಷಿತಾಳನ್ನು ಮದುವೆಯಾಗಬೇಕಿದ್ದ ಯುವಕನ ಜೊತೆಯೂ ಅವನ್ನು ಹಂಚಿಕೊಂಡಿದ್ದ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಆರೋಪಿಯನ್ನು ಬಂಧಿಸುವವರೆಗೂ ಶವಗಳನ್ನು ಎತ್ತಲು ಬಿಡುವುದಿಲ್ಲ ಎಂದು ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಪೊಲೀಸರು ಕುಟುಂಬಸ್ಥರ ಮನವೊಲಿಸಿ ಶವಗಳನ್ನು ಮೈಸೂರು ಕೆ.ಆರ್.ಆಸ್ಪತ್ರೆಗೆ ಕಳುಹಿಸಿದರು.

ನಾಡಬಾಂಬ್ ಸ್ಫೋಟ: 3 ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಹಳಿಯಾಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಕಾಳಗಿನಕೊಪ್ಪ ಗ್ರಾಮದಲ್ಲಿ ಸೋಮವಾರ ನಸುಕಿನಲ್ಲಿ ನಾಡಬಾಂಬ್ ಸ್ಫೋಟಗೊಂಡು ಮೂರು ಮನೆಗಳಿಗೆ ಹಾನಿಯಾಗಿದೆ.

ವಸಂತ್ ರಾಯಪ್ಪ ಕೊರವರ ಎಂಬವರ ಹಳೆಯ ಮನೆಯಲ್ಲಿ ಸ್ಫೋಟ ಸಂಭವಿಸಿದ್ದು, ಅಲ್ಲಿ ಯಾರೂ ವಾಸಿಸುತ್ತಿರಲಿಲ್ಲ.

'ಬಾಂಬ್ ಸ್ಫೋಟಗೊಂಡ ಕೂಡಲೇ ಆ ಮನೆಯಿಂದ ಹೊರಗಡೆ ಬಂದ ಇಬ್ಬರು, ಕೆರೆಯ ಬಳಿ ನಾಡಬಾಂಬ್‌ಗಳಿದ್ದ ಚೀಲ ಎಸೆದು ಪರಾರಿಯಾದರು ಎಂಬ ಮಾಹಿತಿ ಗ್ರಾಮಸ್ಥರಿಂದ ಗೊತ್ತಾಗಿದೆ. ಹಾನಿಯಾದ ಇನ್ನೆರಡು ಮನೆಗಳಲ್ಲಿ ಯಾರಿಗೂ ಅಪಾಯವಾಗಿಲ್ಲ' ಎಂದು ಹಳಿಯಾಳ ಠಾಣೆ ಪೊಲೀಸರು ತಿಳಿಸಿದ್ದಾರೆ.

ವೈದ್ಯ ಸೇರಿ ನಾಲ್ವರ ಬಂಧನ

ಶಿಶು ಮಾರಾಟ ಪ್ರಕರಣ

ಪ್ರಜಾವಾಣಿ ವಾರ್ತೆ

ಉಡುಪಿ: ಮಕ್ಕಳಿಲ್ಲದ ದಂಪತಿಗೆ ಹೆಣ್ಣು ಶಿಶುವನ್ನು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದ ಆರೋಪದಲ್ಲಿ ವೈದ್ಯ ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಉಡುಪಿಯ ಕಾಮತ್ ನರ್ಸಿಂಗ್ ಹೋಮ್‌ನ ಡಾ.ಕೆ.ಸುರೇಂದ್ರ ಕಾಮತ್ (76), ಶಿಶುವನ್ನು ಖರೀದಿಸಿದ್ದ ನೇಜಾರಿನ ಎಸ್. ಪ್ರಕಾಶ್ (50) ಹಾಗೂ ಶಿಶುವನ್ನು ನೀಡಿದ್ದ ಕಾರ್ಕಳದ ಕೆದಿಂಜೆಯ ಸಂಪತ್ (22) ಹಾಗೂ ಸುಪ್ರೀತಿ (22) ಬಂಧಿತ ಆರೋಪಿಗಳು.

ಸಂತೆಕಟ್ಟೆಯ ನೇಜಾರುವಿನ ಪ್ರಕಾಶ್ ಹಾಗೂ ಪೂರ್ಣಿಮಾ ದಂಪತಿ ಸುಮಾರು ಒಂದು ತಿಂಗಳ ಹೆಣ್ಣು ಶಿಶುವನ್ನು ತಂದು ಯಾವುದೇ ಕಾನೂನಾತ್ಮಕ ಪ್ರಕ್ರಿಯೆಗಳಿಲ್ಲದೆ ಅನಧಿಕೃತವಾಗಿ ಸಾಕುತ್ತಿದ್ದಾರೆ ಎಂದು ಬ್ರಹ್ಮಾವರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯ (ಸಿಡಿಪಿಒ) ವಲಯ ಮೇಲ್ವಿಚಾರಕರು ಮಕ್ಕಳ ರಕ್ಷಣಾ ಘಟಕಕ್ಕೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿದ್ದರು.

'ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ದಂಪತಿ ಸಂಶಯಾಸ್ಪದ ಹೇಳಿಕೆ ನೀಡಿದ್ದರು. ಆ ಬಗ್ಗೆ ಇನ್ನಷ್ಟು ವಿಚಾರಿಸಿದಾಗ ತಮಗೆ ಮದುವೆಯಾಗಿ 11 ವರ್ಷಗಳಾದರೂ ಮಕ್ಕಳಾಗದೇ ಇರುವ ಕಾರಣಕ್ಕೆ ಕಾಮತ್ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆವು. ಆ ವೇಳೆ 'ಕಾಮತ್ ನರ್ಸಿಂಗ್ ಹೋಮ್'ನಲ್ಲಿ ಶಿಶು ಇರುವ ವಿಚಾರ ತಿಳಿದಿದೆ. ಆ ಬಗ್ಗೆ ಡಾ.ಕೆ. ಸುರೇಂದ್ರ ಕಾಮತ್ ಅವರೊಂದಿಗೆ ಚರ್ಚಿಸಿದಾಗ ಅವರು ಶಿಶುವನ್ನು ನೀಡಲು ಒಪ್ಪಿ, ನಕಲಿ ದಾಖಲೆ ಸೃಷ್ಟಿಸಿ ಮಗುವಿನ ಜನನ ಪ್ರಮಾಣ ಪತ್ರ ಮಾಡಿಸಿಕೊಟ್ಟಿದ್ದಾರೆ ಎಂದು ದಂಪತಿ ಒಪ್ಪಿಕೊಂಡಿದ್ದಾರೆ' ಎಂದು ಬ್ರಹ್ಮಾವರ ಸಿಡಿಪಿಒ ಕಚೇರಿಯ ವಲಯ ಮೇಲ್ವಿಚಾರಕರು ದೂರಿನಲ್ಲಿ ತಿಳಿಸಿದ್ದಾರೆ.



ಎಸ್. ಪ್ರಕಾಶ್



ಕೆ.ಸುರೇಂದ್ರ ಕಾಮತ್



ಸುಪ್ರೀತಿ




ಸಂಪತ್

ಮುಮ್ಮಡಿ ನಿರ್ವಾಣ ಸ್ವಾಮೀಜಿ ಲಿಂಗೈಕ್ಯ

ಪ್ರಜಾವಾಣಿ ವಾರ್ತೆ

ಕನಕಪುರ: ಪಟ್ಟಣದ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ (84) ಅವರು ವಯೋಸಹಜ ಕಾಯಿಲೆಯಿಂದಾಗಿ ಸೋಮವಾರ ಲಿಂಗೈಕ್ಯರಾಗಿದ್ದಾರೆ.



ಮುಮ್ಮಡಿ ನಿರ್ವಾಣ ಸ್ವಾಮೀಜಿ

ವಾರದ ಹಿಂದೆ ಬೆಂಗಳೂರಿನ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸಂಜೆ 4 ಗಂಟೆ ಸುಮಾರಿಗೆ ಕೊನೆಯುಸಿರೆಳೆದರು.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ವೀರಭದ್ರ ಮತ್ತು ತಾಯಮ್ಮ ದಂಪತಿ ಪುತ್ರರಾದ ಅವರು 1943 ಮೇ 20ರಂದು ಜನಿಸಿದರು. 1970ರಲ್ಲಿ ಮಳವಳ್ಳಿ ತಾಲ್ಲೂಕಿನ ನೆಲ್ಲಿಗೆರೆ ಮಠದ ಉತ್ತರಾಧಿಕಾರಿಯಾಗಿ ನೇಮಕವಾದರು. 1977ರಲ್ಲಿ ದೇಗುಲ ಮಠದ 11ನೇ ಉತ್ತರಾಧಿಕಾರಿಯಾಗಿ ನೇಮಕಗೊಂಡರು.

ಮಠದ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಂಜೆ 4 ಗಂಟೆಗೆ ಮಠದ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮಠದ ಮೂಲಗಳು ತಿಳಿಸಿವೆ.

1,600 ಕಾನ್‌ಸ್ಟೆಬಲ್ ನೇಮಕಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ 1,600 (ಸಿಎಆರ್/ಡಿಎಆರ್) ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜುಲೈ 22 ಕೊನೆ ದಿನ.

ಇತರೆ ವೃಂದದ 1,421 ಹಾಗೂ ಸ್ಥಳೀಯ ವೃಂದದ 179 ಹುದ್ದೆಗಳಿಗೆ ಪ್ರತ್ಯೇಕ ಅರ್ಜಿ ಆಹ್ವಾನಿಸಲಾಗಿದೆ. ಸೆ.6ರಂದು ಪ್ರತ್ಯೇಕವಾಗಿಯೇ ಲಿಖಿತ ಪರೀಕ್ಷೆ ನಡೆಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ದ್ವಿತೀಯ ಪಿಯು ಅಥವಾ ತತ್ಸಮಾನ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಋಣಾತ್ಮಕ ಮೌಲ್ಯಮಾಪನ ಇರುತ್ತದೆ. ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ವೃತ್ತವನ್ನು ಶೇಡ್ ಮಾಡುವುದು ಕಡ್ಡಾಯ. ಇದಕ್ಕೆ ಹೆಚ್ಚುವರಿಯಾಗಿ ಐದು ನಿಮಿಷ ಸಮಯ ನೀಡಲಾಗುತ್ತದೆ. ಒಂದು ವೇಳೆ ಐದನೇ ವೃತ್ತ ಶೇಡ್ ಮಾಡದೇ ಇದ್ದಲ್ಲಿ ಪ್ರತಿ ಪ್ರಶ್ನೆಗೆ 0.25 ಅಂಕ ಕಡಿತಗೊಳಿಸಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಡಾ.ಶರಣ್ಯಾ ಪದ್ಮಾ ವಿರುದ್ಧದ ಕ್ರಿಮಿನಲ್ ಪ್ರಕರಣ ತಡೆಗೆ ಹೈಕೋರ್ಟ್ ನಕಾರ

'ನಂದಿನಿ ಹಾಲಿನ ಉತ್ಪನ್ನಗಳ ಅಪಪ್ರಚಾರ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ನಂದಿನಿ ಹಾಲು ಹಾಗೂ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಅಪಪ್ರಚಾರ ಮಾಡುವ ರೀಲ್ಸ್‌ಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ಆರೋಪದಡಿ ಚರ್ಮರೋಗ ತಜ್ಞೆ ಡಾ.ಶರಣ್ಯಾ ಪದ್ಮಾ ವಿರುದ್ಧ ದಾಖಲಾಗಿರುವ ಎಫ್ಐಆರ್‌ಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

'ನಗರದ 32ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿನ ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಡಾ.ಶರಣ್ಯಾ (42) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

> **ನಂದಿನಿ ಹಾಲು ಚೆನ್ನಾಗಿಲ್ಲ ಅಂದ್ರೆ ನೀವು ಕುಡಿಬೇಡಿ. ಆದರೆ, ಇಂತಹ ಅಪಪ್ರಚಾರದ ಕೆಲಸ ಏಕೆ ಮಾಡುತ್ತೀರಾ? ಇನ್‌ಸ್ಟಾಗ್ರಾಂ ಇರುವುದು ಇಂತಹ ಕೆಲಸ ಮಾಡುವುದಕ್ಕಾಗಿಯೇ?**
> **ನ್ಯಾ.ಎಂ.ನಾಗಪ್ರಸನ್ನ**

ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, 'ನಂದಿನಿ ಹಾಲು ಸರಿಯಿಲ್ಲ ಎಂದು ನೀವು ಹೇಗೆ ಹೇಳುತ್ತೀರಾ? ನೀವೇನು ಹಾಲು ಪರೀಕ್ಷೆ ಮಾಡಿದ್ದೀರಾ? ಈ ರೀತಿ ಹೇಳುವ ಮೂಲಕ ನೀವು ಜನರಲ್ಲಿ ಆತಂಕ ಮೂಡಿಸಿದ್ದೀರಿ' ಎಂದು ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿತು.

'ಹಾಲು ಪರೀಕ್ಷೆ ಮಾಡಿ ಅದರ ಗುಣಮಟ್ಟವನ್ನು ಏನಾದರೂ ದೃಢೀಕರಿಸಿದ್ದೀರಾ ಮತ್ತು ಈ ಬಗ್ಗೆ ಸರ್ಕಾರಕ್ಕೆ ಯಾವತ್ತಾದರೂ ಮಾಹಿತಿ ನೀಡಿದ್ದೀರಾ' ಎಂದು ಖಾರವಾಗಿ ಪ್ರಶ್ನಿಸಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧದ ಎಫ್ಐಆರ್‌ಗೆ ತಡೆ ನೀಡಲು ನಿರಾಕರಿಸಿತು.

ಪ್ರಕರಣದ ಪ್ರತಿವಾದಿಗಳಾದ ರಾಜ್ಯ ಪ್ರಾಸಿಕ್ಯೂಷನ್, ದೂರುದಾರೆ ಕೆಎಂಎಫ್ ನಿರ್ದೇಶಕಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಕೆಎಂಎಫ್ ಸ್ಪಷ್ಟನೆ: 'ಕೆಎಂಎಫ್ ಉತ್ಪನ್ನಗಳಿಗೆ ಯಾವುದೇ ರಾಸಾಯನಿಕ ಹಾಕಲಾಗುವುದಿಲ್ಲ. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಸಂಪೂರ್ಣ ಸುರಕ್ಷಿತವಾಗಿವೆ. ಸ್ವಚ್ಛ ಹಾಗೂ ಉತ್ತಮ ಗುಣಮಟ್ಟದಿಂದ ಕೂಡಿವೆ. 'ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ' ನಿಗದಿಪಡಿಸಿದ ಎಲ್ಲಾ ಗುಣಮಟ್ಟ ಮತ್ತು ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ' ಎಂದು ಕೆಎಂಎಫ್ ಸ್ಪಷ್ಟನೆ ನೀಡಿತ್ತು.

'ಈತನಕ ಕೆಎಂಎಫ್ ಉತ್ಪನ್ನಗಳ ಬಗ್ಗೆ ಯಾವುದೇ ದೂರು ಬಂದಿಲ್ಲ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುದ್ದಿ ಸುಳ್ಳು. ಕೆಎಂಎಫ್ ಉತ್ಪನ್ನಗಳ ಬಗ್ಗೆ ಇದೇ ರೀತಿ ಸುಳ್ಳು ಸುದ್ದಿ ಹಬ್ಬಿಸಿದ್ದರೆ ಕ್ರಮ ಕೈಗೊಳ್ಳಲಾಗುತ್ತದೆ. ಡಾ.ಶರಣ್ಯಾ ಪದ್ಮಾ ವಿರುದ್ಧ ಕೇಸ್ ದಾಖಲಿಸಲಾಗಿದೆ' ಎಂದು ಎಚ್ಚರಿಸಿತ್ತು.

ಕ್ಯಾನ್ಸರ್ ಭೀತಿ ಸೃಷ್ಟಿಸಿದ ರೀಲ್ಸ್

ಡಾ.ಶರಣ್ಯಾ ಪದ್ಮಾ ಕೋಲಾರ ಜಿಲ್ಲೆಯ ಮಾಲೂರಿನ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದು, 2026ರ ಫೆಬ್ರುವರಿ 8ರಂದು ಸಾಮಾಜಿಕ ಜಾಲತಾಣದಲ್ಲಿ ನಂದಿನಿ ಹಾಲಿನ ಉತ್ಪನ್ನಗಳ ಕುರಿತು ರೀಲ್ಸ್ ಹರಿಬಿಟ್ಟಿದ್ದರು.

'ನಂದಿನಿ ಉತ್ಪನ್ನಗಳಾದ ಕ್ರೀಮ್ ಬನ್, ಸ್ಟ್ರಾಬೆರ್ರಿ ಫ್ಲೇವರ್ಡ್ ಮಿಲ್ಕ್ ಹಾಗೂ ಸ್ಲ್ಯಾಷ್ ಡ್ರಿಂಕ್ಸ್ ಉತ್ಪನ್ನಗಳು ವಿಷಕಾರಿ ಹಾಗೂ ರಾಸಾಯನಿಕ ಯುಕ್ತವಾಗಿವೆ. ಇವುಗಳ ಸೇವನೆಯಿಂದ ಭವಿಷ್ಯದಲ್ಲಿ ಕ್ಯಾನ್ಸರ್ ಬರಲಿದೆ. ಈ ಉತ್ಪನ್ನಗಳನ್ನು ನೈಸರ್ಗಿಕವಲ್ಲದ ಕೃತಕ ಬಣ್ಣ ಬೆರೆಸಿ ತಯಾರಿಸಲಾಗಿದೆ. ನಂದಿನಿ ಉತ್ಪನ್ನಗಳ ತಯಾರಿಕೆಗೆ, 'ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ' (ಎಫ್ಎಸ್ಎಸ್ಎಐ) ಹೇಗೆ ಅನುಮತಿ ನೀಡಿದೆ' ಎಂದು ಪ್ರಶ್ನಿಸಿದ್ದರು.

'ಕೆಎಂಎಫ್ ಒಂದು ಸರ್ಕಾರಿ ಸ್ವಾಮ್ಯದ ಮಂಡಳಿ. ಸರ್ಕಾರ ಇದರ ಉತ್ಪನ್ನಗಳನ್ನು ಮಾರ್ಕೆಟಿಂಗ್ ಮಾಡಿ ಲಾಭ ಪಡೆಯುವ ಭ್ರಮೆಯಲ್ಲಿದೆ. ಹೀಗಾಗಿ, ಕೆಎಂಎಫ್ ರೀತಿಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡಬಾರದು' ಎಂದು ಶರಣ್ಯಾ ತಮ್ಮ ರೀಲ್ಸ್‌ನಲ್ಲಿ ವಿವರಿಸಿದ್ದರು. ಈ ವಿಡಿಯೊ ಇನ್‌ಸ್ಟಾಗ್ರಾಂನಲ್ಲಿ ಹರಿದಾಡಿ, ಅಪಪ್ರಚಾರಕ್ಕೆ ಕಾರಣವಾಗಿತ್ತು.

ಅಂಕೇಗೌಡರ ಸಂಗ್ರಹದ ಪುಸ್ತಕಗಳಿಗೆ ಕಟ್ಟಡ ವ್ಯವಸ್ಥೆಗೆ ಸೂಚನೆ

'ಪುಸ್ತಕ ಪ್ರೇಮಿ'ಗೆ 2 ಎಕರೆ ಜಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದ್ಮಶ್ರೀ ಪುರಸ್ಕೃತ, 'ಪುಸ್ತಕ ಪ್ರೇಮಿ' ಎಂದೇ ಗುರುತಿಸಿಕೊಂಡಿರುವ ಅಂಕೇಗೌಡ ಅವರ ಸಂಗ್ರಹದಲ್ಲಿರುವ 20 ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳನ್ನು ಸಂರಕ್ಷಿಸಿಡಲು ಎರಡು ಎಕರೆ ಜಾಗ ಮತ್ತು ₹5 ಕೋಟಿ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳುವಂತೆ ಮಂಡ್ಯ ಜಿಲ್ಲಾಧಿಕಾರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಷರಾ ಬರೆದಿದ್ದಾರೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಅವರನ್ನು ಸೋಮವಾರ ಭೇಟಿ ಮಾಡಿದ ಅಂಕೇಗೌಡ ಅವರು ತಮ್ಮ ಬಳಿ ಇರುವ ಪುಸ್ತಕಗಳ ನಿರ್ವಹಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಆರ್ಥಿಕ ನೆರವು ನೀಡುವಂತೆ ಮನವಿ ಸಲ್ಲಿಸಿದರು. ಮನವಿಪತ್ರದ ಮೇಲೆಯೇ ಮುಖ್ಯಮಂತ್ರಿ ಈ ಸೂಚನೆ ನೀಡಿದ್ದಾರೆ.

'ಸೂಕ್ತ ಜಾಗ ಹುಡುಕಿ, ಸುಸಜ್ಜಿತ ಕಟ್ಟಡ ನಿರ್ಮಿಸಲು ವ್ಯವಸ್ಥೆ ಮಾಡಬೇಕು' ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೂ ಸೂಚನೆ ನೀಡಿದರು.

ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ 'ಅಂಕೇಗೌಡ ಜ್ಞಾನ ಪ್ರತಿಷ್ಠಾನ'ದ ಮೂಲಕ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಅಂಕೇಗೌಡ ಅವರು ಸಂಗ್ರಹಿಸಿದ್ದಾರೆ. ಮುಖ್ಯಮಂತ್ರಿ ಬಳಿ ಮನವಿ ಮಾಡಿದ ಅವರು, 'ದೇಶದ ಅತಿದೊಡ್ಡ ವೈಯಕ್ತಿಕ ಗ್ರಂಥಾಲಯ ಇದಾಗಿದ್ದು, ನೀವು ಸೂಕ್ತ ಕಟ್ಟಡ ವ್ಯವಸ್ಥೆ ಮಾಡಿದರೆ ಮಕ್ಕಳಿಗೆ ಅರಿವಿನ ತಾಣವಾಗಿ ಮಾರ್ಪಾಡಾಗಲಿದೆ. ಸಂಗ್ರಹದಲ್ಲಿ ಅಪರೂಪದ ಪುಸ್ತಕಗಳು, ಅತ್ಯುತ್ತಮ ದಾಖಲೆಗಳಿವೆ' ಎಂದು ವಿವರಿಸಿದರು. ಇದೇ ವೇಳೆ ತಮ್ಮ ಬಳಿ ಇರುವ ಅಪರೂಪದ ನಾಣ್ಯಗಳು ಮತ್ತು ಅಂಚೆ ಚೀಟಿಗಳನ್ನೂ ತೋರಿಸಿ ಅದರ ಬಗ್ಗೆ ವಿವರಣೆ ನೀಡಿದರು.

ಈ ವೇಳೆ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆಗಿರುವ ಶಾಸಕ ವಿಜಯಾನಂದ ಕಾಶಪ್ಪನವರ್ ಮತ್ತು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಉಪಸ್ಥಿತರಿದ್ದರು.



'ಪುಸ್ತಕ ಪ್ರೇಮಿ' ಅಂಕೇಗೌಡ ಅವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸನ್ಮಾನಿಸಿದರು



ಇಂಟರ್‌ಮಿಟೆಂಟ್ ಫಾಸ್ಟಿಂಗ್

ಉಪವಾಸದ ಶಿಸ್ತು

• ಚೈತ್ರಾ ಕೆ. ಆಚಾರ್ಯ

‘ಇಂಟರ್‌ಮಿಟೆಂಟ್ ಫಾಸ್ಟಿಂಗ್’ ಎಂದರೆ ದಿನದ 24 ಗಂಟೆಗಳನ್ನು ‘ಊಟದ ಅವಧಿ’ ಮತ್ತು ‘ಉಪವಾಸದ ಅವಧಿ’ ಎಂದು ವಿಂಗಡಿಸಿ ತಿನ್ನುವ ಕ್ರಮ.. ಇದು ‘ಏನು ತಿನ್ನಬೇಕು’ ಎಂದು ಹೇಳುವುದಿಲ್ಲ, ‘ಯಾವಾಗ ತಿನ್ನಬೇಕು’ ಎಂದು ಮಾತ್ರ ನಿಗದಿಪಡಿಸುತ್ತದೆ. ‘ಸೂರ್ಯ ಮುಳುಗಿದ ಮೇಲೆ ತಿನ್ನಬೇಡಿ’ ಎಂಬ ಹಳೆಯ ಆರೋಗ್ಯ ಸೂತ್ರವೇ ಇಂದಿನ ವೈಜ್ಞಾನಿಕ ಇಂಟರ್ ಮಿಟೆಂಟ್ ಫಾಸ್ಟಿಂಗ್‌ನ ತತ್ವ.

ಉಪವಾಸದ ಅವಧಿಯಲ್ಲಿ ಝೀರೋ ಕ್ಯಾಲೋರಿ ನಿಯಮ ಪಾಲಿಸಬೇಕು. ನೀರು, ಸಕ್ಕರೆ ಇಲ್ಲದ ಬ್ಲ್ಯಾಕ್ ಕಾಫಿ, ಗ್ರೀನ್ ಟೀ, ನಿಂಬೆ ನೀರು ಅಥವಾ ಚಿಟಿಕೆ ಕಲ್ಲುಪ್ಪು ಬೆರೆಸಿದ ನೀರು ಮಾತ್ರ ಸೇವಿಸಬೇಕು. ಹಾಲು, ಸಕ್ಕರೆ, ಹಣ್ಣಿನ ರಸ ಅಥವಾ ಕ್ಯಾಲೋರಿ ಇರುವ ಯಾವುದೇ ಆಹಾರ-ಪಾನೀಯ ಸೇವಿಸಿದರೆ ಉಪವಾಸ ಮುರಿದಂತೆ.

ವಿಜ್ಞಾನದ ಪ್ರಕಾರ, 12 ರಿಂದ 14 ಗಂಟೆಗಳಿಗೂ ಹೆಚ್ಚು ಕಾಲ ಆಹಾರ ಸೇವಿಸದಿದ್ದಾಗ ದೇಹದಲ್ಲಿ ಇನ್ಸುಲಿನ್ ಮಟ್ಟ ಗಣನೀಯವಾಗಿ ಇಳಿಯುತ್ತದೆ. ಇದರಿಂದ ದೇಹವು ಶಕ್ತಿಗಾಗಿ ಸಕ್ಕರೆ ಬದಲು ಶೇಖರಣೆಯಾದ ಕೊಬ್ಬನ್ನು ಕರಗಿಸಲು ಪ್ರಾರಂಭಿಸುತ್ತದೆ. ಇದರಿಂದ ದೇಹದ ತೂಕ ಮತ್ತು ರಕ್ತದ ಸಕ್ಕರೆಮಟ್ಟ– ಎರಡನ್ನೂ ನಿಯಂತ್ರಿಸಬಹುದು.

ಪಾಲಿಸುವುದು ಹೇಗೆ?

ಜನಪ್ರಿಯ ವಿಧಾನಗಳು

- **12:12 ವಿಧಾನ:** 12 ಗಂಟೆ ಉಪವಾಸ, 12 ಗಂಟೆ ಊಟ. ಉದಾ: ರಾತ್ರಿ 8ಕ್ಕೆ ರಾತ್ರಿ ಊಟ ಮುಗಿಸಿ, ಬೆಳಗ್ಗೆ 8ಕ್ಕೆ ಉಪಾಹಾರ. ಆರಂಭಿಕರಿಗೆ ಅತ್ಯಂತ ಸುಲಭ ಮತ್ತು ಸುರಕ್ಷಿತ.
- **14:10 ವಿಧಾನ:** 14 ಗಂಟೆ ಉಪವಾಸ, 10 ಗಂಟೆ ಊಟ. ಉದಾ: ರಾತ್ರಿ 8ಕ್ಕೆ ರಾತ್ರಿ ಊಟ ಮುಗಿಸಿ, ಮರುದಿನ ಬೆಳಿಗ್ಗೆ 10ಕ್ಕೆ ಉಪಾಹಾರ.
- **16:8 ವಿಧಾನ:** 16 ಗಂಟೆ ಉಪವಾಸ, 8 ಗಂಟೆ ಊಟ. ಉದಾ: ರಾತ್ರಿ 8ಕ್ಕೆ ರಾತ್ರಿ ಊಟ ಮುಗಿಸಿ, ಮರುದಿನ ಮಧ್ಯಾಹ್ನ 12ಕ್ಕೆ ಮೊದಲ ಊಟ. ಅತಿ ಹೆಚ್ಚು ವೈಜ್ಞಾನಿಕ ಸಂಶೋಧನೆ ಇರುವ ವಿಧಾನ ಇದಾಗಿದೆ.

‘ರಾತ್ರಿ ಮತ್ತು ಬೆಳಿಗ್ಗೆ ಏನನ್ನೂ ತಿನ್ನದೆ ಉಪವಾಸವಿರಲು ಸಾಧ್ಯವೇ?’ ಎಂಬ ಪ್ರಶ್ನೆ ಮೂಡುವುದು ಸಹಜ. ಇದು ಕೇವಲ ಅಭ್ಯಾಸದ ಆಟ. ನಿರಂತರ ಅಭ್ಯಾಸದಿಂದ ದೇಹವನ್ನು ಯಾವುದಕ್ಕೂ ಹೊಂದಿಸಬಹುದು.

ಪಾಲಿಸಬೇಕಾದ ಪ್ರಮುಖ ನಿಯಮಗಳು

- ಮೊದಲ ಬಾರಿಗೆ ಮಾಡುವವರಾಗಿದಲ್ಲಿ ಇದನ್ನು ನಿಧಾನವಾಗಿ ಆರಂಭಿಸಿ. 12 ಗಂಟೆಗಳ ಕ್ರಮದಿಂದ ಆರಂಭಿಸಿ, ಮೊದಲು ಒಂದು ಅಥವಾ ಎರಡು ದಿನ ಪ್ರಯೋಗ ಮಾಡಿ ನೋಡಿ. ನಿಧಾನವಾಗಿ ನಿಮ್ಮ ದೇಹ ಒಗ್ಗಿಕೊಳ್ಳುತ್ತದೆ. ದೇಹ ಹೊಂದಿಕೊಂಡ ನಂತರ 14:10 ಅಥವಾ 16:8 ವಿಧಾನಕ್ಕೆ ಬದಲಿಸಿ. ಕ್ರಮೇಣ ಅದು ನಿಮ್ಮ ಜೀವನಶೈಲಿಯ ಭಾಗವಾಗುತ್ತದೆ.
- ಉಪವಾಸದ ಸಮಯದಲ್ಲಿ ದಿನಕ್ಕೆ ಕನಿಷ್ಠ ಎರಡೂವರೆಯಿಂದ ಮೂರು ಲೀಟರ್ ನೀರನ್ನು ಕುಡಿಯಿರಿ.
- **ಉಪವಾಸವನ್ನು ಪ್ರೋಟೀನ್‌ನಿಂದ ಮುರಿಯಿರಿ:** 14 ರಿಂದ 16 ಗಂಟೆಗಳ ಉಪವಾಸದ ನಂತರ ಮೊದಲ ಊಟದಲ್ಲಿ 25-30 ಗ್ರಾಂ ಪ್ರೋಟೀನ್ ಇರಲಿ. (ಉದಾ: ಮೊಟ್ಟೆ, ಪನೀರ್, ಬೇಳೆ, ಮೊಳಕೆಕಾಳು). ನೇರವಾಗಿ ಅನ್ನ, ಇಡ್ಲಿ, ಬ್ರೆಡ್ ಅಥವಾ ಸಿಹಿತಿಂಡಿಗಳನ್ನು ತಿಂದರೆ ರಕ್ತದ ಸಕ್ಕರೆಮಟ್ಟ ದಿಢೀರ್ ಹೆಚ್ಚಾಗುತ್ತದೆ.
- **ಪೌಷ್ಟಿಕ ಆಹಾರಕ್ಕೆ ಆದ್ಯತೆ:** ಊಟದ ಅವಧಿ 8 ಗಂಟೆಯಲ್ಲಿ ಏನನ್ನಾದರೂ ತಿನ್ನಬಹುದು ಎಂದು ಯೋಚಿಸಬೇಡಿ. ಊಟದ ಅವಧಿಯಲ್ಲಿ ಪ್ರೋಟೀನ್, ನಾರು ಮತ್ತು ಒಳ್ಳೆಯ ಕೊಬ್ಬು ಇರುವ ಮನೆ ಊಟ ಮಾಡಿ. ಸಂಸ್ಕರಿಸಿದ ಆಹಾರ, ಕರಿದ ತಿಂಡಿ ಮತ್ತು ಸಕ್ಕರೆಯನ್ನು ಕಟ್ಟುನಿಟ್ಟಾಗಿ ಕಡಿಮೆ ಮಾಡಬೇಕು.
- ಪ್ರತಿದಿನ ಕಡ್ಡಾಯವಲ್ಲ - ವಾರಕ್ಕೆ 5 ದಿನ ಈ ಕ್ರಮ ಪಾಲಿಸಿ, 2 ದಿನ ಸಾಮಾನ್ಯವಾಗಿ 3 ಹೊತ್ತು ಊಟ ಮಾಡಿ. ಇದು ಹಾರ್ಮೋನ್ ಸಮತೋಲನ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಯಾರಿಗೆ ಸೂಕ್ತ? ಯಾರಿಗೆ ಅಲ್ಲ?

ಇಂಟರ್‌ಮಿಟೆಂಟ್ ಫಾಸ್ಟಿಂಗ್ ಎಲ್ಲರಿಗೂ ಸೂಕ್ತವಲ್ಲ. ತೂಕ ಇಳಿಸಿಕೊಳ್ಳಲು ಬಯಸುವ ಆರೋಗ್ಯವಂತ ವಯಸ್ಕರು, ಟೈಪ್ 2 ಮಧುಮೇಹ, ಪ್ರೀ ಡಯಾಬಿಟಿಸ್ ಅಥವಾ ಇನ್ಸುಲಿನ್ ರೆಸಿಸ್ಟೆನ್ಸ್ ಇರುವವರು, ಹೊಟ್ಟೆಯ ಬೊಜ್ಜು ಅಥವಾ ಕೊಬ್ಬಿನ ಪಿತ್ತಜನಕಾಂಗದ ಸಮಸ್ಯೆ ಇರುವವರು, ಕೆಟ್ಟ ಕೊಬ್ಬು, ಟ್ರೈಗ್ಲಿಸರೈಡ್ ಅಥವಾ ರಕ್ತದೊತ್ತಡ ಹೆಚ್ಚಿರುವವರು ತಜ್ಞರ ಸಲಹೆಯನ್ನು ಪಡೆದು ಪಾಲಿಸಬಹುದು.


ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು. ಟೈಪ್ 1 ಮಧುಮೇಹ ಇರುವವರು. 18 ವರ್ಷದೊಳಗಿನ ಮಕ್ಕಳು ಮತ್ತು ಹದಿಹರೆಯದವರು. ಅತಿಯಾಗಿ ತಿನ್ನುವುದು ಅಥವಾ ತಿನ್ನದೇ ಇರುವ ಮಾನಸಿಕ ಅಸ್ವಸ್ಥತೆಯ ಸಮಸ್ಯೆ ಇರುವವರು. ತೀವ್ರ ಕಡಿಮೆ ತೂಕ ಅಥವಾ ಪೌಷ್ಟಿಕಾಂಶ ಕೊರತೆ ಇರುವವರು ಈ ಕ್ರಮವನ್ನು ಅನುಸರಿಸಲೇಬಾರದು.

ಸರಿಯಾದ ರೀತಿಯಲ್ಲಿ, ಸರಿಯಾದ ವ್ಯಕ್ತಿ ಪಾಲಿಸಿದರೆ ಇಂಟರ್‌ಮಿಟೆಂಟ್ ಫಾಸ್ಟಿಂಗ್ ತೂಕ ಇಳಿಕೆ, ಮಧುಮೇಹ ನಿಯಂತ್ರಣ ಮತ್ತು , ಕೆಟ್ಟ ಕೊಲೆಸ್ಟ್ರಾಲ್ ನಿಯಂತ್ರಣ, ಮಿದುಳಿನ ಆರೋಗ್ಯ, ಜೀವಕೋಶಗಳ ದುರಸ್ತಿಗೆ ಸಹಾಯ ಮಾಡಿ ಆರೋಗ್ಯವನ್ನು ಸುಧಾರಿಸುತ್ತದೆ. ತಪ್ಪಾಗಿ ಅಥವಾ ಸೂಕ್ತವಲ್ಲದವರು ಪಾಲಿಸಿದಾಗ ಮೊದಲ ವಾರದಲ್ಲಿ ತಲೆನೋವು, ಸುಸ್ತು, ಮಲಬದ್ಧತೆ, ಕಾಣಿಸಿಕೊಳ್ಳುವುದು. ದೇಹಕ್ಕೆ ಅಗತ್ಯವಾದ ಪೋಷಕಾಂಶಗಳು ಲಭಿಸದೆ ಇದ್ದಲ್ಲಿ ಸ್ನಾಯು ಕ್ಷಯ, ಕೂದಲು ಉದುರುವಿಕೆ, ರಕ್ತಹೀನತೆ ಸಂಭವಿಸುವುದು. ಜಾಸ್ತಿ ಉಪವಾಸ ಮಾಡಿದರೆ ಜಾಸ್ತಿ ಲಾಭ ಎಂದು ಯೋಚಿಸಿ 18 ಗಂಟೆಗಿಂತ ಹೆಚ್ಚು ಉಪವಾಸ ಮಾಡಿದರೆ ಕಾರ್ಟಿಸೋಲ್ ಪ್ರಮಾಣ ಹೆಚ್ಚಾಗಿ ಸ್ನಾಯು ನಷ್ಟ, ಥೈರಾಯ್ಡ್ ಹಾರ್ಮೋನ್ ಸಮಸ್ಯೆ ಇನ್ನಿತರ ಸಮಸ್ಯೆಗಳನ್ನೂ ಹೆಚ್ಚಿಸುತ್ತದೆ.

ಕೆಲವು ಮಹಿಳೆಯರಲ್ಲಿ 16 ಗಂಟೆಗಿಂತ ಹೆಚ್ಚಿನ ಉಪವಾಸವು ಒತ್ತಡದ ಹಾರ್ಮೋನ್ ಹೆಚ್ಚಿಸಿ ಮುಟ್ಟಿನ ಕ್ರಮವನ್ನು ತಪ್ಪಿಸಬಹುದು. ಪಿಸಿಒಡಿ ಅಥವಾ ಥೈರಾಯ್ಡ್ ಸಮಸ್ಯೆ ಇರುವವರು 12 ರಿಂದ 14 ಗಂಟೆಗಳ ಉಪವಾಸಕ್ಕೆ ಸೀಮಿತವಾಗಿರಬೇಕು. ಸ್ನಾಯು ಕ್ಷಯ ಮುಂತಾದ ಅಡ್ಡಪರಿಣಾಮಗಳು ಕಾಣಿಸಿಕೊಳ್ಳಬಹುದು.

ತೂಕದ ಸಂಖ್ಯೆಯನ್ನೇ ಏಕೈಕ ಮಾನದಂಡ ಮಾಡಿಕೊಳ್ಳಬೇಡಿ. ನಿಮ್ಮ ದಿನನಿತ್ಯದ ಶಕ್ತಿಯ ಮಟ್ಟ, ನಿದ್ರೆಯ ಗುಣಮಟ್ಟ, ಮನಸ್ಥಿತಿಯ ಏರಿಳಿತಗಳು ಮತ್ತು ಮಹಿಳೆಯರಲ್ಲಿ ಮುಟ್ಟಿನ ಕ್ರಮಬದ್ಧತೆಯನ್ನೂ ಸೂಕ್ಷ್ಮವಾಗಿ ಗಮನಿಸಬೇಕು .ಏಕೆಂದರೆ ಆರೋಗ್ಯದ ನಿಜವಾದ ಗುಟ್ಟು ‘ತಿನ್ನದೇ ಇರುವುದರಲ್ಲಿ’ ಅಲ್ಲ, ಬದಲಿಗೆ ಬುದ್ಧಿವಂತಿಕೆಯಿಂದ ಸಂಪೂರ್ಣ ಪೌಷ್ಟಿಕಾಂಶವಿರುವ ಆಹಾರವನ್ನು ಸರಿಯಾದ ಸಮಯಕ್ಕೆ ಸೇವಿಸುವುದರಲ್ಲಿದೆ.

ನಿಮ್ಮ ವಯಸ್ಸು, ಆರೋಗ್ಯ ಸ್ಥಿತಿ ಮತ್ತು ಜೀವನಶೈಲಿಯನ್ನು ಆಧರಿಸಿ ವೈದ್ಯರು ಅಥವಾ ಅರ್ಹ ಪೌಷ್ಟಿಕತಜ್ಞರ ಸಲಹೆ ಪಡೆದು ಆರಂಭಿಸುವುದು ಸುರಕ್ಷಿತ.



ಗಟ್ಟಿ ಮೂಳೆ ಗಟ್ಟಿ ದೇಹ

• ಡಾ. ವಿಜಯಲಕ್ಷ್ಮಿ ಪಿ.

ಮೂಳೆಗಳ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳುವುದು ನಮ್ಮ ಒಟ್ಟಾರೆ ದೇಹದ ದೃಢತೆಗೆ ಮತ್ತು ಸಕ್ರಿಯ ಜೀವನಕ್ಕೆ ಅತ್ಯಂತ ಅಗತ್ಯ. ವಯಸ್ಸಾಗುತ್ತಿದ್ದಂತೆ ಮೂಳೆಗಳು ಬಲಹೀನವಾಗುವ ಸಾಧ್ಯತೆ ಇರುವುದರಿಂದ, ಆರಂಭದಿಂದಲೇ ಅವುಗಳ ಕಡೆಗೆ ಗಮನ ಹರಿಸುವುದು ಮುಖ್ಯ.

ಅತಿಯಾದ ಉಪವಾಸ, ಅಕಾಲ ಭೋಜನ, ಅತಿಯಾದ ಒಣ ಆಹಾರಗಳ ನಿರಂತರ ಸೇವನೆ, ರಾತ್ರಿ ನಿದ್ದೆಗೆಡುವುದು, ಅತಿಯಾದ ವ್ಯಾಯಾಮ , ಅಕಾಲದಲ್ಲಿ ವ್ಯಾಯಾಮ, ಕೆಲವು ದಿನ ಅತಿಯಾದ ವ್ಯಾಯಾಮ, ಕೆಲವು ದಿನ ಸಂಪೂರ್ಣ ವಿಶ್ರಾಂತಿ – ಇಂಥ ಅಭ್ಯಾಸಗಳು ಮೂಳೆಯ ವಿಕೃತಿಗಳಿಗೆ ಕಾರಣವಾಗುತ್ತವೆ. ಆಹಾರ ಸೇವಿಸಿ ಅಥವಾ ಹಿಂದೆ ತಿಂದ ಆಹಾರ ಜೀರ್ಣವಾಗುವ ಮೊದಲು, ಅಥವಾ ಜ್ವರ, ಅಜೀರ್ಣ ಮುಂತಾದ ತೊಂದರೆಗಳಿರುವಾಗ ವ್ಯಾಯಾಮ ಮಾಡುವುದರಿಂದ, ಮೂಳೆ ಮತ್ತು ಸಂಧಿಗಳ ಶಕ್ತಿ ಕುಂಠಿತವಾಗುತ್ತದೆ. ಇವು ಮೂಳೆಮುರಿಯುವಿಕೆ, ಸ್ವಯಂ ರೋಗನಿರೋಧಕ ಮೂಳೆವಿಕಾರಗಳು (Autoimmune bone disorders), ಮೂಳೆಕ್ಯಾನ್ಸರ್ – ಹೀಗೆ ಅನೇಕ ಮೂಳೆಸಂಬಂಧಿ ರೋಗಗಳಿಗೆ ಕಾರಣವಾಗಬಹುದು.

ಅತಿಯಾದ ಮದ್ಯಪಾನ, ಸಿಗರೇಟು, ತಂಬಾಕು, ಮಾದಕ ದ್ರವ್ಯಗಳ ವ್ಯಸನಗಳು ಮೂಳೆಸವೆತಕ್ಕೆ ನೇರವಾಗಿ ಕಾರಣ ವಾಗುತ್ತದೆ. ಅತಿಯಾದ ದೈಹಿಕ ಶ್ರಮ, ವಿಶ್ರಾಂತಿ ಇಲ್ಲದೆ ಮಾಡುವ ಶ್ರಮ, ಪದೇ ಪದೇ ಅಪಘಾತವಾಗುತ್ತಿದ್ದರೆ, ಅಥವಾ ಪದೇ ಪದೇ ಮೂಳೆಗೆ ಪೆಟ್ಟು ಬೀಳುತ್ತಿದ್ದರೂ ಮೂಳೆಗಳಲ್ಲಿ ವಿಕೃತಿ ಕಾಣಿಸಬಹುದು. ಕೆಲವೊಮ್ಮೆ, ಅಮ್ಲಪಿತ್ತವನ್ನು ಹೆಚ್ಚಿಸುವ ಆಹಾರವನ್ನು ನಿರಂತರವಾಗಿ ಸೇವಿಸುತ್ತಿದ್ದರೆ, ಕ್ಷಾರೀಯ ಪಾನೀಯಗಳ ಅತಿ ಅಥವಾ ನಿರಂತರ ಸೇವನೆ, ಮಲಬದ್ಧತೆ – ಇವುಗಳೂ ಮೂಳೆಯ ಸವೆತಕ್ಕೆ ಕಾರಣವಾಗುತ್ತದೆ.

ಅತಿಯಾದ ಚಿಂತೆ, ನಿದ್ರಾಹಾನಿ, ನಿರಂತರ ಆತಂಕ, ಸಮಸ್ಯೆಯ ಸುಳಿಯಲ್ಲಿ ನಿರಂತರ ಪರಿತಪಿಸುವುದು – ಹೀಗೆ ಅನೇಕ ಮಾನಸಿಕ ವಿಕೃತಿಗಳೂ ನರಮಂಡಲವನ್ನು ಮತ್ತು ಅಸ್ಥಿಮಜ್ಜೆಯನ್ನು ವಿಕೃತಗೊಳಿಸಿ, ಮೂಳೆಗಳ ಸಾಂದ್ರತೆಯನ್ನು ಕಡಿಮೆಮಾಡುತ್ತದೆ. ಆದ್ದರಿಂದ ಮೂಳೆಮುರಿತ, ಸಂಧಿಗಳ ಜಾರುವಿಕೆ – ಹೀಗೆ ಅನೇಕ ತೊಂದರೆಗಳು ಉತ್ಪತ್ತಿಯಾಗಬಹುದು.

ಕೀಲುನೋವು ಸಾಮಾನ್ಯ ಸವೆತದಿಂದಾಗಿದೆಯೇ ಅಥವಾ ‘ಆಮವಾತ’ (Rheumatoid Arthritis) ಎಂಬ ಆಟೋಇಮ್ಯೂನ್ ಕಾಯಿಲೆಯಿಂದಾಗಿದೆಯೇ ಎಂದು ಪ್ರತ್ಯೇಕಿಸಲು ರಕ್ತದಲ್ಲಿ ಆರ್.ಎ. ಅಂಶವನ್ನು ಪರೀಕ್ಷಿಸಿ ನಿರ್ಧರಿಸುತ್ತಾರೆ.

ಪ್ಯಾರಾಥೈರಾಯ್ಡ್ ಹಾರ್ಮೋನ್ ದೇಹದಲ್ಲಿ ಕ್ಯಾಲ್ಸಿಯಂ ಮಟ್ಟವನ್ನು ನಿಯಂತ್ರಿಸುತ್ತದೆ. ಇದರ ಏರುಪೇರಿನಿಂದಲೂ ಮೂಳೆಸವೆತ ಉಂಟಾಗಬಹುದು. ನಾವು ಸೇವಿಸುವ ಆಹಾರದಲ್ಲಿರುವ ‘ಪ್ಯೂರಿನ್’ (Purine) ಎಂಬ ರಾಸಾಯನಿಕ ಅಂಶವನ್ನು ದೇಹವು ಜೀರ್ಣಿಸಿಕೊಂಡಾಗ ಯೂರಿಕ್ ಆಮ್ಲವು ಉಪ ಉತ್ಪನ್ನವಾಗಿ (Waste product) ಬಿಡುಗಡೆಯಾಗುತ್ತದೆ. ಸಾಮಾನ್ಯವಾಗಿ ಇದು ರಕ್ತದ ಮೂಲಕ ಮೂತ್ರಪಿಂಡಗಳಿಗೆ (ಕಿಡ್ನಿ) ತಲುಪಿ, ಮೂತ್ರದ ಮೂಲಕ ಹೊರಹೋಗುತ್ತದೆ. ಆದರೆ ಇದರ ಉತ್ಪಾದನೆ ಹೆಚ್ಚಾದಾಗ ಅಥವಾ ಕಿಡ್ನಿಗಳು ಇದನ್ನು ಸರಿಯಾಗಿ ಹೊರಹಾಕದಿದ್ದಾಗ ರಕ್ತದಲ್ಲಿ ಇದರ ಮಟ್ಟ ಹೆಚ್ಚಾಗುತ್ತದೆ. ಕಿಡ್ನಿ ಸಮಸ್ಯೆ ಅಥವಾ ಕಿಡ್ನಿ ಕಲ್ಲು ಇರುವವರಲ್ಲಿ ಇದು ಸಾಮಾನ್ಯ.

ಕೆಂಪು ಮಾಂಸ, ಲಿವರ್ ಹಾಗೂ ಕೆಲವು ರೀತಿಯ ಸಮುದ್ರದ ಆಹಾರಗಳು ಹಣ್ಣಿನ ರಸಗಳು ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳಲ್ಲಿರುವ ‘ಫ್ರಕ್ಟೋಸ್’ ಎಂಬ ಸಕ್ಕರೆಯ ಅಂಶ ಯೂರಿಕ್ ಆಮ್ಲವನ್ನು ವೇಗವಾಗಿ ಹೆಚ್ಚಿಸುತ್ತದೆ. ಅತಿಯಾದ ಬೇಳೆಗಳು, ರಾಜ್ಮಾ, ಮತ್ತು ಅಣಬೆಗಳ ಸೇವನೆ ರಕ್ತದಲ್ಲಿ ಯೂರಿಕ್ ಆಮ್ಲದ ಪ್ರಮಾಣವನ್ನು ಹೆಚ್ಚಿಸಿ ಕೀಲುಗಳಲ್ಲಿ (ವಿಶೇಷವಾಗಿ ಕಾಲಿನ ಅಥವಾ ಕೈಗಳ ಬೆರಳಿನಲ್ಲಿ) ಸಣ್ಣ ಹರಳುಗಳಾಗಿ ಶೇಖರಣೆಯಾಗುತ್ತದೆ. ಇದರಿಂದ ತೀವ್ರವಾದ ನೋವು ಮತ್ತು ಊತ ಕಾಣಿಸಿಕೊಳ್ಳುತ್ತದೆ. ಅದನ್ನು ಆಯುರ್ವೇದವು ‘ವಾತರಕ್ತವಿಕೃತಿ’ ಎಂದು ತಿಳಿಸುತ್ತದೆ. ಇಂತಹ ಸಂದರ್ಭದಲ್ಲಿ ಸಾಮಾನ್ಯ ಗಂಟುನೋವಿನ ಚಿಕಿತ್ಸೆ ಉಪಯೋಗವಾಗುವುದಿಲ್ಲ. ವೈದ್ಯರನ್ನು ಸಂಪರ್ಕಿಸಿ, ವಿಶೇಷವಾದ ಸೂಕ್ತವಾದ ಚಿಕಿತ್ಸೆಯನ್ನು ಪಡೆಯಬೇಕು.

ಮೂಳೆಗಳನ್ನು ಗಟ್ಟಿಗೊಳಿಸಿ, ಮೂಳೆಸವೆತವನ್ನು ತಪ್ಪಿಸುವಲ್ಲಿ, ಹಸು ಅಥವಾ ಎಮ್ಮೆಯ ತುಪ್ಪ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಿತ್ಯವೂ ಹಸಿತುಪ್ಪ ಅಥವಾ ಹಸಿಕೊಬ್ಬರಿ ಎಣ್ಣೆಯನ್ನು ಆಹಾರದಲ್ಲಿ ಸೇವಿಸಿ, ಬೆಳಗ್ಗಿನ ಎಳೆ ಬಿಸಿಲಿಗೆ (ಸೂರ್ಯನ ಬೆಳಕು) 15–20 ನಿಮಿಷಗಳು ಮೈಯೊಡ್ಡುವುದು ಒಳ್ಳೆಯ ಅಭ್ಯಾಸ. ಪ್ರತಿದಿನ ಬೆಳಗ್ಗಿನ ಸೂರ್ಯನ ಬೆಳಕಿನಲ್ಲಿ ಯೋಗಾಸನ ಅಥವಾ ಸೂರ್ಯನಮಸ್ಕಾರ ಮಾಡುವುದರಿಂದ ದೇಹಕ್ಕೆ ನೈಸರ್ಗಿಕವಾಗಿ ‘ವಿಟಮಿನ್ ಡಿ’ ದೊರೆತು ಅಸ್ಥಿಧಾತು ಬಲಗೊಳ್ಳುತ್ತದೆ.

ವೇಗವಾಗಿ ನಡೆಯುವುದು (Brisk walking), ಜಾಗಿಂಗ್, ಮೆಟ್ಟಿಲು ಹತ್ತುವುದು ಮತ್ತು ನೃತ್ಯ ಮಾಡುವುದು ಮೂಳೆಗಳನ್ನು ಬಲಪಡಿಸುತ್ತವೆ. ಯೋಗದ ವಿವಿಧ ಆಸನಗಳು ದೇಹದ ಸಮತೋಲನವನ್ನು ಹೆಚ್ಚಿಸುವುದಲ್ಲದೆ, ಮೂಳೆಗಳು ಮತ್ತು ಕೀಲುಗಳ ನಮ್ಯತೆಯನ್ನು (Flexibility) ಸುಧಾರಿಸುತ್ತವೆ. ದಿನಾಲೂ ದೇಹಕ್ಕೆ ಉಗುರುಬೆಚ್ಚಗಿನ ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ, ಹಚ್ಚಿ ಅಭ್ಯಂಗ ಮಾಡುವುದು, ಮೂಳೆಗಳ ಒಣಗುವಿಕೆಯನ್ನು ತಡೆದು, ವಾತವನ್ನು ನಿಯಂತ್ರಿಸುತ್ತದೆ, ನೋವನ್ನು ನಿವಾರಿಸುತ್ತದೆ. ದೇಹದ ತೂಕ ಅತಿಯಾಗಿದ್ದರೆ ಕೀಲುಗಳು ಮತ್ತು ಮೂಳೆಗಳ ಮೇಲೆ ಒತ್ತಡ ಹೆಚ್ಚುತ್ತದೆ. ಹಾಗೆಯೇ, ತೂಕ ತೀರಾ ಕಡಿಮೆಯಿದ್ದರೂ ಮೂಳೆಗಳು ಬಲಹೀನವಾಗುವ ಅಪಾಯವಿರುತ್ತದೆ. ಆದ್ದರಿಂದ ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳುವುದು ಒಳ್ಳೆಯದು.

ಮೂಳೆಗಳ ಸವೆತಕ್ಕೂ, ಗಂಟುನೋವಿಗೂ ಕೆಲವೊಮ್ಮೆ ನೇರವಾದ ಸಂಬಂಧವಿದ್ದರೆ, ಕೆಲವೊಮ್ಮೆ ಗಂಟುಗಳಲ್ಲಿ ಉಂಟಾಗುವ ಊತ, ಅಥವಾ ಸಂಧಿಗಳನ್ನು ಬೆಸೆಯುವ ಸ್ನಾಯು, ಕಂಡರಾ, ಮಾಂಸಖಂಡಗಳ ವಿಕೃತಿಗಳೂ, ಕಫವಿಕೃತಿಗಳೂ ಗಂಟುನೋವಿಗೆ ಕಾರಣವಾಗಬಹುದು. ಆದ್ದರಿಂದ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆಯನ್ನು ಪಡೆಯುವುದು ಸೂಕ್ತ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.1

2) $\frac{a_1}{a_2}$, $\frac{b_1}{b_2}$, $\frac{c_1}{c_2}$ ಅನುಪಾತಗಳನ್ನು ಹೋಲಿಸುವ ಮೂಲಕ, ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು ಪ್ರತಿನಿಧಿಸುವ ಸರಳರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸುತ್ತವೆಯೆ? ಸಮಾಂತರವಾಗಿವೆಯೆ? ಅಥವಾ ಐಕ್ಯಗೊಂಡಿವೆಯೆ? ಎಂಬುದನ್ನು ಕಂಡುಹಿಡಿಯಿರಿ.

(i) $5x - 4y + 8 = 0$
$7x + 6y - 9 = 0$

(ii) $9x + 3y + 12 = 0$
$18x + 6y + 24 = 0$

(iii) $6x - 3y + 10 = 0$
$2x - y + 9 = 0$

ಪರಿಹಾರ:– (ii) ನೀಡಿರುವ ಸಮೀಕರಣಗಳು

$9x + 3y + 12 = 0$
$18x + 6y + 24 = 0$

ಆದ್ದರಿಂದ ಸಮೀಕರಣಗಳನ್ನು $a_1x + b_1y + c_1 = 0$ ಮತ್ತು $a_2x + b_2y + c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 9, b_1 = 3, c_1 = 12$
$a_2 = 18, b_2 = 6, c_2 = 24$
$(a_1 / a_2) = 9 / 18 = 1 / 2$
$(b_1 / b_2) = 3 / 6 = 1 / 2$
$(c_1/c_2) = 12 / 24 = 1 / 2$

ಹೀಗಾಗಿ $(a_1 / a_2) = (b_1 / b_2) = (c_1 / c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯನ್ನು ಪ್ರತಿನಿಧಿಸುವ ಸರಳ ರೇಖೆಗಳು ಐಕ್ಯಗೊಂಡಿವೆ

(iii) ನೀಡಿರುವ ಸಮೀಕರಣಗಳು

$6x - 3y + 10 = 0$
$2x - y + 9 = 0$

ಆದ್ದರಿಂದ ಸಮೀಕರಣಗಳನ್ನು $a_1x + b_1y + c_1 = 0$ ಮತ್ತು $a_2x + b_2y + c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 6, b_1 = -3, c_1 = 10$
$a_2 = 2, b_2 = -1, c_2 = 9$
$(a_1/a_2) = 6/2 = 3/1$
$(b_1/b_2) = -3/-1 = 3/1$
$(c_1/c_2) = 10/9$

ಹೀಗಾಗಿ $(a_1/a_2) = (b_1/b_2) \neq (c_1/c_A)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯನ್ನು ಪ್ರತಿನಿಧಿಸುವ ಸರಳ ರೇಖೆಗಳು ಪರಸ್ಪರ ಸಮಾಂತರವಾಗಿವೆ

3. $\frac{a_1}{a_2}$, $\frac{b_1}{b_2}$ ಮತ್ತು $\frac{c_1}{c_2}$ ಅನುಪಾತಗಳನ್ನು ಹೋಲಿಸುವ ಮೂಲಕ, ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿವೆಯೆ? ಅಥವಾ ಅಸ್ಥಿರವಾಗಿವೆಯೆ? ಎಂಬುದನ್ನು ಕಂಡುಹಿಡಿಯಿರಿ.

(i) $3x + 2y = 5$; $2x - 3y = 7$ (ii) $2x - 3y = 8$: $4x - 6y = 9$

iii) $\frac{3}{2}x + \frac{5}{3}y = 7$: $9x - 10y = 14$ (iv) $5x - 3y = 11$: $-10x + 6y = -22$

(v) $\frac{4}{3}x + 2y = 8$; $2x + 3y = 12$

ಪರಿಹಾರ:– (1) $3x + 2y = 5$ ಅಥವಾ $3x + 2y - 5 = 0$ ಮತ್ತು $2x - 3y = 7$ ಅಥವಾ $2x - 3y - 7 = 0$ (ದತ್ತ)

ಆದ್ದರಿಂದ ಸಮೀಕರಣಗಳನ್ನು $a_1x + b_1y + c_1 = 0$ ಮತ್ತು $a_2x + b_2y + c_2 = 0$ ತುಲನೆ ಮಾಡಿದಾಗ ನಾವು ಕೆಳಗಿನವುಗಳನ್ನು ಪಡೆಯುತ್ತೇವೆ

$a_1 = 3, b_1 = 2, c_1 = -5$
$a_2 = 2, b_2 = -3, c_2 = -7$
$(a_1/a_2) = 3/2$
$(b_1/b_2) = 2/-3$
$(c_1/c_2) = -5/-7 = 5/7$

ಹೀಗಾಗಿ $(a_1/a_2) \neq (b_1/b_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯು ಒಂದೇ ಒಂದು ಪರಿಹಾರ ಹೊಂದಿರುತ್ತದೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ

(ii) $2x - 3y = 8$ ಮತ್ತು $4x - 6y = 9$

ಆದ್ದರಿಂದ

$a_1 = 2, b_1 = -3, c_1 = -8$
$a_2 = 4, b_2 = -6, c_2 = -9$
$(a_1/a_2) = 2/4 = 1/2$
$(b_1/b_2) = -3/-6 = 1/2$
$(c_1/c_2) = -8/-9 = 8/9$

ಹೀಗಾಗಿ $(a_1/a_2) = (b_1/b_2) \neq (c_1/c_2)$

ಆದ್ದರಿಂದ ರೇಖೆಗಳು ಸಮಾಂತರ ರೇಖೆಗಳಾಗಿವೆ, ಆದ್ದರಿಂದ ದತ್ತ ಜೋಡಿಗೆ ಪರಿಹಾರ ಇಲ್ಲ.

∴ ಸಮೀಕರಣಗಳ ಜೋಡಿಯು ಅಸ್ಥಿರವಾಗಿದೆ.

(iii) $\frac{3}{2}x + \frac{5}{3}y = 7$; $9x - 10y = 14$ (ದತ್ತ)

ಆದ್ದರಿಂದ

$a_1 = 3/2, b_1 = 5/3, c_1 = -7$
$a_2 = 9, b_2 = -10, c_2 = -14$
$(a_1/a_2) = 3/(2\times9) = 1/6$
$(b_1/b_2) = 5/(3\times -10) = -1/6$
$(c_1/c_2) = -7/-14 = 1/2$

ಹೀಗಾಗಿ $(a_1/a_2) \neq (b_1/b_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಯು ಒಂದೇ ಒಂದು ಪರಿಹಾರ ಹೊಂದಿರುತ್ತದೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ

(iv) $5x - 3y = 11$ ಮತ್ತು $10x + 6y = -22$

ಆದ್ದರಿಂದ

$a_1 = 5, b_1 = -3, c_1 = -11$
$a_2 = -10, b_2 = 6, c_2 = 22$
$(a_1/a_2) = 5/(-10) = -5/10 = -1/2$
$(b_1/b_2) = -3/6 = -1/2$
$(c_1/c_2) = -11/22 = -1/2$

ಹೀಗಾಗಿ $(a_1/a_2) = (b_1/b_2) = (c_1/c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.

(v)

$\frac{4}{3}x + 2y = 8$; $2x + 3y = 12$

$a_1 = 4/3, b_1 = 2, c_1 = -8$
$a_2 = 2, b_2 = 3, c_2 = -12$
$(a_1/a_2) = 4/(3\times2) = 4/6 = 2/3$
$(b_1/b_2) = 2/3$
$(c_1/c_2) = -8/-12 = 2/3$

ಆದ್ದರಿಂದ $(a_1/a_2) = (b_1/b_2) = (c_1/c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.

4. ಮುಂದೆ ನೀಡಿದವುಗಳಲ್ಲಿ ಯಾವ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿವೆ/ಅಸ್ಥಿರವಾಗಿವೆ? ಸ್ಥಿರವಾಗಿದ್ದರೆ, ನಕ್ಷಾಕ್ರಮದಿಂದ ಪರಿಹಾರವನ್ನು ಪಡೆಯಿರಿ.

(i) $x + y = 5$, $2x + 2y = 10$ (ಮುಂದುವರಿಯುವುದು)

MATHS

MATRICES

Problems:-

2. If $A = \begin{bmatrix} a+b & b^2+2 \\ 0 & -6 \end{bmatrix}$ & $B = \begin{bmatrix} 2a+1 & 3b \\ 0 & b^2-5b \end{bmatrix}$ and also $A = B$, find the values of a and b?

Soln:- Given, $A = B$

∴ from equality of matrices we get,

$a + b = 2a + 1$ ....(i)
$b^2 + 2 = 3b$ ....(ii)
$-6 = b^2 - 5b$ ....(iii)

From (i) we get, $b - a = 1$.......(iv)

From (ii) we get, $b^2 - 3b + 2 = 0$......(v)

$(b - 2)(b - 1) = 0$

$\Rightarrow b = 2$ and $b = 1$

But $b = 1$ does not satisfy the eqn (iii) and $b = 2$ agrees with it.

Hence $b = 2$.

Substituting for b as 2 in (iv), we get $a = 1$

∴ values of a & b are 1 & 2 respectively.

3. Solve for A & B if $2A + 3B = \begin{bmatrix} -1 & 1 \\ 1 & -1 \end{bmatrix}$ and $3A + 2B = \begin{bmatrix} 1 & -1 \\ -1 & 1 \end{bmatrix}$.

Soln:- $2A + 3B = \begin{bmatrix} -1 & 1 \\ 1 & -1 \end{bmatrix}$ ....(i)

$3A + 2B = \begin{bmatrix} 1 & -1 \\ -1 & 1 \end{bmatrix}$ ....(ii)

Multiplying eqn (i) by 2 & eqn (ii) by 3

we get, $4A + 6B = \begin{bmatrix} -2 & 2 \\ 2 & -2 \end{bmatrix}$ ....(iii)

and $9A + 6B = \begin{bmatrix} 3 & -3 \\ -3 & 3 \end{bmatrix}$ ....(iv)

Solving simultaneous eqns (iii) & (iv)

we get, $-5A = \begin{bmatrix} -5 & 5 \\ 5 & -5 \end{bmatrix} \Rightarrow A = \begin{bmatrix} 1 & -1 \\ -1 & 1 \end{bmatrix}$

Substituting the value of A in the eqn

$2A + 3B = \begin{bmatrix} -1 & 1 \\ 1 & -1 \end{bmatrix}$

$3B = \begin{bmatrix} -1 & 1 \\ 1 & -1 \end{bmatrix} - 2A = \begin{bmatrix} -1 & 1 \\ 1 & -1 \end{bmatrix} - 2\begin{bmatrix} 1 & -1 \\ -1 & 1 \end{bmatrix}$

$3B = \begin{bmatrix} -1 & 1 \\ 1 & -1 \end{bmatrix} - \begin{bmatrix} 2 & -2 \\ -2 & 2 \end{bmatrix} = \begin{bmatrix} -3 & 3 \\ 3 & -3 \end{bmatrix}$

$\therefore B = \begin{bmatrix} -1 & 1 \\ 1 & -1 \end{bmatrix}$

Substituting the value of A in the eqn

$2A + 3B = \begin{bmatrix} -1 & 1 \\ 1 & -1 \end{bmatrix}$

$3B = \begin{bmatrix} -1 & 1 \\ 1 & -1 \end{bmatrix} - 2A = \begin{bmatrix} -1 & 1 \\ 1 & -1 \end{bmatrix} - 2\begin{bmatrix} 1 & -1 \\ -1 & 1 \end{bmatrix}$

$= \begin{bmatrix} -1 & 1 \\ 1 & -1 \end{bmatrix} - \begin{bmatrix} 2 & -2 \\ -2 & 2 \end{bmatrix} = \begin{bmatrix} -3 & 3 \\ 3 & -3 \end{bmatrix}$

$\Rightarrow B = \begin{bmatrix} -1 & 1 \\ 1 & -1 \end{bmatrix}$

Multiplication of matrices

Write a brief note on the Multiplication of matrices

Ans:- If A is a matrix of the order m x n and B is a matrix of the order n x p then the product AB is defined and is of order m x p.

Thus AB is defined only if the number of columns of A is equal to the number of rows of B.

If $A = [a_{ij}]$; $B = [b_{jk}]$;

Wherein, i = 1, 2, 3........m, and j = 1, 2, 3........n; k = 1, 2,.......p be two matrices of order m x n and n x p respectively.

Problems:-

1. If $A = \begin{bmatrix} 5 & -3 \\ -1 & 2 \end{bmatrix}$ & $B = \begin{bmatrix} -2 & -1 \\ 4 & 7 \end{bmatrix}$; find AB.

Soln : $A = \begin{bmatrix} 5 & -3 \\ -1 & 2 \end{bmatrix}$ & $B = \begin{bmatrix} -2 & -1 \\ 4 & 7 \end{bmatrix}$

$AB = \begin{bmatrix} 5 & -3 \\ -1 & 2 \end{bmatrix} \times \begin{bmatrix} -2 & -1 \\ 4 & 7 \end{bmatrix}$

$AB = \begin{bmatrix} (5 \times -2) + (-3 \times 4) & (5 \times -1) + (-3 \times 7) \\ (-1 \times -2) + (2 \times 4) & (-1 \times -1) + (2 \times 7) \end{bmatrix}$

$AB = \begin{bmatrix} -10-12 & -5-21 \\ 2+8 & 1+14 \end{bmatrix} = \begin{bmatrix} -22 & -26 \\ 10 & 15 \end{bmatrix}$

Answer the following:-

1. What is Negative of a matrix?

Ans:- The negative of a matrix A is denoted by – A. i.e., $-A = (-1)A$

2. What is Symmetric matrix?

Ans:- A square matrix $A = [a_{ij}]$ is said to be symmetric if $A^T = A$, that is, $a_{ij} = a_{ji}$ for all possible values of *i* and *j*.

Eg:- In general $\begin{bmatrix} a & h & g \\ h & b & f \\ g & f & c \end{bmatrix}$ is a symmetric matrix.

Problems:-

1. If $A = \begin{bmatrix} 7 & 6 \\ -3 & -4 \end{bmatrix}$ then find A^1?

Ans : – Given, $A = \begin{bmatrix} 7 & 6 \\ -3 & -4 \end{bmatrix}$

By interchanging the rows and columns

we get, $A' = \begin{bmatrix} 7 & -3 \\ 6 & -4 \end{bmatrix}$

2. Given that $\begin{bmatrix} 1 & 3 \\ 5 & -2 \end{bmatrix}\begin{bmatrix} x \\ y \end{bmatrix} = \begin{bmatrix} -2 & 3 \\ 0 & 1 \end{bmatrix}\begin{bmatrix} 2 \\ -1 \end{bmatrix}$;

Find x & y.

(Contd.........)

ಕಾವೇರಿ ಪ್ರಾಧಿಕಾರ: ಇಂದು ಮಹತ್ವದ ಸಭೆ

ಜೂನ್‌ನಲ್ಲಿ ತಮಿಳುನಾಡಿಗೆ 9 ಟಿಎಂಸಿ ಅಡಿ ನೀರು ಬಿಡಬೇಕಿರುವ ಕರ್ನಾಟಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಮುಂಗಾರು ಮಳೆಯ ಕೊರತೆಯಿಂದಾಗಿ ಬರದ ಛಾಯೆ ಆವರಿಸುತ್ತಿರುವ ಹೊತ್ತಿನಲ್ಲೇ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಮಹತ್ವದ ಸಭೆ ನವದೆಹಲಿಯಲ್ಲಿ ಮಂಗಳವಾರ ನಡೆಯಲಿದೆ.

ನವದೆಹಲಿಯಲ್ಲಿ ಕಳೆದ ವಾರ ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಸಭೆಯಲ್ಲಿ ಕಾವೇರಿ ನೀರಿನ ಬಗ್ಗೆ ಪ್ರಸ್ತಾಪವಾಗಿತ್ತು. ಜೂನ್ ತಿಂಗಳ ಪಾಲಿನ ನೀರನ್ನು ಕರ್ನಾಟಕ ಹರಿಸಲಿ ಎಂದು ತಮಿಳುನಾಡು ಅಧಿಕಾರಿಗಳು ಆಗ್ರಹ ವ್ಯಕ್ತಪಡಿಸಿತು. ನಾಲ್ಕು ಜಲಾಶಯಗಳಲ್ಲಿನ ನೀರಿನ ಸಂಗ್ರಹದ ಬಗ್ಗೆ ಕರ್ನಾಟಕದ ಅಧಿಕಾರಿಗಳು ವಿವರ ನೀಡಿ, ಈ ನೀರು ಕುಡಿಯುವ ಬಳಕೆಗಷ್ಟೇ ಸಾಕಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟರು. ಈ ನೀರನ್ನು ಕುಡಿಯುವುದಕ್ಕೆ ಬಳಸಲು ಆದ್ಯತೆ ನೀಡಬೇಕು. ಕಡಿಮೆ ನೀರು ಬಯಸುವ ಬೆಳೆಗಳನ್ನು ಈ ವರ್ಷ ಬೆಳೆಯಬೇಕು ಎಂದು ಸಮಿತಿಯು ರಾಜ್ಯಗಳಿಗೆ ನಿರ್ದೇಶನ ನೀಡಿತು.

ಕಾವೇರಿ ಜಲವಿವಾದ ನ್ಯಾಯ ಮಂಡಳಿಯ ತೀರ್ಪನ್ನು ಮಾರ್ಪಡಿಸಿ, 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆಯಷ್ಟು ಮಳೆಯಾದರೆ ವಾರ್ಷಿಕ 740 ಟಿಎಂಸಿ ಅಡಿಯಷ್ಟು ನೀರು ಲಭ್ಯವಾಗುತ್ತದೆ ಎಂಬುದನ್ನು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ಒಪ್ಪಿಕೊಂಡಿವೆ. ಲಭ್ಯವಿರುವ 740 ಟಿಎಂಸಿ ಅಡಿ ನೀರಿನಲ್ಲಿ ಕರ್ನಾಟಕಕ್ಕೆ 284.75 ಟಿಎಂಸಿ ಅಡಿ, ತಮಿಳುನಾಡಿಗೆ 404.25 ಟಿಎಂಸಿ ಅಡಿ, ಕೇರಳಕ್ಕೆ 30 ಟಿಎಂಸಿ ಅಡಿ ಮತ್ತು ಪುದುಚೇರಿಗೆ 7 ಟಿಎಂಸಿ ಅಡಿಯಷ್ಟು ನೀರನ್ನು ಸುಪ್ರೀಂ ಕೋರ್ಟ್ ಮರುಹಂಚಿಕೆ ಮಾಡಿತ್ತು.

ರಾಜ್ಯದಲ್ಲಿ ಈ ಬಾರಿ ಮಳೆ ಕೊರತೆಯಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿನ ಜಲಾಶಯಗಳಲ್ಲಿ ವಾಡಿಕೆಯಷ್ಟು ನೀರು ಸಂಗ್ರಹವಾಗಿಲ್ಲ. 4 ಜಲಾಶಯಗಳಲ್ಲಿ ಸದ್ಯ ಒಳ ಹರಿವು ಒಂದು ಸಾವಿರ ಕ್ಯೂಸೆಕ್‌ನಷ್ಟಿದೆ. ಹೊರ ಹರಿವಿನ ಪ್ರಮಾಣ ಅದಕ್ಕಿಂತ ಕಡಿಮೆ ಇದೆ.

ಸುಪ್ರೀಂ ಕೋರ್ಟ್ ತೀರ್ಪಿನಂತೆ ಕರ್ನಾಟಕ-ತಮಿಳುನಾಡು ಗಡಿ ಭಾಗದ ಬಿಳಿಗುಂಡ್ಲುವಿನಿಂದ ಜೂನ್‌ನಲ್ಲಿ 9.19 ಟಿಎಂಸಿ ಅಡಿ ಹರಿಸಬೇಕಿದೆ. ಆದರೆ, ಈವರೆಗೆ 2 ಟಿಎಂಸಿ ಅಡಿ ನೀರನ್ನಷ್ಟೇ ಹರಿಸಲಾಗಿದೆ.


ಪ್ರಾಧಿಕಾರದ ಸಭೆಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಭಾಗಿಯಾಗಿ ಜಲಾಶಯಗಳಲ್ಲಿನ ನೀರಿನ ಪ್ರಮಾಣ ಹಾಗೂ ಬಿಡುಗಡೆಯಾದ ನೀರಿನ ಪ್ರಮಾಣದ ಬಗ್ಗೆ ಮಾಹಿತಿ ನೀಡಲಿದ್ದಾರೆ.


'ಈಗಿನ ಸನ್ನಿವೇಶದಲ್ಲಿ ತಮಿಳುನಾಡಿಗೆ ನೀರು ಹರಿಸುವುದು ಕಷ್ಟ. ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಬೇಕಿದೆ. ಈ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ತಿಳಿಸಲಿದ್ದೇವೆ' ಎಂದು ಜಲಸಂಪನ್ಮೂಲ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನೊಂದೆಡೆ, ಮೇಕೆದಾಟು ಯೋಜನೆ ಆಕ್ಷೇಪಿಸಿ ತಮಿಳುನಾಡು ವಿಧಾನಸಭೆ ನಿರ್ಣಯ ತೆಗೆದುಕೊಂಡಿದೆ. ಮೇಕೆದಾಟು ನ್ಯಾಯಮಂಡಳಿ ಸ್ಥಾಪಿಸಬೇಕು ಎಂದು ಸರ್ಕಾರ ಪಟ್ಟು ಹಿಡಿದಿದೆ. ಈ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾಪಿಸುವುದಾಗಿ ತಮಿಳುನಾಡಿನ ಅಧಿಕಾರಿಗಳು ತಿಳಿಸಿದ್ದಾರೆ.

ತಮಿಳುನಾಡಿಗೆ ಪ್ರತಿ ತಿಂಗಳೂ ಹರಿಸಬೇಕಾದ ನೀರು

ತಿಂಗಳು	ಹರಿಸಬೇಕಾದ ನೀರಿನ ಪ್ರಮಾಣ (ಟಿಎಂಸಿ ಅಡಿ)
ಜೂನ್	9.19
ಜುಲೈ	31.24
ಆಗಸ್ಟ್	45.95
ಸೆಪ್ಟೆಂಬರ್	36.76
ಅಕ್ಟೋಬರ್	20.22
ನವೆಂಬರ್	3.78
ಡಿಸೆಂಬರ್	7.35
ಜನವರಿ	2.76
ಫೆಬ್ರುವರಿ	2.5
ಮಾರ್ಚ್	2.5
ಏಪ್ರಿಲ್	2.5
ಮೇ	2.5







ನದಿ ಜೋಡಣೆ ಮಾರ್ಗಸೂಚಿಗೆ ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬೇಡ್ತಿ-ವರದಾ ಸೇರಿದಂತೆ ರಾಜ್ಯದೊಳಗಿನ ನದಿಗಳ ಜೋಡಣೆಗೆ ಮಾರ್ಗಸೂಚಿ ಸಿದ್ಧಪಡಿಸಲು ಕಾರ್ಯಪಡೆ/ಸಮಿತಿ ರಚಿಸಲು ನದಿ ಜೋಡಣೆ ಕಾರ್ಯಪಡೆ ಒಲವು ತೋರಿದೆ.

ನದಿ ಜೋಡಣೆ ಕಾರ್ಯಪಡೆಯ 22ನೇ ಸಭೆ

ಕೇಂದ್ರ ಜಲ ಆಯೋಗದ ಅಧ್ಯಕ್ಷ ಅನುಪಮ್ ಪ್ರಸಾದ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಡೆದ ನದಿ ಜೋಡಣೆ ಕಾರ್ಯಪಡೆಯ 22ನೇ ಸಭೆಯಲ್ಲಿ ಈ ವಿಷಯದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ಮುಂದಿನ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

ರಾಜ್ಯದೊಳಗಿನ ನದಿ ಜೋಡಣೆ ಯೋಜನೆಗಳು ಅಧಿಕ ಬಂಡವಾಳ ಬಯಸುವ ಯೋಜನೆಗಳಾಗಿದ್ದು, ನೀರಿನ ಲಭ್ಯತೆ ಸೇರಿದಂತೆ ಜಲವಿಜ್ಞಾನದ ಅಂಶಗಳನ್ನು ಪರಿಗಣಿಸಿದ ರಾಜ್ಯಗಳು ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಸಿದ್ಧಪಡಿಸುತ್ತಿವೆ ಎಂದು ಕಾರ್ಯಪಡೆಯ ಅಧ್ಯಕ್ಷರು ಆಶಯ ವ್ಯಕ್ತಪಡಿಸಿದರು.

ರಾಜ್ಯಗಳ ಹಿತಾಸಕ್ತಿಗೆ ವಿರುದ್ಧವಾಗಿ ಕೇಂದ್ರವು ರಾಜ್ಯಗಳ ನದಿಗಳ ಜೋಡಣೆ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ರಾಜ್ಯದೊಳಗಿನ ನದಿಗಳನ್ನು ಜೋಡಣೆ ಮಾಡುವ ಮೂಲಕ ಅಂತರ್ ರಾಜ್ಯ ನದಿಗಳ ಜೋಡಣೆಗೆ ಹೆಚ್ಚುವರಿ ನೀರು ಲಭ್ಯವಾಗದಂತೆ ನೋಡಿಕೊಳ್ಳುತ್ತಿವೆ ಎಂದು ಕಾರ್ಯಪಡೆಯ ಸದಸ್ಯ ಎ.ಡಿ.ಮೊಹಿಲೆ ದೂರಿಕೊಂಡರು.

ರಾಜ್ಯದೊಳಗಿನ ಎಲ್ಲ ಪ್ರಸ್ತಾವನೆಗಳನ್ನು ನೀರಿನ ಸುರಕ್ಷತೆಯ ರಾಷ್ಟ್ರೀಯ ದೃಷ್ಟಿಕೋನಕ್ಕೆ ಅನುಗುಣವಾಗಿರಬೇಕು. ಹೀಗಾಗಿ, ಅಂತಹ ಪ್ರಸ್ತಾವನೆಗಳನ್ನು ತಯಾರಿಸಲು ಕೆಲವು ಮಾರ್ಗಸೂಚಿಗಳು ಇರಬೇಕು ಎಂದು ಸಭೆ ಒಮ್ಮತದಿಂದ ತೀರ್ಮಾನಿಸಿತು.

ನದಿ ಜೋಡಣೆಗೆ ತಮಿಳುನಾಡು ಒಪ್ಪಿಗೆ: ಗೋದಾವರಿ-ಕಾವೇರಿ ನದಿ ಜೋಡಣೆ ವಿಷಯದಲ್ಲಿ ಪಾಲುದಾರ ರಾಜ್ಯಗಳ ಒಪ್ಪಿಗೆ ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ. ಈ ಯೋಜನೆಗೆ ತಮಿಳುನಾಡು ಹಾಗೂ ಪುದುಚೇರಿ ರಾಜ್ಯಗಳು ತಾತ್ವಿಕ ಒಪ್ಪಿಗೆ ಸೂಚಿಸಿವೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಪ್ರಸ್ತುತ ಪ್ರಸ್ತಾವನೆಯು ಛತ್ತೀಸ್‌ಗಢದ ಗೋದಾವರಿ ಜಲಾನಯನ ಪ್ರದೇಶದ ಇಂದ್ರಾವತಿ ಉಪ-ಜಲಾನಯನ ಪ್ರದೇಶದಲ್ಲಿ ಬಳಕೆಯಾಗದ 4189 ಎಂಸಿಎಂ ನೀರನ್ನು ಬಳಸುವುದರ ಮೇಲೆ ಅವಲಂಬಿತವಾಗಿದೆ. ಹೀಗಾಗಿ, ನದಿ ಜೋಡಣೆಗೆ ಮುಂದಾದರೆ ಸಮಸ್ಯೆ ಉದ್ಭವಿಸಬಹುದು ಎಂದು ಸದಸ್ಯ ಎ.ಡಿ.ಮೊಹಿಲೆ ಸಭೆಯ ಗಮನಕ್ಕೆ ತಂದರು.

ನದಿ ಜೋಡಣೆಗೆ ತೊಡಗುವ ಮೊದಲು ಈ ಪಾಲನ್ನು ಬಳಸಲು ಛತ್ತೀಸಗಢ ಸರ್ಕಾರದ ಒಪ್ಪಿಗೆ ಪಡೆಯಲಾಗುವುದು ಎಂದು ಕಾರ್ಯಪಡೆಯ ಅಧ್ಯಕ್ಷರು ಸ್ಪಷ್ಟಪಡಿಸಿದರು.

ಸಂಪುಟ ಸೇರ್ಪಡೆಗೆ ಪೇಮೆಂಟ್ ಕೋಟಾ: ಎಚ್‌ಡಿಕೆ

ಬೆಂಗಳೂರು: 'ಸಂಪುಟ ಸೇರ್ಪಡೆಗೆ ಪೇಮೆಂಟ್ ಹಾಗೂ ಮ್ಯಾನೇಜ್‌ಮೆಂಟ್ ಕೋಟಾ ಆರಂಭವಾಗಿದ್ದು, ಸಚಿವ ಸ್ಥಾನ ಪಡೆಯಲು ದೊಡ್ಡ ಲಾಬಿ ನಡೆಯುತ್ತಿದೆ. ಹೈಕಮಾಂಡ್‌ಗೆ ಕೊಡಬೇಕೆಂದು ಆಕಾಂಕ್ಷಿಗಳಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಸೂಲಿಗೆ ಇಳಿದಿದ್ದಾರೆ' ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಮ್ಯಾನೇಜ್‌ಮೆಂಟ್ ಕೋಟಾಕ್ಕೆ ಶೇ 5, ಪೇಮೆಂಟ್ ಕೋಟಾಕ್ಕೆ ಶೇ 95 ಸೀಟುಗಳನ್ನು ನಿಗದಿಪಡಿಸಲಾಗಿದೆ. ಕಾಂಗ್ರೆಸ್ ಹೈಕಮಾಂಡ್‌ಗೆ ಒಂದಷ್ಟು, ಶಿವಕುಮಾರ್‌ಗೆ ಒಂದಷ್ಟು ಹಂಚಿಕೆಯಾಗುತ್ತದೆ. ನಿಗದಿಪಡಿಸಿದಷ್ಟು ಹಣ ನೀಡುವವರಿಗೆ ಮಾತ್ರ ಸಂಪುಟ ಸೇರ್ಪಡೆಯ ಭರವಸೆ ಸಿಗುತ್ತಿದೆ' ಎಂದರು.

'ಆದರೆ, ಕರ್ನಾಟಕದಲ್ಲಿ ಇದೇ ಮೊದಲ ಬಾರಿ ಸಂಪುಟ ಸೇರ್ಪಡೆಗೆ ಇಂತಹ ಕೋಟಾ ಪರಿಚಯಿಸಲಾಗುತ್ತಿದೆ. ಹೆಚ್ಚು ಹಣ ಕೊಟ್ಟವರನ್ನು ಅರ್ಹತೆಯ ಆಧಾರದಲ್ಲಿ ತೆಗೆದುಕೊಳ್ಳಲಾಗುತ್ತದೆ. ಹಾಗಾಗಿ, ಸಂಪುಟ ವಿಸ್ತರಣೆ ತಡವಾಗುತ್ತಿದೆ' ಎಂದರು.

ಸಂಪುಟ ವಿಸ್ತರಣೆ ಹೈಕಮಾಂಡ್ ತೀರ್ಮಾನ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಸಂಪುಟ ವಿಸ್ತರಣೆ ಮಾಡುವುದು ಹೈಕಮಾಂಡ್. ಅವರು ಕೊಟ್ಟ ಪಟ್ಟಿಯನ್ನು ಅನುಮೋದನೆಗೊಳಿಸುವುದು ನನ್ನ ಕೆಲಸ. ಸಲೀಂ ಅಹಮದ್ ಪರವಾಗಿ ನೀವು ಮಾಡಿರುವ ಮನವಿಯನ್ನು ಹೈಕಮಾಂಡ್‌ಗೆ ತಲುಪಿಸುತ್ತೇನೆ' ಎಂದು ಉತ್ತರ ಕರ್ನಾಟಕ ಭಾಗದ 14 ಜಿಲ್ಲೆಗಳ ವಿವಿಧ ದರ್ಗಾಗಳ ಮುಖ್ಯಸ್ಥರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.


ಶಿವಕುಮಾರ್

ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಆಗಿರುವ ಸಲೀಂ ಅಹಮದ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಶಿವಕುಮಾರ್ ಅವರಿಗೆ ವಿವಿಧ ದರ್ಗಾಗಳ ಮುಖ್ಯಸ್ಥರು ಮನವಿ ಸಲ್ಲಿಸಿದರು.

'ಈ ನೆಲದ ಎಲ್ಲ ಜಾತಿ, ಧರ್ಮಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವುದೇ ನಮ್ಮ ಸಿದ್ಧಾಂತ. ಸಂವಿಧಾನವನ್ನು ನಂಬಿದ್ದೇವೆ. ಸಂವಿಧಾನದ ಮೇಲೆ ನಡೆಯುತ್ತಿದ್ದೇವೆ. ಅಲ್ಪಸಂಖ್ಯಾತ ಸಮುದಾಯದವರು ಕಾಂಗ್ರೆಸ್ ಪಕ್ಷವನ್ನು ಹಿಡಿದಿದ್ದಾರೆ. ನಾವು ನಿಮ್ಮ ಪರವಾಗಿ ಕೆಲಸ ಮಾಡಿದ್ದೇವೆ. ನಿಮ್ಮೆಲ್ಲರ ಆಶೀರ್ವಾದದಿಂದ ಕಾಂಗ್ರೆಸ್ ಪಕ್ಷ 136 ಸ್ಥಾನಗಳನ್ನು ಗೆದ್ದಿದೆ' ಎಂದರು.

'ಪಕ್ಷ ಅಧಿಕಾರಕ್ಕೆ ಬಂದಾಗ ವರಿಷ್ಠರು ನನ್ನನ್ನೇ ಮುಖ್ಯಮಂತ್ರಿ ಮಾಡುತ್ತಾರೆ ಎಂದುಕೊಂಡಿದ್ದೆ. ಆದರೆ, ಸಿದ್ದರಾಮಯ್ಯ ಮತ್ತು ನೀವು ಅಧಿಕಾರ ಹಂಚಿಕೆ ಮಾಡಿಕೊಳ್ಳಿ ಎಂದು ಸೂಚಿಸಿದರು. ಈ ಗುಟ್ಟು ಕೆಲವರಿಗೆ ಬಿಟ್ಟು ಯಾರಿಗೂ ತಿಳಿದಿರಲಿಲ್ಲ. ಈಗ ಮುಖ್ಯಮಂತ್ರಿ ಸ್ಥಾನದಲ್ಲಿ ಪಕ್ಷ ನನ್ನನ್ನು ಕೂರಿಸಿದೆ' ಎಂದರು.

'ಪರಿಷತ್‌ನಿಂದ ಎಷ್ಟು ಜನರಿಗೆ ಮಂತ್ರಿ ಸ್ಥಾನ ನೀಡಬೇಕು ಎಂಬ ಗೊಂದಲವಿದೆ. ಮುಂದೆ ಏನು ಮಾಡಬೇಕೆಂದು ತೀರ್ಮಾನ ಮಾಡುತ್ತೇವೆ. ಹೊಸಬರಿಗೆ ಅವಕಾಶ ನೀಡಬೇಕೆಂದು ನಾನು ಹೇಳಿದ್ದೇನೆ. ದೆಹಲಿಯವರು ಆಲೋಚನೆ ಮಾಡುತ್ತಿದ್ದಾರೆ. ನನ್ನ ಜೊತೆ ಇನ್ನೂ ಚರ್ಚೆ ಮಾಡಿಲ್ಲ' ಎಂದರು.

'ಲಂಬಾಣಿ ಸಮುದಾಯ, ಮರಾಠಿ ಸಮುದಾಯದವರು, ಹಿಂದುಳಿದವರು ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಪಕ್ಷ ಹಾಗೂ ಸರ್ಕಾರದಲ್ಲಿ ಯಾರನ್ನು ಯಾವ ರೀತಿ ಬಳಸಿಕೊಳ್ಳಬೇಕು ಎಂದು ಯೋಚಿಸಲಾಗುವುದು. ಕೆಲವೊಮ್ಮೆ ಕೆಲವರು ತ್ಯಾಗ ಮಾಡಬೇಕಾಗುತ್ತದೆ' ಎಂದೂ ಹೇಳಿದರು.

500 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ

ಒಂದನೇ ಪುಟದಿಂದ...

ಈ ಮಧ್ಯೆ ಜೂನ್ ಮೂರನೇ ವಾರ ಕಳೆದರೂ, ರಾಜ್ಯದ ಹಲವು ಕಡೆ ಇನ್ನೂ ಮಳೆ ಬಂದಿಲ್ಲ. ಹೀಗಾಗಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗುವ ಭೀತಿ ಎದುರಾಗಿದೆ.

'ವಿಪತ್ತು ನಿರ್ವಹಣೆಯಡಿ ಒಟ್ಟು ₹117 ಕೋಟಿ ಬಿಡುಗಡೆ ಮಾಡಲಾಗಿದೆ. ಪ್ರತಿ ಜಿಲ್ಲಾಧಿಕಾರಿಯ ವೈಯಕ್ತಿಕ ಖಾತೆಯಲ್ಲಿ ₹5 ಕೋಟಿ ಇದೆ. ಕೊಳವೆಬಾವಿಗಳ ನಿರ್ವಹಣೆ, ದುರಸ್ತಿ, ಅಗತ್ಯವಿದ್ದರೆ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಇದನ್ನು ಬಳಸಿಕೊಳ್ಳಲಾಗುತ್ತಿದೆ. ಹಣದ ಕೊರತೆ ಇಲ್ಲ. ಸ್ಥಳೀಯವಾಗಿ ಪ್ರತಿ ವಾರ ಸಭೆ ನಡೆಸಿ ಪರಿಸ್ಥಿತಿ ನಿಭಾಯಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಇಲಾಖೆ ಆಯುಕ್ತೆ ಫೌಜಿಯಾ ತರನ್ನುಮ್ ತಿಳಿಸಿದರು.

ತುರ್ತು ಕ್ರಿಯಾ ಯೋಜನೆ: ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ನೀರಿನ ಸಮಸ್ಯೆ ಇದೆ. ಆಗಸ್ಟ್‌ವರೆಗೂ ಮಳೆ ಆಗದೆ ಇದ್ದರೆ ಸಮಸ್ಯೆ ಉಲ್ಬಣವಾಗಲಿದೆ. ಹೀಗಾಗಿ ಪರ್ಯಾಯವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತುರ್ತು ಕಾರ್ಯ ಯೋಜನೆ ರೂಪಿಸಿ ಈಗಾಗಲೇ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

10–12 ವರ್ಷಗಳಿಂದ ಎಲ್ಲೆಲ್ಲಿ ನೀರಿನ ಸಮಸ್ಯೆ ಉಂಟಾಗಿತ್ತು, ಎಲ್‌ನಿನೊ ಪರಿಸ್ಥಿತಿ ಮುಂದುವರಿದರೆ ಏನು ಮಾಡಬೇಕು? ಪರ್ಯಾಯವಾಗಿ ಯಾವೆಲ್ಲ ನೀರಿನ ಮೂಲಗಳನ್ನು ಬಳಸಿಕೊಳ್ಳಬಹುದು ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಿಯಾ ಯೋಜನೆ ಸಿದ್ಧಪಡಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

'ಪ್ರತಿ ಜಿಲ್ಲೆಯಲ್ಲಿ ನೀರಿನ ಗುಣಮಟ್ಟ ಪರೀಕ್ಷೆ ಮಾಡಿ, ಕುಡಿಯಲು ಯೋಗ್ಯವಾದ ನೀರನ್ನು ಮಾತ್ರ ಪೂರೈಸಲಾಗುತ್ತಿದೆ. ಕಲುಷಿತವಾದ ನೀರನ್ನು ಕುಡಿಯಲು ಬಳಸಬಾರದು. ಆ ನೀರನ್ನು ಬಟ್ಟೆ ತೊಳೆಯಲು, ಮನೆ ಸ್ವಚ್ಛಗೊಳಿಸಲು ಉಪಯೋಗಿಸಬೇಕು ಎಂದು ಮನವರಿಕೆ ಮಾಡಿಕೊಡಲಾಗುತ್ತಿದೆ' ಎಂದು ಫೌಜಿಯಾ ತರನ್ನುಮ್ ವಿವರಿಸಿದರು.

'ರಾಜ್ಯದಲ್ಲಿ ಒಟ್ಟು 19,298 ಶುದ್ಧ ನೀರಿನ ಘಟಕಗಳಿವೆ. ಇವುಗಳಲ್ಲಿ ಬಹುತೇಕ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಮಾರ್ಚ್, ಏಪ್ರಿಲ್‌ನಲ್ಲಿ ದುರಸ್ತಿಗೊಳಿಸಲಾಗಿದೆ. ಆದರೂ ಕೆಲವೊಂದು ಕಡೆ ಮತ್ತೆ ಹಾಳಾಗಿರುತ್ತವೆ. ಅವುಗಳನ್ನೂ ದುರಸ್ತಿಗೊಳಿಸಲಾಗುತ್ತಿದೆ' ಎಂದು ತಿಳಿಸಿದರು.


ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಮೂಲಕ ನೀರಿನ ಮಿತ ಬಳಕೆ ಮತ್ತು ಗುಣಮಟ್ಟದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ
ಫೌಜಿಯಾ ತರನ್ನುಮ್, ಆಯುಕ್ತೆ, ಗ್ರಾಮೀಣ ಕುಡಿಯುವ ನೀರು–ನೈರ್ಮಲ್ಯ ಇಲಾಖೆ

ಪರ್ಯಾಯವಾಗಿ ಏನೇನು ಕ್ರಮ?

- ನೀರನ್ನು ಮಿತವಾಗಿ ಬಳಸಲು ಸಾರ್ವಜನಿಕರಲ್ಲಿ ಅರಿವು
- ಖಾಸಗಿ ಕೊಳವೆಬಾವಿಗಳ ಇಲಾಖೆಯ ವಶಕ್ಕೆ
- ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ
- ಅನಿವಾರ್ಯವಾದರೆ ಹೊಸ ಕೊಳವೆಬಾವಿ ಕೊರೆಯುವುದು

4,511	1,718	2,743
ಕುಡಿಯುವ ನೀರಿಗೆ ಸಂಬಂಧಿಸಿದ ಒಟ್ಟು ಕಾಮಗಾರಿಗಳು	ಪೂರ್ಣಗೊಂಡಿರುವ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು

ಸನ್ನದ್ಧವಾಗಲು ಸಚಿವ ಖಂಡ್ರೆ ಸೂಚನೆ




'ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಖಾಸಗಿ ತೆರೆದ ಬಾವಿ, ಕೊಳವೆಬಾವಿಗಳನ್ನು ಗುರುತಿಸಿ ಅವುಗಳಿಂದ ಲಭ್ಯವಾಗುವ ನೀರಿನ ಪ್ರಮಾಣ, ಲಭ್ಯತೆ ಮತ್ತು ಕುಡಿಯಲು ಯೋಗ್ಯವಾಗಿರುವ ಬಗ್ಗೆ ಪರೀಕ್ಷೆ ನಡೆಸಲು ಸೂಚಿಸಲಾಗಿದೆ' ಎಂದು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

'ಖಾಸಗಿ ಜಲಮೂಲಗಳ ಮಾಲೀಕರೊಂದಿಗೆ ಮಾತನಾಡಿ, ಅಗತ್ಯವಿದ್ದರೆ ನಿಯಮಾನುಸಾರ ಒಪ್ಪಂದ ಮಾಡಿಕೊಂಡು, ಜನರಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ಕ್ರಮಕೈಗೊಳ್ಳಬೇಕು. ಸದಾ ಸನ್ನದ್ಧ ಸ್ಥಿತಿಯಲ್ಲಿ ಇರಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದು ಅವರು ಹೇಳಿದರು.



ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕಲ್ಲು–ಇಟ್ಟಿಗೆಗಳಿಂದ ಕಟ್ಟಿರುವ ಗುಡಿ–ಗೋಪುರಗಳಿಗಿಂತ ನೆತ್ತರು–ಮಾಂಸದಿಂದ ನಿರ್ಮಾಣವಾಗಿರುವ ಮಾನವನ ಶರೀರವೇ ನಿಜವಾದ ದೇವಾಲಯ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಕಳಪೆ ಔಷಧ ಮಾರಾಟಕ್ಕೆ ನಿರ್ಬಂಧ ಉತ್ಪಾದನಾ ಹಂತದಲ್ಲೇ ನಿಗಾ ಅಗತ್ಯ

ವೈದ್ಯರ ಶಿಫಾರಸಿನ ಚೀಟಿಯ (ಪ್ರಿಸ್ಕ್ರಿಪ್ಷನ್) ಆಧಾರದ ಮೇಲಷ್ಟೇ ಕೆಮ್ಮಿನ ಸಿರಪ್‌ಗಳ ಮಾರಾಟ ಮಾಡಬೇಕೆಂದು ಕೇಂದ್ರ ಆರೋಗ್ಯ ಸಚಿವಾಲಯ ನಿಯಮಗಳ ತಿದ್ದುಪಡಿ ಮಾಡಿರುವುದು ಸ್ವಾಗತಾರ್ಹ. ಕಲಬೆರಕೆ ಹಾಗೂ ಅಪಾಯಕಾರಿ ಔಷಧಗಳಿಂದ ಉಂಟಾಗಬಹುದಾದ ಅಪಾಯವನ್ನು ತಡೆಗಟ್ಟುವ ನಿಟ್ಟಿನಿಂದ ಸರ್ಕಾರ ವಿಧಿಸಿರುವ ನಿರ್ಬಂಧ ಸರಿಯಾದುದಾಗಿದೆ. ಈ ಮೊದಲು ವೈದ್ಯರ ಚೀಟಿ ಇಲ್ಲದೆಯೇ ಔಷಧ ಅಂಗಡಿಗಳಲ್ಲಿ ಕೆಮ್ಮಿನ ಸಿರಪ್‌ಗಳು ದೊರೆಯುತ್ತಿದ್ದವು; ಹಳ್ಳಿಗಳಲ್ಲಿನ ಚಿಲ್ಲರೆ ಅಂಗಡಿಗಳಲ್ಲೂ ಮಾರಾಟವಾಗುತ್ತಿದ್ದವು. ಈ ಸಿರಪ್‌ಗಳನ್ನು ಪ್ರಸ್ತುತ 'ಶೆಡ್ಯೂಲ್ ಕೆ'ಯಿಂದ (ಕೆಲವು ನಿರ್ದಿಷ್ಟ ಔಷಧಗಳ ಮಾರಾಟದ ಪಟ್ಟಿಯಿಂದ) ಹೊರಗಿಡಲಾಗಿದೆ. ವೈದ್ಯರ ಅಧಿಕೃತ ಚೀಟಿಯ ಆಧಾರದ ಮೇಲಷ್ಟೇ, ಪರವಾನಗಿ ಹೊಂದಿರುವ ಔಷಧ ಅಂಗಡಿಗಳಲ್ಲಿ ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಬಗೆಯ ಸಿರಪ್‌ಗಳು ಇನ್ನುಮುಂದೆ ದೊರೆಯಲಿವೆ. ವೈದ್ಯರ ಸಲಹೆಯಿಲ್ಲದೆ ಕೆಮ್ಮಿನ ಸಿರಪ್‌ಗಳ ಸೇವನೆ ಅನಾರೋಗ್ಯಕ್ಕೆ ಹಾಗೂ ಸಾವಿಗೆ ಕಾರಣವಾಗಿರುವ ಉದಾಹರಣೆಗಳಿವೆ. ಈ ಔಷಧಗಳ ಸೇವನೆಯಿಂದ ಮಕ್ಕಳು ಹೆಚ್ಚಿನ ತೊಂದರೆಗೊಳಗಾಗುತ್ತಾರೆ. ಕೆಮ್ಮಿನ ಸಿರಪ್‌ಗಳಿಂದ ಭಾರತದಲ್ಲಿ ಹಾಗೂ ಈ ಔಷಧಗಳು ರಫ್ತಾಗುವ ದೇಶಗಳಲ್ಲಿ ಸಾವುಗಳು ಸಂಭವಿಸಿವೆ. 2025ರ ಅಕ್ಟೋಬರ್‌ನಲ್ಲಿ ಮಧ್ಯಪ್ರದೇಶದ ಛಿಂದ್ವಾರದಲ್ಲಿ 22 ಮಕ್ಕಳು ಸಾವಿಗೀಡಾಗಿದ್ದರು. ದೇಶದ ಬೇರೆ ಬೇರೆ ರಾಜ್ಯಗಳಲ್ಲೂ ಮಕ್ಕಳ ಸಾವಿನ ಪ್ರಕರಣಗಳು ಸಂಭವಿಸಿದ್ದವು. ಭಾರತದಿಂದ ಕೆಮ್ಮಿನ ಸಿರಪ್‌ಗಳು ರಫ್ತಾಗುತ್ತಿದ್ದ ಉಜ್ಬೆಕಿಸ್ತಾನ, ಕ್ಯಾಮರೂನ್ ಮತ್ತು ಗಾಂಬಿಯಾ ದೇಶಗಳಲ್ಲೂ ಮಕ್ಕಳ ಸಾವುಗಳು ಸಂಭವಿಸಿದ್ದವು. ಭಾರತದಲ್ಲಿ ತಯಾರಾಗುವ ಕೆಮ್ಮಿನ ಸಿರಪ್‌ಗಳ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆಯ ಸೂಚನೆಯನ್ನೂ ನೀಡಿತ್ತು.



ಔಷಧ ತಯಾರಿಕೆಯ ಹಂತದಲ್ಲಿ ಗುಣಮಟ್ಟದ ಕಟ್ಟುನಿಟ್ಟು ಪರಿಶೀಲನೆ ನಡೆಸದೆ, ಮಾರಾಟದ ಹಂತದಲ್ಲಿ ನಿರ್ಬಂಧಗಳನ್ನು ವಿಧಿಸಿದರೆ ಸಮಸ್ಯೆ ಬಗೆಹರಿಯುವುದಿಲ್ಲ.

ಅಪಾಯದ ಅರಿವಿಲ್ಲದೆಯೇ ಕೆಮ್ಮಿನ ಸಿರಪ್‌ಗಳನ್ನು ಸೇವಿಸುವ ಸಾಕಷ್ಟು ಜನರಿದ್ದಾರೆ. ವೈದ್ಯರ ಚೀಟಿಯನ್ನು ಕಡ್ಡಾಯಗೊಳಿಸಿರುವ ಕ್ರಮದಿಂದ ಈ ಔಷಧಗಳ ಮಾರಾಟದ ನಿಯಂತ್ರಣ ಸ್ವಲ್ಪ ಮಟ್ಟಿಗೆ ಸಾಧ್ಯವಾಗಬಹುದು. ಆದರೆ, ಇಂಥ ನಿಯಮಗಳು ಉಲ್ಲಂಘನೆಗೊಳಗಾಗುವ ಸಾಧ್ಯತೆಗಳೇ ಹೆಚ್ಚು. ಅಲ್ಲದೆ, ಮಾರಾಟದ ಮೇಲೆ ವಿಧಿಸುವ ನಿರ್ಬಂಧವು, ಉತ್ಪಾದನಾ ಹಂತದಲ್ಲಿನ ಗಂಭೀರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವುದಿಲ್ಲ. ಪರಿಣಾಮಕಾರಿಯಾದ ಸುರಕ್ಷತಾ ನಿಯಮಗಳು, ಮಾರ್ಗಸೂಚಿಗಳು, ಉತ್ಪಾದನಾ ಪ್ರಕ್ರಿಯೆಯ ಮೇಲ್ವಿಚಾರಣೆ ಮತ್ತು ನಿಗಾ ವಹಿಸುವಿಕೆಗೆ ಸಂಬಂಧಿಸಿದ ಸಮರ್ಥ ವ್ಯವಸ್ಥೆಯ ಕೊರತೆಯೇ ಸಮಸ್ಯೆಗೆ ಮೂಲ ಕಾರಣವಾಗಿದೆ. ಗುಣಮಟ್ಟ ನಿಯಂತ್ರಣ ಮತ್ತು ತಪಾಸಣೆಗೆ ಸಂಬಂಧಿಸಿದ ಕಾನೂನುಬದ್ಧ ವ್ಯವಸ್ಥೆಯೂ ಸಮರ್ಪಕವಾಗಿಲ್ಲ. ಸೌಲಭ್ಯಗಳು ಮತ್ತು ಸಿಬ್ಬಂದಿಯ ಕೊರತೆ, ಕಾನೂನು ಚೌಕಟ್ಟಿನಲ್ಲಿನ ಲೋಪಗಳು, ವ್ಯವಸ್ಥೆಯ ಕಾರ್ಯ ನಿರ್ವಹಣೆಯಲ್ಲಿನ ವಿಳಂಬ, ಭ್ರಷ್ಟಾಚಾರದಂತಹ ಕಾರಣಗಳಿಂದಾಗಿ ಸಮಸ್ಯೆಯು ಅಪಾಯಕಾರಿ ಸ್ವರೂಪ ಪಡೆದುಕೊಂಡಿದೆ. ದುರಂತಕ್ಕೆ ಕಾರಣವಾದ ಪ್ರಕರಣಗಳು ಕೆಲವು ದಿನಗಳಲ್ಲೇ ಮರೆವಿಗೆ ಸಲ್ಲುತ್ತವೆ ಹಾಗೂ ತಪ್ಪಿತಸ್ಥ ಘಟಕಗಳು ಸದ್ದಿಲ್ಲದೆ ಸಕ್ರಿಯವಾಗುತ್ತವೆ. ದಂಡ ವಿಧಿಸುವಿಕೆಯಂತಹ ಶಿಕ್ಷೆಗಳು ವಿವಿಧ ಕಾರಣಗಳಿಂದಾಗಿ ರದ್ದಾಗುತ್ತವೆ. ಕಲುಷಿತ ಪ್ರಕರಣಗಳಿಂದ ಅನಾಹುತ ಸಂಭವಿಸಿದ ಪ್ರಕರಣಗಳು ಬೆಳಕಿಗೆ ಬಂದ ನಂತರವೂ ಅದೇ ಕಂಪನಿಯ ಸಿರಪ್‌ಗಳು ಮಾರುಕಟ್ಟೆಯಲ್ಲಿ ಲಭಿಸುತ್ತಿರುತ್ತವೆ. ಈ ಸಮಸ್ಯೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಔಷಧಗಳ ಉತ್ಪಾದನಾ ಹಂತದಲ್ಲಿ ಆಗಬೇಕೇ ಹೊರತು, ಮಾರಾಟದ ಹಂತದಲ್ಲಿ ಅಲ್ಲ.

ಕೆಮ್ಮಿನ ಸಿರಪ್ ತಯಾರಿಸುವ ಸುಮಾರು 2,000ಕ್ಕೂ ಹೆಚ್ಚು ಉತ್ಪಾದಕರು ಭಾರತದಲ್ಲಿದ್ದಾರೆ. ಇವರೆಲ್ಲರೂ ಉತ್ಪಾದನಾ ವಿಧಾನಗಳನ್ನು ಸಮರ್ಪಕವಾಗಿ ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವ ವ್ಯವಸ್ಥೆ ಅತ್ಯಗತ್ಯವಾಗಿದೆ. ಕಠಿಣ ಪರೀಕ್ಷೆ, ನಿರಂತರ ಮೇಲ್ವಿಚಾರಣೆ ಮತ್ತು ಗುಣಮಟ್ಟದ ಭರವಸೆಯ ವ್ಯವಸ್ಥೆಯ ಮೂಲಕ ಔಷಧಗಳ ಉತ್ಪಾದನೆಯಲ್ಲಿನ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾಗಿದೆ. ನಿಯಮಾನುಸಾರ ಕಚ್ಚಾ ವಸ್ತುಗಳ ಪರಿಶೀಲನೆ ಹಾಗೂ ಉತ್ಪಾದನೆಯ ಪ್ರತಿಯೊಂದು ಹಂತದಲ್ಲಿ ಗುಣಮಟ್ಟದ ಪರೀಕ್ಷೆ ನಡೆಯಬೇಕಾಗಿದೆ. ವಾಸ್ತವದಲ್ಲಿ ಈ ಪರೀಕ್ಷೆಗಳು ಕಟ್ಟುನಿಟ್ಟಾಗಿ ನಡೆಯುತ್ತಿಲ್ಲ. ಕಾನೂನು ಮತ್ತು ನಿಯಂತ್ರಣಗಳ ಅನುಷ್ಠಾನಕ್ಕೆ ಸಂಬಂಧಿಸಿದ ಹೊಣೆಗಾರಿಕೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಸ್ಥೆಗಳದಾಗಿದ್ದು, ಅವುಗಳ ನಡುವೆ ಸಮನ್ವಯದ ಕೊರತೆಯಿದೆ. ಔಷಧ ಉತ್ಪಾದನಾ ಕ್ಷೇತ್ರದಲ್ಲಿನ ಬೇರುಮಟ್ಟದ ಸಮಸ್ಯೆಗಳನ್ನು ಹಾಗೆಯೇ ಉಳಿಸಿಕೊಂಡು, ಮಾರಾಟ ಕೇಂದ್ರಗಳಲ್ಲಿ ವಿಧಿಸುವ ನಿರ್ಬಂಧಗಳಿಂದ ನಿರೀಕ್ಷಿತ ಫಲಿತಾಂಶ ದೊರೆಯುವುದಿಲ್ಲ.

ಚಾಟಿ

ಈ ಶಿಸ್ತಿನ ದೇಶದಲ್ಲಿ...



ಸರ್ಕಾರಿ ಕಚೇರಿಗಳು ಸಮಯಕ್ಕೆ ಸರಿಯಾಗಿ ಕೆಲಸ ಆರಂಭಿಸುವ ದೇಶದಲ್ಲಿ, ನಿಖರವಾದ ಸಮಯಕ್ಕೆ ಬಸ್ಸು–ರೈಲು ಸಂಚರಿಸುವಂತಹ ದೇಶದಲ್ಲಿ, ಕರೆ ಮಾಡಿದ ಕೂಡಲೇ ಪೊಲೀಸ್, ಆಂಬುಲೆನ್ಸ್, ಅಗ್ನಿಶಾಮಕ ದಳ ಘಟನಾ ಸ್ಥಳವನ್ನು ತಲಪುವ ದೇಶದಲ್ಲಿ, ಸರ್ಕಾರಗಳು ಹರಿಶ್ಚಂದ್ರ ವಂಶದವರಂತೆ ರಾತ್ರಿ ಹಗಲೂ ಕೆಲಸ ಮಾಡುತ್ತಿರುವ ದೇಶದಲ್ಲಿ, ವಿದ್ಯಾರ್ಥಿಗಳು ತಡವಾಗಿ ಪರೀಕ್ಷೆಗೆ ಹೋದದ್ದು ಘೋರ ಅಪರಾಧ.

ಮಂಸೋರೆ, ಸಿನಿಮಾ ನಿರ್ದೇಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



'ಎಸ್ಕಾಂ'ಗಳನ್ನು ಖಾಸಗೀಕರಣ ಮಾಡುವ ಯತ್ನ ರಾಜ್ಯದ ಜನರ ಹಿತಕ್ಕೆ ವಿರುದ್ಧವಾಗಿದೆ. ವಿದ್ಯುತ್ ಬರೀ ವ್ಯವಹಾರವಲ್ಲ, ಅದು ಪ್ರತಿಯೊಬ್ಬ ನಾಗರಿಕನ ಹಕ್ಕು. ಲಾಭದಾಸೆಯ ಖಾಸಗಿ ಕಂಪನಿಗಳಿಗೆ ಈ ಮಹತ್ವದ ಕ್ಷೇತ್ರವನ್ನು ಹಸ್ತಾಂತರಿಸಿದರೆ ಸಾಮಾನ್ಯ ಜನರಿಗೆ ಭವಿಷ್ಯದಲ್ಲಿ ಬೆಲೆ ಏರಿಕೆಯ ಭಾರ ಹೆಚ್ಚುವುದರಲ್ಲಿ ಅನುಮಾನವಿಲ್ಲ.

ವಿ. ಸುನಿಲ್‌ಕುಮಾರ್, ಶಾಸಕ

25 ವರ್ಷಗಳ ಹಿಂದೆ

ಶನಿವಾರ, 23-6-2001

• **ಭೀಕರ ರೈಲು ದುರಂತ: 43 ಮಂದಿ ನೀರಿನಲ್ಲಿ ಮುಳುಗಿ ಸಾವು**

ಕೋಯಿಕ್ಕೋಡ್, ಜೂನ್ 22 (ಪಿಟಿಐ)– ಮಂಗಳೂರು–ಚೆನ್ನೈ ಮೇಲ್ ರೈಲಿನ ಎಂಟು ಬೋಗಿಗಳು ಇಂದು ಸಂಜೆ ಹಳಿ ತಪ್ಪಿ 4 ಬೋಗಿಗಳು ಇಲ್ಲಿಗೆ 20 ಕಿ.ಮೀ. ದೂರದಲ್ಲಿರುವ ಕಡಲುಂಡಿ ನದಿಗೆ ಬಿದ್ದಿದ್ದರಿಂದ ಕನಿಷ್ಠ 43 ಜನರು ನೀರಿನಲ್ಲಿ ಮುಳುಗಿ ಸತ್ತಿದ್ದಾರೆ. ಸುಮಾರು 230 ಮಂದಿಗೆ ಗಾಯವಾಗಿದೆ.

ಈ ಸಂಖ್ಯೆ ಇನ್ನೂ ಏರುವ ಸಾಧ್ಯತೆ ಇದೆ. ನೀರಿನಲ್ಲಿ ಅರ್ಧ ಮುಳುಗಿರುವ ಬೋಗಿಗಳಲ್ಲಿ ಸಿಕ್ಕಿ ಹಾಕಿಕೊಂಡಿರುವವರ ದೇಹಗಳನ್ನು ಹೊರ ತೆಗೆಯಲು ರಕ್ಷಣಾ ಪಡೆಗಳು ಯತ್ನಿಸುತ್ತಿವೆ. ಗಾಯಗೊಂಡಿರುವವರನ್ನು ಕೊಯಿಕ್ಕೋಡ್ ವೈದ್ಯಕೀಯ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ದಾಖಲು ಮಾಡಲಾಗಿದೆ. ಇವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ. ನೀರಿನಲ್ಲಿ ಮುಳುಗಿ ಶೋಧಿಸಬಲ್ಲ 15 ಜನ ನೌಕಾಪಡೆಯ ಪರಿಣತರು. ಇಬ್ಬರು ಅಧಿಕಾರಿಗಳ ಜತೆ ಅಪಘಾತ ಸಂಭವಿಸಿದ ಸ್ಥಳಕ್ಕೆ ಧಾವಿಸಿದ್ದಾರೆ.

75 ವರ್ಷಗಳ ಹಿಂದೆ

ಶನಿವಾರ, 23-6-1951

• **ಯುದ್ಧದಲ್ಲಿ ಅಮೆರಿಕಾ ರಷ್ಯವನ್ನು ಗೆಲ್ಲಲಾರದು: ಜರ್ಮನಿ ಎಚ್ಚರಿಕೆ**

ಬರ್ಲಿನ್, ಜೂ. 22– ರಷ್ಯದ ವಿರುದ್ಧ ಯುದ್ಧದಲ್ಲಿ ಅಮೆರಿಕಾವು ಗೆಲ್ಲುವ ಸಂಭವವಿಲ್ಲವೆಂದು ಪೂರ್ವ ಜರ್ಮನಿ ಇಂದು ಎಚ್ಚರಿಕೆಯಿತ್ತಿತು.

ರಷ್ಯದ ಮೇಲೆ ನಾಜಿ ಆಕ್ರಮಣದ ಹತ್ತನೆಯ ವಾರ್ಷಿಕ ಸಂದರ್ಭದಲ್ಲಿನ ಘೋಷಣೆಯು, 'ಅಮೆರಿಕಾಕ್ಕಿಂತ ಸೇನೆ ಮುಂತಾದ ಅಂಶಗಳಲ್ಲಿ ಹಿಟ್ಲರನ ಜರ್ಮನಿಯು ರಷ್ಯದಿಂದ ಪರಾಜಿತವಾಗಿರುವಾಗ ಪೂರ್ವ ಯುರೋಪ್ ಆಕ್ರಮಿಸಲು ಅಮೆರಿಕಾ ಸಾಮ್ರಾಜ್ಯಶಾಹಿಗಳ ಯೋಜನೆ ಯಶಸ್ವಿಯಾಗದೆಂದೂ ರಷ್ಯ, ಪೂರ್ವ ಯುರೋಪ್ ಪ್ರಜಾಪ್ರಭುತ್ವ ಮತ್ತು ಚೀಣಗಳ ಶಕ್ತಿ ಹೆಚ್ಚಿದೆಯೆಂದೂ ತಿಳಿಸುತ್ತದೆ.

'ಎಐ' ಉತ್ಕರ್ಷ, ಮನುಷ್ಯ ವಿವೇಕ



ವಿಶ್ಲೇಷಣೆ

ವೇಣುಗೋಪಾಲ್ ಟಿ. ಎಸ್

> ಮನುಷ್ಯನ ಘನತೆ, ಸ್ವಾತಂತ್ರ್ಯ, ಕರುಣೆ ಮತ್ತು ನೈತಿಕ ವಿವೇಕದ ಹೊಳಪು ತಂತ್ರಜ್ಞಾನದ ಉತ್ಕರ್ಷದಲ್ಲಿ ಮರೆಯಾಗಬಾರದು ಎನ್ನುವ ವಾದವನ್ನು ಅಮೆರಿಕದ ಪೋಪ್ ಅವರು 'ಕೃತಕ ಬುದ್ಧಿಮತ್ತೆ' ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ತಂತ್ರಜ್ಞಾನ ಸಾಮಾಜಿಕ ತರತಮಗಳಿಗೆ ಕಾರಣವಾಗಬಾರದು ಎನ್ನುವ ಪೋಪ್ ಅವರ ಕಾಳಜಿ ಎಲ್ಲರದಾಗಬೇಕಾಗಿದೆ.

ಕೃತಕ ಬುದ್ಧಿಮತ್ತೆಗೆ ನಿಜಕ್ಕೂ ಸ್ವಂತ ಬುದ್ಧಿ, ಪ್ರಜ್ಞೆ ಇದೆಯೆ? ಈ ತಂತ್ರಜ್ಞಾನ ಹೀಗೆಯೇ ಬೆಳೆದರೆ ಮುಂದೆ ಏನಾಗುತ್ತದೆ? ಇಂಥ ನೂರಾರು ಪ್ರಶ್ನೆಗಳು ಬಹುತೇಕ ಜನರನ್ನು ಕಾಡುತ್ತಿವೆ. ಈ ಹಿನ್ನೆಲೆಯಲ್ಲಿ ಅಮೆರಿಕದ ಪೋಪ್ ಲಿಯೋ XIV ಅವರು ಕೃತಕ ಬುದ್ಧಿಮತ್ತೆ ಬಗ್ಗೆ ಬರೆದ ಧರ್ಮೋಪದೇಶಾತ್ಮಕ ಪತ್ರ 'ಮ್ಯಾಗ್ನಿಫಿಕಾ ಹ್ಯೂಮಾನಿಟಾಸ್' ಈಗ ಭಾರೀ ಚರ್ಚೆಗೆ ಕಾರಣವಾಗಿದೆ.

'ಕೃತಕ ಬುದ್ಧಿಮತ್ತೆಯನ್ನು ಮನುಷ್ಯರ ಬುದ್ಧಿಶಕ್ತಿಗೆ ಹೋಲಿಸಬೇಡಿ. ಅದು ಮನುಷ್ಯನಿಗಿಂತ ವೇಗವಾಗಿ ಕೆಲಸ ಮಾಡಬಹುದು. ದೊಡ್ಡ ದೊಡ್ಡ ಲೆಕ್ಕಾಚಾರ ಮಾಡಬಹುದು. ಆದರೆ, ಅದಕ್ಕೆ ಸಂತೋಷ–ದುಃಖ ಗೊತ್ತಾಗುವುದಿಲ್ಲ. ಪ್ರೀತಿ, ಸ್ನೇಹ, ಜವಾಬ್ದಾರಿ ಅದಕ್ಕೆ ತಿಳಿಯುವುದಿಲ್ಲ. ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಧಾರ ಮಾಡುವ ನೈತಿಕ ಪ್ರಜ್ಞೆಯೂ ಅದಕ್ಕಿಲ್ಲ. ಅದು ನಾವು ಮಾತನಾಡುವ ಭಾಷೆ, ನಡವಳಿಕೆಯನ್ನು ನಕಲು ಮಾಡಬಲ್ಲದೇ ಹೊರತು, ತಾನು ಏನು ಮಾಡುತ್ತಿದೆ ಎಂಬುದು ಅದಕ್ಕೆ ನಿಜವಾಗಿ ಅರ್ಥವಾಗುವುದಿಲ್ಲ. ಅವುಗಳಿಗೆ ಮನುಷ್ಯರಾಗೋಕೆ ಸಾಧ್ಯವಿಲ್ಲ' ಎಂದು ಪೋಪ್ ಹೇಳಿದ್ದಾರೆ.

ನಿಜ, ಇದುವರೆಗೆ 'ಎಐ' ಅಪ್ಪಟ ಸೃಜನಶೀಲತೆಯನ್ನು ಪ್ರದರ್ಶಿಸಿಲ್ಲ. ವಾಸ್ತವ ಜಗತ್ತಿನ ಯಾವುದೇ ಪ್ರತ್ಯಕ್ಷ ಅನುಭವ ಅವುಗಳಿಗಿಲ್ಲ. ಅಷ್ಟೇ ಅಲ್ಲ, ಭೌತಿಕ ಮತ್ತು ಸಾಮಾಜಿಕ ಪ್ರಪಂಚದೊಂದಿಗೆ ಒಡನಾಡುತ್ತಾ ತಪ್ಪು–ಒಪ್ಪುಗಳ ಮೂಲಕ ಕಲಿಯುವ ಸಾಮರ್ಥ್ಯವೂ ಅವುಗಳಿಗಿಲ್ಲ ಎಂದು ಪೋಪ್ ಅವರ ಅಭಿಪ್ರಾಯವನ್ನು ಹಲವರು ಅನುಮೋದಿಸಿದ್ದಾರೆ. ಪ್ರಜ್ಞೆ ಎಂದರೇನು, ಅದು ಹೇಗೆ ಉಂಟಾಗುತ್ತದೆ ಎನ್ನುವುದೇ ಇನ್ನೂ ಸ್ಪಷ್ಟವಾಗಿಲ್ಲದಿರುವಾಗ 'ಎಐ'ಗೆ ಪ್ರಜ್ಞೆ ಇಲ್ಲ ಎಂದು ಪೋಪ್ ಅವರು ಖಾತರಿಯಾಗಿ ಹೇಗೆ ಹೇಳುತ್ತಾರೆ ಎಂದು ಪ್ರಶ್ನಿಸುವವರೂ ಇದ್ದಾರೆ. ಎಐಗೆ ಪ್ರಜ್ಞೆ ಇದೆ ಅನ್ನುವವರು ಸಾಕ್ಷಿ ಕೊಡಬೇಕೇ ಹೊರತು, ಅದನ್ನು ಅನುಮಾನಿಸುತ್ತಿರುವ ನಾವುಗಳಲ್ಲ ಎನ್ನುವ ತರ್ಕ ಅವರದು.

ಪೋಪ್ ಅವರು ಪ್ರಜ್ಞೆಯ ಸಮಸ್ಯೆಯನ್ನು ಮೀರಿದ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಟೆಕ್ ಕಂಪನಿಗಳು ಮಾನವನ ಶಕ್ತಿಯನ್ನು ಮೀರಿಸುವ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಸೃಷ್ಟಿಸಲು ಹೊರಟಿವೆ. ಇದನ್ನು ಅವರು ಮಾನವನ ಒಳಿತಿಗಾಗಿ ಮಾಡುತ್ತಿಲ್ಲ; ತಮ್ಮ ಅಹಂಕಾರವನ್ನು ತಣಿಸಿಕೊಳ್ಳಲು ಮತ್ತು ಲಾಭಕ್ಕಾಗಿ ಮಾಡುತ್ತಿದ್ದಾರೆ. ಮನುಕುಲದ ನಿಯಂತ್ರಣವೇ ಅವರ ಸಿದ್ಧಾಂತವಾಗಿದೆ. ಎಲ್ಲ ವಿಷಯಗಳಲ್ಲೂ ಮನುಷ್ಯನಿಗಿಂತ ಯಂತ್ರಗಳೇ ಶ್ರೇಷ್ಠ ಎಂಬ ನಂಬಿಕೆಯಿಂದ ಅವರು ಸಾಗುತ್ತಿದ್ದಾರೆ. ಇದರಿಂದ ಏನೆಲ್ಲಾ ತೊಂದರೆಗಳಾಗಬಹುದು ಅನ್ನುವ ಕಾಳಜಿಯಾಗಲಿ, ದೂರದೃಷ್ಟಿಯಾಗಲಿ ಅವರಿಗಿಲ್ಲ. ಮುಂದೆ ಇದು ಸಮಾಜದಲ್ಲಿ ದೊಡ್ಡ ಗೊಂದಲ ಮತ್ತು ವಿನಾಶಕ್ಕೆ ಕಾರಣವಾಗಬಹುದೆಂದು ಪೋಪ್ ಎಚ್ಚರಿಸಿದ್ದಾರೆ. ಹಿಂದೆಯೂ ಮನುಷ್ಯ ಹೀಗೆಯೇ ಸ್ವಾರ್ಥಕ್ಕಾಗಿ, ಅಹಂಕಾರದಿಂದ ಅತಿ ಎತ್ತರದ ಬಾಬೆಲ್ ಗೋಪುರವನ್ನು ಕಟ್ಟಲು ಪ್ರಯತ್ನಿಸಿ ವಿಫಲವಾದ ಕಥೆಯನ್ನು ತಮ್ಮ ಮಾತುಗಳಿಗೆ ಪೂರಕವಾಗಿ ಅವರು ಉಲ್ಲೇಖಿಸಿದ್ದಾರೆ.

ತಂತ್ರಜ್ಞಾನ ಎಂದೂ ತಟಸ್ಥವಾಗಿರಲಿಲ್ಲ. ಅದನ್ನು ಯಾರು ವಿನ್ಯಾಸಗೊಳಿಸುತ್ತಾರೆ, ಯಾರು ಹಣ ಹೂಡುತ್ತಾರೆ ಅನ್ನುವುದು ಅದರ ಸ್ವರೂಪವನ್ನು ನಿರ್ಧರಿಸುತ್ತದೆ. ಸದ್ಯಕ್ಕೆ 'ಎಐ' ಉದ್ದಿಮೆಯನ್ನು ಕೆಲವೇ ಶ್ರೀಮಂತರು ನಿಯಂತ್ರಿಸುತ್ತಿದ್ದಾರೆ. ಅವರು ರಾಜಕೀಯವಾಗಿಯೂ ಪ್ರಭಾವಶಾಲಿಗಳು. ಅವರೇ ಇಡೀ ತಂತ್ರಜ್ಞಾನದ ಹಾದಿಯನ್ನು ನಿರ್ಧರಿಸುತ್ತಿದ್ದಾರೆ. ಕೃತಕ ಬುದ್ಧಿಮತ್ತೆ ನಾವು ಪರಸ್ಪರ ಸಂವಹಿಸುವ ಕ್ರಮ, ಮಾಹಿತಿ ಪಡೆದುಕೊಳ್ಳುವ ಕ್ರಮ, ನಮ್ಮ ಸಂಬಂಧಗಳು, ಆರ್ಥಿಕತೆ ಕೆಲಸ ಮಾಡುವ ಕ್ರಮ, ಯುದ್ಧ ಮಾಡುವ ಕ್ರಮ, ಎಲ್ಲವನ್ನೂ ಪ್ರಭಾವಿಸುತ್ತಿದೆ ಹಾಗೂ ಬದಲಿಸುತ್ತಿದೆ. ಹಾಗಾಗಿಯೇ ಪೋಪ್ ದೊಡ್ಡ ಕಂಪನಿಗಳ ಏಕಸ್ವಾಮ್ಯ ಒಡೆತನದ ಬಗ್ಗೆ ಆತಂಕಗೊಂಡಿದ್ದಾರೆ. ವಸಾಹತುಶಾಹಿ ಜಗತ್ತು ಮತ್ತೆ ಡಿಜಿಟಲ್ ರೂಪದಲ್ಲಿ ನಮ್ಮ ಮುಂದೆ ನಿಂತಿದೆ. ತಂತ್ರಜ್ಞಾನ ಹಾಗೂ ಹಣದ ಮಾರುಕಟ್ಟೆಯ ನಡುವೆ ಅಪವಿತ್ರವಾದ ಮೈತ್ರಿ ಏರ್ಪಟ್ಟಿದೆ. ತಂತ್ರಜ್ಞಾನದ ಭವಿಷ್ಯವನ್ನು ಬರೀ ಮಾರುಕಟ್ಟೆಯ ಲಾಭ ಮತ್ತು ಬೆಲೆಗಳು ನಿರ್ಧರಿಸುವಂತಾಗಬಾರದೆಂದು ಪೋಪ್ ನೇರವಾಗಿ ಎಚ್ಚರಿಸುತ್ತಿದ್ದಾರೆ.

ತಂತ್ರಜ್ಞಾನವನ್ನು ಪ್ರಶ್ನಿಸಿದಾಗಲೆಲ್ಲ 'ತಂತ್ರಜ್ಞಾನ ಬೆಳೆಯೋದನ್ನು ತಡೆಯೋಕೆ ಆಗಲ್ಲ, ಅದು ಅನಿವಾರ್ಯ' ಎನ್ನುವ ವಾದ ಮುನ್ನೆಲೆಗೆ ಬರುತ್ತದೆ. ಅದು ನಿಜವಿರಬಹುದು. ಆದರೆ, ತಂತ್ರಜ್ಞಾನದ ಭವಿಷ್ಯ ನಮ್ಮ ಹಣೆಬರಹವಲ್ಲ. ಯಾವುದೇ ತಂತ್ರಜ್ಞಾನವೂ ನನ್ನನ್ನು ಹೀಗೆಯೇ ಬಳಸಬೇಕು ಎಂದು ಹೇಳುವುದಿಲ್ಲ. ಅದು ನಮ್ಮ ಆಯ್ಕೆ, ನಮ್ಮ ಆದ್ಯತೆ. ಸಿಲಿಕಾನ್ ವ್ಯಾಲಿಯ ವೆಂಚರ್ ಕ್ಯಾಪಿಟಲಿಸ್ಟ್‌ಗಳ ಕೈಗೆ ಸಿಕ್ಕರೆ ಕೆಲಸಗಳನ್ನೆಲ್ಲಾ ಯಾಂತ್ರೀಕರಣಗೊಳಿಸುವ ನಿಟ್ಟಿನಲ್ಲಿ ತಂತ್ರಜ್ಞಾನ ಬೆಳೆಯುತ್ತದೆ. ಸಾಮಾಜಿಕ ಒಳಿತು ನಮ್ಮ ಉದ್ದೇಶವಾಗಿದ್ದರೆ, ಕೆಲಸಗಾರರ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಅವರಿಗೆ ನೆರವಾಗುವ ನಿಟ್ಟಿನಲ್ಲಿ ಬೆಳೆಸಬಹುದು.

ಪೋಪ್ ಹೇಳುವಂತೆ, ಹೊಸ ತಂತ್ರಜ್ಞಾನ ಬಂದಾಗಲೆಲ್ಲ ಶ್ರೀಮಂತರು ಹೆಚ್ಚು ಶ್ರೀಮಂತರಾಗಿದ್ದಾರೆ, ಕಷ್ಟಗಳು ಮಾತ್ರ ಸಾಮಾನ್ಯರ ಹೆಗಲ ಮೇಲೆ ಬಿದ್ದಿವೆ. ಕೈಗಾರಿಕಾ ಕ್ರಾಂತಿಯ ಸಮಯದಲ್ಲೂ ಹೀಗೆಯೇ ಆಗಿತ್ತು. ಕಳೆದ ನಲವತ್ತು ವರ್ಷಗಳ ಡಿಜಿಟಲ್ ಯಾಂತ್ರೀಕರಣದಿಂದ ಆಗಿರುವುದೂ ಇದೇ. ಬಹುತೇಕ ಸಂಪತ್ತು ಸಮಾಜದ ಮೇಲ್‌ಸ್ತರದವರ ಕೈ ಸೇರಿದೆ. ಮಧ್ಯಮ ಕೌಶಲದ ಉದ್ಯೋಗಗಳು ನಾಶವಾಗಿವೆ. ಕೆಲವೇ ಶ್ರೀಮಂತರು ಲಾಭಕ್ಕಾಗಿಯೇ ಉದ್ಯಮವನ್ನು ನಡೆಸುತ್ತಿರುವಾಗ ಯಾಂತ್ರೀಕರಣದ ಪ್ರಮಾಣ ಹಿಗ್ಗಿದರೆ, ಸಾಮಾನ್ಯರ ಸ್ಥಿತಿಯಲ್ಲಿ ಸುಧಾರಣೆಯನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ.

ಮನುಷ್ಯ ಮಾಡಬಹುದಾದ ಕೆಲಸಗಳನ್ನೆಲ್ಲ ಮಾಡಬಲ್ಲ ಒಂದು ಸಾರ್ವತ್ರಿಕ ಕೃತಕ ಬುದ್ಧಿಮತ್ತೆಯನ್ನು ರೂಪಿಸುವುದೇ ಉದ್ಯಮದ ಪರಮೋಚ್ಚ ಗುರಿಯಾಗಿದೆ. ಆದರೆ, ಅಸಿಮೊಗ್ಲು ಅವರಂತಹ ಅರ್ಥಶಾಸ್ತ್ರಜ್ಞರು ಒತ್ತಾಯಿಸುತ್ತಿರುವಂತೆ, ಮನುಷ್ಯರಿಂದ ಮಾಡಲಾಗದ್ದನ್ನು ಮಾಡಲು ಎಐ ಅನ್ನು ಬಳಸಿಕೊಳ್ಳಬೇಕು. ಆಗ ಮನುಷ್ಯರಿಗೆ ತಮ್ಮ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮಾನವನ ಸಾಮರ್ಥ್ಯವನ್ನು ನಕಲು ಮಾಡುವ ಬದಲು ಸಾಮರ್ಥ್ಯವನ್ನು ಹೆಚ್ಚಿಸುವ ವಾತಾವರಣವನ್ನು ನಿರ್ಮಿಸಬೇಕು. ಆಗ ದಾದಿಯರು ರೋಗಲಕ್ಷಣಗಳನ್ನು ವಿಶ್ಲೇಷಿಸಲು ಎಐ ಸಹಾಯ ಕೇಳಬಹುದು ಮತ್ತು ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಅಗತ್ಯಕ್ಕೆ ತಕ್ಕಂತೆ ಬೋಧನೆಯನ್ನು ರೂಪಿಸಲು ಎಐ ಅನ್ನು ಬಳಸಿಕೊಳ್ಳಬಹುದು.

ಕೃತಕ ಬುದ್ಧಿಮತ್ತೆಯಿಂದ ಮೊದಲು ಪೆಟ್ಟು ಬೀಳುವುದು ಉದ್ಯೋಗಗಳಿಗೆ. ಬರೀ ಕಾರ್ಖಾನೆಗಳ ಕಾರ್ಮಿಕರು ಅಥವಾ ಟ್ರಕ್ ಡ್ರೈವರ್‌ಗಳಿಗೆ ಮಾತ್ರವಲ್ಲ; ವಕೀಲರು, ವೈದ್ಯರು, ಶಿಕ್ಷಕರು, ಬರಹಗಾರರು, ಎಲ್ಲರಿಗೂ ಸಮಸ್ಯೆಯಾಗಬಹುದು. ಕೆಲಸ ಕಳೆದುಕೊಳ್ಳುವ, ಆಗಾಗ ವೃತ್ತಿಯನ್ನು ಬದಲಿಸುವ ಅನಿವಾರ್ಯತೆಯ ಆತಂಕಗಳು ನಿರಂತರವಾಗಿ ಕಾಡುತ್ತಿರುತ್ತವೆ. ಯಾಂತ್ರೀಕರಣದ ಸಮಸ್ಯೆಯನ್ನು ಬರೀ ಕೆಲಸದ ವೇಗ ಅಥವಾ ಲಾಭ–ನಷ್ಟದ ದೃಷ್ಟಿಯಿಂದಷ್ಟೇ ನೋಡಲಾಗುವುದಿಲ್ಲ.


ಬಡತನದಿಂದ ಹೊರಬರುವುದಕ್ಕೆ ಉದ್ಯೋಗ ಅನಿವಾರ್ಯ. ಜೊತೆಗೆ ಅದು ಮನುಷ್ಯನಿಗೆ ಸಮಾಜದಲ್ಲಿ ಗೌರವವನ್ನೂ, ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವನ್ನೂ ಒದಗಿಸುತ್ತದೆ. ಉದ್ಯೋಗ ಹೋದರೆ ಅವೂ ತಪ್ಪಿಹೋಗುತ್ತವೆ, ಪ್ರಜಾಸತ್ತೆ ದುರ್ಬಲವಾಗುತ್ತದೆ. ತಂತ್ರಜ್ಞಾನದಿಂದ ಹೊಸ ಬಗೆಯ ಕೆಲಸಗಳು ಸೃಷ್ಟಿಯಾಗುತ್ತವೆ ಎನ್ನುತ್ತಾರೆ. ಆದರೆ, ಕೆಲಸಗಳು ಹೋಗುವ ವೇಗ ಅಥವಾ ಪ್ರಮಾಣದಲ್ಲಿ ಹೊಸ ಕೆಲಸಗಳು ಸೃಷ್ಟಿಯಾಗುತ್ತಿಲ್ಲ.

ಪೋಪ್ ಅವರಿಗೆ ಮನುಷ್ಯನ ಗೌರವ ಪ್ರಮುಖ ಕಾಳಜಿಯಾಗಿದೆ. ಹೊಸ ತಂತ್ರಜ್ಞಾನದಿಂದ ದುಡಿಯುವ ಮನುಷ್ಯನ ಗೌರವಕ್ಕೆ ಧಕ್ಕೆಯಾಗಬಾರದು. ಸಮಾಜದಲ್ಲಿ ದೊಡ್ಡ ಉದ್ಯಮಪತಿಗಳಷ್ಟೇ ಸಾಮಾನ್ಯ ಮನುಷ್ಯನೂ ಮುಖ್ಯ. ಪ್ರತಿಯೊಬ್ಬರಿಗೂ ಗೌರವದಿಂದ ಬದುಕುವ ಹಕ್ಕಿದೆ. ನಾವು ಮನುಷ್ಯರನ್ನು ನಿರ್ಲಕ್ಷಿಸಿ ಯಂತ್ರಗಳಿಗೇ ಪ್ರಾಮುಖ್ಯತೆ ಕೊಡುವ ದಿಕ್ಕಿನಲ್ಲಿ ಎಐ ಅನ್ನು ಬೆಳೆಸಿದರೆ, ಅದು ಇಡೀ ಸಮಾಜವನ್ನು ವಿನಾಶದ ಕಡೆಗೆ ತಳ್ಳುತ್ತದೆ ಎಂದು ಪೋಪ್ ಎಚ್ಚರಿಸುತ್ತಾರೆ.

ಎಐ ಹಿಡಿದಿರುವ ದಾರಿಯ ನೈತಿಕತೆ ಬಗ್ಗೆಯೂ ಪೋಪ್ ಪ್ರಶ್ನಿಸುತ್ತಾರೆ. ಇತ್ತೀಚಿನ ದಿನಗಳವರೆಗೂ ವಿರೋಧಿಗಳ ಮೇಲೆ ಬೇಹುಗಾರಿಕೆ ನಡೆಸುವುದಕ್ಕೆ, ಶತ್ರುಗಳನ್ನು ಗುರ್ತಿಸಿ ಕೊಲ್ಲುವುದಕ್ಕೆ ಎಐ ಬಳಸುವುದನ್ನು ಅನೈತಿಕವೆಂದು ಭಾವಿಸಲಾಗಿತ್ತು. ಈಗ ಇವೆಲ್ಲಾ ಮಾಮೂಲಾಗಿಬಿಟ್ಟಿವೆ. ಕೃತಕ ಬುದ್ಧಿಮತ್ತೆಯ ನೆರವಿನಿಂದ ತಮ್ಮ ಮಿಲಿಟರಿ ಶಕ್ತಿಯನ್ನು ಬಲಪಡಿಸಿಕೊಳ್ಳಬೇಕೆಂದು ದೇಶಗಳು ಯೋಚಿಸುತ್ತಿವೆ. ಸಶಸ್ತ್ರ ಸ್ಪರ್ಧೆಯ ಮನಃಸ್ಥಿತಿ ಬರೀ ಮಿಲಿಟರಿ ಕ್ಷೇತ್ರಕ್ಕೆ ಸೀಮಿತವಾಗಿಲ್ಲ; ಆರ್ಥಿಕ ಹಾಗೂ ಬೌದ್ಧಿಕ ಮಟ್ಟದಲ್ಲೂ ವ್ಯಾಪಿಸಿಕೊಂಡಿದೆ. ಈ ಮನಃಸ್ಥಿತಿಯಿಂದ ಜಗತ್ತು ಹೊರಬರಬೇಕು. ಅದಕ್ಕಾಗಿ ಕೃತಕ ಬುದ್ಧಿಮತ್ತೆಯ ನಿಶ್ಶಸ್ತ್ರೀಕರಣ ಆಗಬೇಕೆಂದು ಪೋಪ್ ಒತ್ತಾಯಿಸಿದ್ದಾರೆ.

ಪೋಪ್ ಕೃತಕ ಬುದ್ಧಿಮತ್ತೆ ಬೇಡ ಎಂದು ಹೇಳುತ್ತಿಲ್ಲ. ಅದು ಜನರ, ಸಮಾಜದ ಒಳಿತಿಗೆ ಬಳಕೆಯಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರಗಳು ಕಠಿಣ ನಿಯಮಗಳನ್ನು ರೂಪಿಸಬೇಕು. ದೊಡ್ಡ ಕಂಪನಿಗಳು ಮನುಷ್ಯನಿಗೆ ಪೂರಕವಾದ ತಂತ್ರಜ್ಞಾನ ಬೆಳೆಸಲು ಮುಂದೆ ಬಾರದೇ ಹೋದಾಗ ಸರ್ಕಾರವೇ ಅಂತಹ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಬೇಕು, ದೊಡ್ಡ ಕಂಪನಿಗಳ ಏಕಸ್ವಾಮ್ಯವನ್ನು ನಿಯಂತ್ರಿಸಬೇಕು ಇತ್ಯಾದಿ ಮಹತ್ವದ ಸಲಹೆಗಳನ್ನು ನೀಡಿದ್ದಾರೆ.

ಕೃತಕ ಬುದ್ಧಿಮತ್ತೆ ಒಟ್ಟಾರೆಯಾಗಿ ಜಗತ್ತಿನ ಒಳಿತಿಗೆ ಪೂರಕವಾದ ದಾರಿಯಲ್ಲಿ ಸಾಗುವಂತೆ ಒತ್ತಾಯಿಸಬೇಕಾಗಿದೆ. ಪೋಪ್ ಅವರ ಪತ್ರ ಅಂತಹ ಪ್ರಯತ್ನಕ್ಕೆ, ಒಂದು ಗಂಭೀರ ಚರ್ಚೆಗೆ ಚಾಲನೆ ನೀಡಬಹುದೆ?



ವಾಚಕರ ವಾಣಿ

ಭೂಸ್ವಾಧೀನ ಮತ್ತು 'ವಿಲಿಯಂ' ಕಾಯ್ದೆ

ಸರ್ಕಾರವು ಬಿಡದಿ ರೈತರಿಂದ ಬಲವಂತವಾಗಿ ಭೂಮಿ ಕಸಿಯಲು ಹರಸಾಹಸ ಪಡುತ್ತಿರುವ ಹೊತ್ತಿನಲ್ಲಿ ಅಮೆರಿಕದಲ್ಲಿರುವ ವಿಲಿಯಂ ಕಾಯ್ದೆ ಭಾರತದಲ್ಲಿಯೂ ಅಗತ್ಯ ಎನ್ನಿಸುತ್ತಿದೆ. ಈ ಕಾಯ್ದೆಯಡಿ ರೈತರು ಮತ್ತು ಸ್ಥಳೀಯ ಸರ್ಕಾರಿ ಸಂಸ್ಥೆಯು ಒಪ್ಪಂದಕ್ಕೆ ಸಹಿ ಹಾಕಬಹುದು. ಇದರನ್ವಯ ವ್ಯವಸಾಯಯೋಗ್ಯ ಭೂಮಿಯನ್ನು ಕೃಷಿಭೂಮಿಯನ್ನಾಗಿಯೇ ಉಳಿಸಿಕೊಳ್ಳಬೇಕು. ರೈತರು ತಮ್ಮ ಜಮೀನನ್ನು ಕಟ್ಟಡ ನಿರ್ಮಾಣ, ರಿಯಲ್ ಎಸ್ಟೇಟ್, ಕೈಗಾರಿಕೆ ಇನ್ನಿತರ ಬೇಸಾಯೇತರ ಉದ್ದೇಶಗಳಿಗೆ ಬಳಸದೆ ಬೇಸಾಯಕ್ಕಾಗಿಯೇ ಮೀಸಲಿಡಬೇಕು. ಈ ಒಪ್ಪಂದದ ಕಾಲಾವಧಿ 10 ವರ್ಷ. ಈ ಅವಧಿಯಲ್ಲಿ ಸರ್ಕಾರ ಕೂಡ ರೈತರಿಂದ ಈ ಭೂಮಿ ಪಡೆಯುವಂತಿಲ್ಲ. ಭಾರತ ಕೃಷಿಪ್ರಧಾನ ದೇಶ. ಆದರೆ, ನಮ್ಮ ನೆಲವನ್ನು ನಿಯಂತ್ರಿಸುವವರು ರಾಜಕಾರಣಿಗಳು ಹಾಗೂ ಬಂಡವಾಳಶಾಹಿಗಳು ಎನ್ನುವುದು ದುರದೃಷ್ಟಕರ.

ಕನಕಪುರ ನಾಗರಾಜ ಮಾದೇಗೌಡ, ಕ್ಯಾಲಿಫೋರ್ನಿಯಾ

'ತಾರ್ಕಿಕ ಲೋಪ' ಎನ್ನುವ ಪೆಡಂಭೂತ

ಕರ್ನಾಟಕದಲ್ಲಿ ಮತದಾರರಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ನಡಾವಳಿಗಳು ಶೀಘ್ರವೇ ಆರಂಭವಾಗಲಿವೆ. ತೆಲಂಗಾಣ, ಒಡಿಶಾದಲ್ಲಿ ಈ ನಡಾವಳಿ ಆರಂಭವಾಗಿದೆ. ಈ ರಾಜ್ಯಗಳಲ್ಲಿ ಹತ್ತು ಬಗೆಯ ತಾರ್ಕಿಕ ಲೋಪಗಳನ್ನು ಗುರ್ತಿಸಿಕೊಂಡು ನಡಾವಳಿ ಆರಂಭಿಸಲಾಗಿದೆ. ತೆಲಂಗಾಣದಲ್ಲಿ ಎಸ್‌ಐಆರ್ ಪೂರ್ವ ಮತದಾರರ ಮ್ಯಾಪಿಂಗ್ ಶೇ 68ರಷ್ಟು ಮುಗಿದಿದೆ. ಅಷ್ಟರಲ್ಲೇ ಅಂದಾಜು 88 ಲಕ್ಷ ಮತದಾರರ ದಾಖಲೆಗಳಲ್ಲಿ 'ತಾರ್ಕಿಕ ಲೋಪಗಳು' ಇರುವುದಾಗಿ ಅಲ್ಲಿನ ಚುನಾವಣಾ ಆಯುಕ್ತರು ಹೇಳಿದ್ದಾರೆ. ಆದರೆ, ಕರ್ನಾಟಕದ ಚುನಾವಣಾ ಆಯುಕ್ತರು ಎಸ್‌ಐಆರ್ ಪೂರ್ವ ಮ್ಯಾಪಿಂಗ್ ಮಾಹಿತಿಯನ್ನು, ಯಾವ ನಮೂನೆಯ ತಾರ್ಕಿಕ ಲೋಪಗಳನ್ನು ಅನುಸರಿಸಲಾಗುತ್ತದೆ ಎಂಬುದನ್ನು ಸಾರ್ವಜನಿಕಗೊಳಿಸುತ್ತಿಲ್ಲ. ಈ ನಡುವೆಯೇ ಸಂಘಪರಿವಾರದ ಸಂಘಟನೆಗಳು ಮೈಸೂರಿನ ರೈಲು ನಿಲ್ದಾಣದಲ್ಲಿ ಬಂಗಾಳಿ ಕಾರ್ಮಿಕರನ್ನು 'ಅಕ್ರಮ ವಲಸಿಗ'ರೆಂದು ಕಾನೂನುಬಾಹಿರವಾಗಿ ತನಿಖೆಗೆ ಮುಂದಾಗಿರುವುದು ಆತಂಕಕಾರಿ. ಈ ಪುಂಡಾಟಕ್ಕೂ ಎಸ್‌ಐಆರ್‌ಗೂ ಸಂಬಂಧವಿದೆ. ಇಂತಹ ಆಕ್ರಮಣಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕು.

ಕೆ. ಫಣಿರಾಜ್, ಉಡುಪಿ

ಮೋದಿ ಹೊಗಳಿಕೆ: ಪ್ರಗತಿ ಸಾಧ್ಯವೆ?

'ಮೋದಿ: 12 ವರ್ಷಗಳ ಪರ್ವಕಾಲ' ಲೇಖನವು (ಲೇ: ಎ. ಸೂರ್ಯ ಪ್ರಕಾಶ್, ಪ್ರ.ವಾ., ಜೂನ್ 22) ಪ್ರಧಾನಿ ಮೋದಿಯವರ ಹೊಗಳಿಕೆಗೆ ಮೀಸಲಾಗಿದೆ. ಮೋದಿಯವರು ದೀರ್ಘಕಾಲ ಅಧಿಕಾರದಲ್ಲಿದ್ದರೂ ರೈತರ ಆತ್ಮಹತ್ಯೆ ನಿಲ್ಲಲಿಲ್ಲ. ಯುವಜನರ ನಿರುದ್ಯೋಗ ಸಮಸ್ಯೆಯು ಬಗೆಹರಿದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಮಾತೃಭಾಷೆ ಶಿಕ್ಷಣವೆಂಬುದು ದಿನದಿಂದ ದಿನಕ್ಕೆ ಜಟಿಲ ಆಗುತ್ತಿದೆ. ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಿಗೆ ಹೋಗುತ್ತಿರುವ ಮಕ್ಕಳು ಪಾಟಿಚೀಲದ ಭಾರದಿಂದ ನಲುಗುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಯಿಂದ ಯುವಜನರಿಗೆ ಕನ್ಯೆಯರು ಸಿಗದೆ ಹತಾಶೆ ಕಾಡುತ್ತಿದೆ. ಪರಿಸರದ ತಲ್ಲಣಗಳನ್ನು ಕೇಳುವವರೇ ಇಲ್ಲದಂತಾಗಿದೆ. ಇಂಥ ಜ್ವಲಂತ ಸಮಸ್ಯೆ ಮರೆಮಾಚಿ ಮೋದಿಯವರನ್ನು ಹೊಗಳುವುದರಿಂದ ದೇಶದ ಪ್ರಗತಿ ಸಾಧ್ಯವೆ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ನೀಟ್ ತಪ್ಪಿದವರಿಗೆ ಮತ್ತೆ ಅವಕಾಶ ನೀಡಿ

ಸಂಚಾರ ದಟ್ಟಣೆ, ಕೆಟ್ಟು ನಿಂತ ರೈಲು, ಬಾರದ ಬಸ್ ಇತ್ಯಾದಿಗಳಿಂದ ಕೆಲವು ವಿದ್ಯಾರ್ಥಿಗಳು 'ನೀಟ್' ಪರೀಕ್ಷೆ ತಪ್ಪಿಸಿಕೊಂಡಿದ್ದಾರೆ. ಹೆಚ್ಚಿನವರು ನಾಲ್ಕೈದು ನಿಮಿಷ ತಡವಾಗಿ ಪರೀಕ್ಷಾ ಕೇಂದ್ರಗಳಿಗೆ ಬಂದಿದ್ದಾರಷ್ಟೆ. ಇವೆಲ್ಲವೂ ಮನ್ನಿಸಬಹುದಾದ ವಿಚಾರಗಳು. ಏಕೆಂದರೆ, ಇವೆಲ್ಲವೂ ವಿದ್ಯಾರ್ಥಿಗಳ ಕೈಮೀರಿದ ಕಾರಣಗಳೇ. ಆದ್ದರಿಂದ ಇಂತಹ ವಿದ್ಯಾರ್ಥಿಗಳಿಗೆ ಸಹಾನುಭೂತಿಯ ನೆಲೆಯಲ್ಲಿ ಮತ್ತೆ ನೀಟ್ ಬರೆಯಲು ಅವಕಾಶ ಮಾಡಿಕೊಡಬೇಕು. ವ್ಯವಸ್ಥೆಯು ಶಿಸ್ತಿನ ಹೆಸರಿನಲ್ಲಿ ಬರೀ ಸಮಯಪಾಲನೆಯಂತಹ ತಾಂತ್ರಿಕ ಅಂಶಗಳಿಗೆ ಜೋತು ಬೀಳುವುದರಲ್ಲಿ ಅರ್ಥವಿಲ್ಲ. ಅಕ್ರಮಗಳನ್ನು ತಡೆಗಟ್ಟಬೇಕು ನಿಜ; ಆದರೆ, ಆ ನೆವದಲ್ಲಿ ಹೃದಯಹೀನತೆಯ ಕಡೆಗೆ ಹೋಗಬಾರದಲ್ಲವೆ?

ಬಿ.ಎಸ್. ಜಯಪ್ರಕಾಶ ನಾರಾಯಣ, ಅಗ್ರಹಾರ ಬೆಳಗುಲಿ

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕೆ ಗ್ರಹಣ

ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯು ತೀವ್ರವಾಗಿದೆ. ಇದು ಮಕ್ಕಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಹಲವು ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದು, ಅವರು ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಪಾಠ ಮಾಡಬೇಕಿದೆ. ಪ್ರಸ್ತುತ ರಾಜ್ಯದಲ್ಲಿ 85 ಸಾವಿರಕ್ಕೂ ಹೆಚ್ಚು ಶಿಕ್ಷಕರ ಕೊರತೆಯಿದೆ. ಈ ಪೈಕಿ 40 ಸಾವಿರಕ್ಕೂ ಹೆಚ್ಚು ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಕೊರತೆ ಇದೆ. ಶಿಕ್ಷಕರ ನೇಮಕಾತಿಗೆ ಒತ್ತು ನೀಡಿದರಷ್ಟೇ ಕನ್ನಡ ಮಾಧ್ಯಮ ಶಾಲೆಗಳ ಉಳಿವು ಸಾಧ್ಯ.

ಮುತ್ತು ಕುಂಟೋಜಿ, ದೇವರಹಿಪ್ಪರಗಿ

ಗ್ಯಾರಂಟಿ ಪರಾಮರ್ಶೆ: ಅರ್ಹರಿಗೆ ಬರೆ ಬೇಡ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪಂಚ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿತು. ಬಹುತೇಕ ಬಡ ಕುಟುಂಬಗಳ ಪಾಲಿಗೆ ಗ್ಯಾರಂಟಿಗಳು ವರದಾನವಾಗಿವೆ. ಪ್ರಸ್ತುತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗ್ಯಾರಂಟಿಗಳ ಪರಾಮರ್ಶೆಗೆ ಮುಂದಾಗಿದ್ದಾರೆ. ಇದು ಔಚಿತ್ಯಪೂರ್ಣ ನಡೆಯಾದರೂ ಪರಾಮರ್ಶೆಯ ನೆಪದಲ್ಲಿ ಬಡವರಿಗೆ ತೊಂದರೆಯಾಗಬಾರದು. ಮತ್ತೆ ಅರ್ಜಿ ಸಲ್ಲಿಸಬೇಕೆಂದು ಹೇಳುವುದು ಬಡವರ ಮೇಲೆ ಆರ್ಥಿಕ ಹೊರೆ ಹೇರಿದಂತೆ ಆಗುತ್ತದೆ. 'ಶಕ್ತಿ' ಯೋಜನೆಯು ಶ್ರೀಮಂತರಿಗೂ ಉಪಯೋಗ ಆಗಿದ್ದರೂ ಬಡವರಿಗೆ, ಅಸಹಾಯಕರಿಗೆ ಊರುಗೋಲಾಗಿದೆ. ಪರಿಷ್ಕರಣೆ ನೆಪದಲ್ಲಿ ಮಹತ್ವದ ಯೋಜನೆಗಳನ್ನು ಅರ್ಹರಿಂದ ಕಸಿದುಕೊಳ್ಳಬಾರದು.

ಮಹಾಂತೇಶ ರಾಜಗೋಳಿ, ಬೈಲಹೊಂಗಲ

ಚುರುಮುರಿ



ಅನಾತ್ಮ ಕಥನ

• ಡಿ.ಎಸ್. ಲಿಂಗರಾಜು

'ಮೊನ್ನೆ ಪರಿಷತ್ ಚುನಾವಣೇಲಿ ಆದ ಅಡ್ಡಡ್ಡ ಅನಾತ್ಮಸಾಕ್ಷಿ ಮತದಾನ ಕಂಡು ದೋಸ್ತಿಗಳು ಬೆಚ್ಚಿ ಬಿದ್ದು ಜ್ವರ ಬಂದದಂತೆ' ಅಂತ ಒಳವಿಚಾರ ಹೇಳಿದೆ.

'ಆತ್ಮ ಮಾರಿಕ್ಯಂದ ರಾಜಕಾರಣಿಗಳು ಇಕ್ಕಳ ಹಾಕಿಸಿಕ್ಯಂದೋರಂಗೆ ದಡಗುಟ್ಟಿಕ್ಯಬಂದು ಅಡ್ಡಮತದಾನ ಮಾಡಿ ಕಡೆದು ಹೊಂಟೋದ್ರಂತೆ' ತುರೇಮಣೆ ಕಂಡೋರಂಗೆ ವಿವರಿಸಿದರು.

'ಯಾರು ಅಡ್ಡಾದಿಡ್ಡಿ ಮತದಾನ ಮಾಡಿ ಆತ್ಮಸಾಕ್ಷಿ ಮಾರಿಕ್ಯಂದವ್ರೆ ಅಂತ ತಿಳಕಣಕೆ ಸತ್ಯಶೋಧನಾ ಸಮಿತಿ ಮಾಡ್ಯವ್ರಂತೆ. ದೇವರ ಮುಂದೆ ಪ್ರಮಾಣ ಮಾಡಕ್ಕೆ ಕರಕೋತರಂತೆ. ದೇವರನೂ ಬಾಳಗೆಡಸಕ್ಕೆ ಹೋತಾವ್ರಲ್ಲಪ್ಪ' ನನಗೆ ಬೇಸರವಾತು.

'ಸಮಿತಿ ಸದಸ್ಯರಲ್ಲಿ ಒಬ್ಬರು ಕೊಳ್ಳೇಗಾಲದೋರು ಅದಾರಂತೆ? ಅವರೇನಾರ ಅಂಜನ ಹಾಕಿ ನೋಡಿದ್ರೆ ಅಡ್ನಾಡಿಗಳು ಯಾರು ಅಂತ ತಿಳೀಬೈದಾ?' ತಿಪ್ಪಣ್ಣ ಮಾಯಾಜಾಲ ಬೀಸಿದ.

'ಅಲ್ಲ ಕನಿರ್ಲಾ, ರಾಜಕೀಯಕ್ಕೆ ಬರೋ ಮುಂಚತಿಗೇ ಆತ್ಮವ ಅಡ ಇಟ್ಟು ಬಂದೋರಿಗೆ ಯಾವ ಪ್ರಮಾಣದಲ್ಲಿ ಸತ್ಯಶೋಧನೆ ಮಾಡ್ತರೆ ಕಾಣ್ನಲ್ಲ' ಯಂಟಪ್ಪಣ್ಣ ಬೆರಗಾಯಿತು.

'ಇದ್ದ ಮತವ ಮಾರದಿದ್ದೋನು ಶೂರನೂ ಅಲ್ಲ ಧೀರನೂ ಅಲ್ಲ ಅಂತ ರಾಜಕಾರಣಿಗಳಿಗೆ ಗೊತ್ತದೆ. ಅವರವರ ಯೇಗ್ತೆಗೆ ತಕ್ಕಂಗೆ ಆತ್ಮವ ಮಾರಿಕ್ಯಂದವ್ರೆ ಕನ್ರೋ. ಶಾಲು ಮುಗುಟ ಎರಡಿದ್ರೆ ಸಾಕು ಇವರಿಗೆ' ಅಂತ ಹೇಳಿದೆ.

'ಹಂಗಾದ್ರೆ ಏನು ಮಾಡಬಕು ಅಂತೀಯೆ?' ಎಲ್ಲರೂ ಕೇಳಿದ್ರು.

'ರಾಜಕೀಯಕ್ಕೆ ಬರೋರು ಸಂಸಾರ ತೊರೆದು ದೀಕ್ಷೆ ತಗಬಕು. ಆಮೇಲೆ ಹಿಮಾಲಯದಾಗೆ ಒಂದೋರ್ಸ ಹಿಮದಲ್ಲಿ ಕೂಕಂದು ಆತ್ಮಾನುಸಂಧಾನದ ಕಠಿಣ ಸಾಧನೆ ಮಾಡಿದ ಮ್ಯಾಲೆ ರಾಜಕೀಯಕ್ಕೆ ಎಂಟ್ರಿಯಾಗಬಕು'.

ನನ್ನ ವಿಚಾರ ಯಾರಿಗೂ ರುಚಿಸಲಿಲ್ಲ.

'ಆಗೋ ಹೋಗೋ ಮಾತೆಲ್ಲಾ ಅಂದ್ರೆ ಅನಾತ್ಮ ಕಥನ ಸುರು ಮಾಡಿದನಲ್ಲ ಇವನು. ಸತ್ಯ, ನ್ಯಾಯ, ನೀತಿಗಳು ತಂತ್ರ, ಮಂತ್ರದ ಮುಂದೆ ತಲೆ ಬಗ್ಗಿಸಿ ಕೂತವೆ ಕನೋ' ಅಂತ ಮೂತಿಗೆ ತಿವಿದು ಎದ್ದೋದ್ರು.

ಸಂಗತ

ರಾಜಕಾರಣದಲ್ಲಿ ಆಣೆ ಪ್ರಮಾಣ ಸರಿಯೆ?

ಶಾಸಕರ ಪ್ರಾಮಾಣಿಕತೆಯನ್ನು ಆಣೆ ಪ್ರಮಾಣದ ಮೂಲಕ ಪರೀಕ್ಷಿಸಬಹುದೆ? ಪ್ರತ್ಯಕ್ಷ ದೈವಗಳಾದ ಪ್ರಜೆಗಳಿಗೆ ಅಳುಕದವರು ಕಾಣದ ದೈವಕ್ಕೆ ಅಂಜುವರೆ?


• ಈ. ಬಸವರಾಜು

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲವು ಶಾಸಕರು ಅಡ್ಡ ಮತದಾನ ಮಾಡಿರುವುದರ ಹಿನ್ನೆಲೆಯಲ್ಲಿ, ಪಕ್ಷದ್ರೋಹ ಮಾಡಿದ ಶಾಸಕರನ್ನು ಪತ್ತೆಹಚ್ಚಲು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯನ್ನು ಧರ್ಮಸ್ಥಳದಲ್ಲಿ ಕರೆಯುವ ಮಾತನ್ನು ಆ ಪಕ್ಷದ ಅಧ್ಯಕ್ಷರು ಆಡಿದ್ದಾರೆ. ಆ ಮಾತಿಗೆ ಅವರ ಪಕ್ಷದ ಕೆಲವು ಮುಖಂಡರೇ ಅಪಸ್ವರ ವ್ಯಕ್ತಪಡಿಸಿದ್ದಾರೆ. ಇದೇ ರೀತಿಯಲ್ಲಿ ಅಡ್ಡ ಮತದಾನದ ಸಮಸ್ಯೆ ಎದುರಿಸುತ್ತಿರುವ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಅವರು, ಆಣೆ ಪ್ರಮಾಣದಿಂದ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ ಎಂದಿದ್ದಾರೆ.

ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲದ ಸಂದರ್ಭದಲ್ಲಿ ಹುಟ್ಟಿಕೊಂಡ ಆಣೆ ಪ್ರಮಾಣದ ಪರಂಪರೆ ಈಗ ಸಾಕಷ್ಟು ಕ್ಷೀಣಿಸುತ್ತಿದೆ. ಒಬ್ಬರ ಬಳಿ ಹಣ ಪಡೆದರೆ ಅಥವಾ ಒಬ್ಬರಿಗೆ ಏನಾದರೂ ಮಾತು ಕೊಟ್ಟರೆ ಅದನ್ನು ದೇವರ ಮುಂದೆ, ಒಂದು ಮರವನ್ನು ಉದ್ದೇಶಿಸಿಯೋ, ಸೂರ್ಯ–ಚಂದ್ರರನ್ನು ತೋರಿಸಿಯೋ ಆಣೆ ಮಾಡುತ್ತಿದ್ದರು. ಅದಕ್ಕೆ ತಕ್ಕಹಾಗೆ ಬಹುಪಾಲು ಜನರು ನಡೆದುಕೊಳ್ಳುತ್ತಿದ್ದರು. ಕೆಲವರಷ್ಟೇ ಮಾತು ಮೀರಿ ನಡೆದುಕೊಳ್ಳುತ್ತಿದ್ದರು.

ಹಿಂದಿನ ದಿನಗಳಲ್ಲಿ ನಮ್ಮ ಹಳ್ಳಿಗಳಲ್ಲಿ ಯಾವುದಾದರೂ ಒಂದು ವಸ್ತು ಕಳೆದುಹೋದರೆ, ತೆಂಗಿನಕಾಯಿಯೊಂದಕ್ಕೆ ಕುಂಕುಮ ಬಳಿದು ಊರಿನ ಎಲ್ಲರ ಮನೆಗಳಿಗೆ ಹೋಗಿ, 'ನಮ್ಮ ವಸ್ತು ಕಳೆದಿದೆ, ಕಾಯಿ ಮುಟ್ಟಿ' ಎಂದು ಹೇಳುತ್ತಿದ್ದರು. ಎಲ್ಲರೂ ಮುಟ್ಟಿದ ನಂತರ ಆ ಕಾಯಿಯನ್ನು ಧರ್ಮಸ್ಥಳಕ್ಕೆ ಕಳಿಸುತ್ತಿದ್ದರು. ಹಾಗೆ ಮಾಡುವುದರಿಂದ ಸುಳ್ಳು ಹೇಳಿದವರಿಗೆ ಶಿಕ್ಷೆಯಾಗುತ್ತದೆ ಎಂಬ ನಂಬಿಕೆ ಇತ್ತು. ಕಾಯಿ ಮುಟ್ಟುವವರು 'ಅದನ್ನು ತೆಗೆದುಕೊಂಡವರ ಮನೆ ಹಾಳಾಗಿ ಹೋಗಲಿ' ಎಂದು ಹೇಳಬೇಕಿತ್ತು. ಕೆಲವರು ಭಯದಿಂದ ಕಾಯಿ ಮುಟ್ಟಲು ಹೆದರುತ್ತಿದ್ದರು. ಆ ವಸ್ತುವನ್ನು ತೆಗೆದುಕೊಂಡಿದ್ದ ಕೆಲವರು ಮತ್ತೆ ಅದನ್ನು ಯಥಾಸ್ಥಳದಲ್ಲಿ ಇಟ್ಟುಬಿಡುತ್ತಿದ್ದರು. ಇದು ಆಗಿನ ಸಂದರ್ಭ. ಈಗ ಅದು ಚಾಲ್ತಿಯಲ್ಲಿಲ್ಲ. ಈ ದಿನಗಳಲ್ಲಿ ಎಲ್ಲವೂ ಲಿಖಿತ ದಾಖಲೆಗಳ ಮೂಲಕ ನಡೆಯುತ್ತದೆ. ಯಾವುದೇ ಒಪ್ಪಂದವನ್ನು ಲಿಖಿತ ರೂಪದಲ್ಲಿ ಮಾಡಿಕೊಂಡು, ಅದನ್ನು ಕಾನೂನಿನ ವ್ಯಾಪ್ತಿಗೆ ಒಳಪಡಿಸಿ, ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಜಾಣತನ.

ಬಿಜೆಪಿ ಅಧ್ಯಕ್ಷರು ಶಾಸಕಾಂಗ ಪಕ್ಷದ ಸಭೆಯನ್ನು ಧರ್ಮಸ್ಥಳದಲ್ಲಿ ಕರೆಯಲು ಉದ್ದೇಶಿಸಿರುವುದು ಅನೇಕ ಸಾಧ್ಯತೆಗಳನ್ನು ಧ್ವನಿಸುತ್ತಿದೆ. ಬಿಜೆಪಿ ಶಿಸ್ತುಬದ್ಧ ಪಕ್ಷ ಎಂದು ಹೇಳಿಕೊಳ್ಳುತ್ತದಷ್ಟೇ. ಆ ಶಿಸ್ತು ಈಗ ಕ್ಷೀಣಿಸಿರುವುದು ಹಾಗೂ ಪಕ್ಷದ ಅಧ್ಯಕ್ಷರಿಗೆ ಶಾಸಕರ ಮೇಲೆ ಹಿಡಿತವಿಲ್ಲದಿರುವುದು ಅಥವಾ ಶಾಸಕರು ಪಕ್ಷದ ಆದೇಶವನ್ನು ಧಿಕ್ಕರಿಸಿರುವುದನ್ನು ಅಡ್ಡ ಮತದಾನದ ಘಟನೆ ಸೂಚಿಸುತ್ತಿರುವಂತಿದೆ. ಕೈಮೀರಿದ ಬೆಳವಣಿಗೆಯನ್ನು ನಿಯಂತ್ರಿಸಲು ಪಕ್ಷದ ಅಧ್ಯಕ್ಷರು ದೈವದ ಮೊರೆ ಹೋಗುವ ಪ್ರಯತ್ನ ಮಾಡುತ್ತಿರುವಂತಿದೆ. ಅಲ್ಲಿಯೂ ಯಶಸ್ವಿಯಾಗದಿದ್ದರೆ ಎಲ್ಲಿಗೆ ಹೋಗಬಹುದು? ಒಬ್ಬ ಶಾಸಕನನ್ನು ದೇವರ ಮುಂದೆ ಆಣೆ ಮಾಡಿಸಿ ಆತನ ಪ್ರಾಮಾಣಿಕತೆಯನ್ನು ಪರೀಕ್ಷಿಸುವುದು ಎಷ್ಟು ಸರಿ?



ಆಣೆ ಪ್ರಮಾಣ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಿಗೆ ಮಾತ್ರ ಸೀಮಿತ ಆಗಿಲ್ಲ. ಚುನಾವಣೆಯ ಸಂದರ್ಭದಲ್ಲಿ ಮುಗ್ಧ ಜನರಿಗೆ ವೀಳ್ಯದೆಲೆ ಮತ್ತು ಅಡಿಕೆಯ ಮೇಲೆ ಹಣವನ್ನಿಟ್ಟು ಮತ ಹಾಕುವಂತೆ ಪ್ರಮಾಣ ಮಾಡಿಸಿಕೊಂಡಿರುವವರ ಉದಾಹರಣೆಗಳೂ ಇವೆ. ಕ್ರಿಯಾಶೀಲತೆ, ಜನಪರ ಕೆಲಸಗಳ ಮೂಲಕ ಮತದಾರರ ವಿಶ್ವಾಸ ಗಳಿಸುವ ಬದಲು, ಮತದಾರರನ್ನು ಭಾವನಾತ್ಮಕವಾಗಿ ಹೆದರಿಸಿ ಮತ ಹಾಕಿಸಿಕೊಳ್ಳುವ ಕೆಲಸವನ್ನು ಮಾಡಲಾಗುತ್ತದೆ. ಈಗ ಅದೇ ಶಾಸಕರು ಅಗ್ನಿಪರೀಕ್ಷೆ ಎದುರಿಸಬೇಕಾಗಿದೆ!

ರಾಜಕಾರಣದಲ್ಲಿ ಆಣೆ ಪ್ರಮಾಣ ಹೊಸದೇನಲ್ಲ. ಹಿಂದೆ ಕುಮಾರಸ್ವಾಮಿ ಅವರು ಯಡಿಯೂರಪ್ಪನವರಿಗೆ 'ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಿ' ಎಂದು ಪಂಥಾಹ್ವಾನ ನೀಡಿ, ತಾವು ಧರ್ಮಸ್ಥಳಕ್ಕೆ ಹೊರಟೇಬಿಟ್ಟಿದ್ದರು. ಆಗ ಧರ್ಮಸ್ಥಳಕ್ಕೆ ಹೋಗಿದ್ದ ಅವರು ಈಗ, ಆಣೆ ಪ್ರಮಾಣದಿಂದ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಹೇಳಿದ್ದಾರೆ. ಅಂದರೆ, ಆಣೆ ಪ್ರಮಾಣದ ನಿರರ್ಥಕತೆ ಅವರಿಗೆ ಅರ್ಥವಾಗಿದೆಯೆ?

ಆಣೆ ಪ್ರಮಾಣಗಳಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವ ಹಾಗಿದ್ದರೆ ಪೊಲೀಸ್ ಠಾಣೆಗಳು, ನ್ಯಾಯಾಲಯಗಳು ಹಾಗೂ ತನಿಖಾ ಸಂಸ್ಥೆಗಳಿಗೆ ಕೆಲಸವೇ ಇರುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಪೊಲೀಸ್ ಠಾಣೆಗಳು ಹೆಚ್ಚುತ್ತಿವೆ, ಅಲ್ಲಿನ ಪ್ರಕರಣಗಳೂ ಹೆಚ್ಚುತ್ತಿವೆ ಮತ್ತು ನ್ಯಾಯಾಲಯಗಳ ದಾವೆಗಳೂ ಹೆಚ್ಚುತ್ತಿವೆ. ಒಂದಂತೂ ನಿಜ; ಮನುಷ್ಯ ದೇವರಿಗೆ, ನ್ಯಾಯಾಲಯಕ್ಕೆ ಪ್ರಾಮಾಣಿಕನಾಗುವ ಮೊದಲು ತನಗೆ ತಾನು ಪ್ರಾಮಾಣಿಕನಾಗಿರಬೇಕು, ತನ್ನನ್ನು ತಾನು ಪ್ರಶ್ನಿಸಿಕೊಂಡು ಆತ್ಮಾವಲೋಕನ ಮಾಡಿಕೊಳ್ಳುವ ಹಂತಕ್ಕೆ ಬೆಳೆಯಬೇಕು. ಆಗ ದೇವಸ್ಥಾನಗಳಲ್ಲಿ ಆಣೆ ಪ್ರಮಾಣ ಮಾಡುವ ಸಂದರ್ಭಗಳು ಇಲ್ಲವಾಗುತ್ತವೆ. ಎಲ್ಲವೂ ವಾಣಿಜ್ಯೀಕರಣಗೊಂಡಿರುವ ಈ ದಿನಗಳಲ್ಲಿ ಆಣೆ ಪ್ರಮಾಣಗಳು ಅರ್ಥ ಕಳೆದುಕೊಂಡಿವೆ. ಅವು ತೋರಿಕೆಯ ಅಥವಾ ಮಾನಸಿಕ ಒತ್ತಡದ ರೂಪದಲ್ಲಷ್ಟೇ ಉಳಿದಿವೆ.

ಅಡ್ಡ ಮತದಾನದಿಂದ ವಿಚಲಿತರಾಗಿರುವ ಬಿಜೆಪಿ ಅಧ್ಯಕ್ಷರು ಬೇರೆ ಪಕ್ಷದ ಶಾಸಕರನ್ನು ಹಾಗೂ ಲೋಕಸಭಾ ಸದಸ್ಯರನ್ನು ಹಣ, ಅಧಿಕಾರದ ಆಮಿಷ ಒಡ್ಡಿ ತಮ್ಮ ಪಕ್ಷಕ್ಕೆ ಸೆಳೆಯುವಾಗ ಆ ಪಕ್ಷದ ಮುಖ್ಯಸ್ಥರ ಸ್ಥಿತಿ ಹೇಗಿರಬಹುದು ಎಂಬುದನ್ನೂ ಯೋಚಿಸಬೇಕು. ಉತ್ತರ ಭಾರತದಲ್ಲಿ ತಮ್ಮ ಕೈಚಳಕದಿಂದ ಅನ್ಯ ಪಕ್ಷಗಳಿಗೆ ಕನ್ನ ಹಾಕಿ, ದಕ್ಷಿಣ ಭಾರತದಲ್ಲಿ ಅದೇ ಪ್ರಯೋಗಕ್ಕೆ ತಾವು ಬಲಿಯಾದಾಗ ಆಣೆ ಪ್ರಮಾಣದ ಮಾತನಾಡುವುದರಲ್ಲಿ ಅರ್ಥವಿಲ್ಲ ಎಂಬುದನ್ನು ಅರಿಯಬೇಕು. ಆಣೆ ಪ್ರಮಾಣಗಳ ಆಚೆಗಿನ ನೈಜ ಸಮಸ್ಯೆಗಳ ಬಗ್ಗೆ ವಾಸ್ತವದ ನೆಲೆಯಲ್ಲಿ ಚಿಂತಿಸಿ, ಪರಿಹಾರಗಳನ್ನು ಕಂಡುಕೊಳ್ಳುವ ಕಡೆಗೂ ಅವರು ಯೋಚಿಸಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ರಾಜಕೀಯ ಅಸ್ಥಿರತೆ ಸುಳಿಯಲ್ಲಿ ಬ್ರಿಟನ್

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸುವುದಾಗಿ ಘೋಷಿಸಿದ್ದಾರೆ. ದೇಶದಲ್ಲಿ ಭಾರಿ ಬದಲಾವಣೆಗಳನ್ನು ತರುವ ಆಶಯದೊಂದಿಗೆ 2024ರಲ್ಲಿ ಸ್ಟಾರ್ಮರ್ ಅಧಿಕಾರ ವಹಿಸಿಕೊಂಡಿದ್ದರು. ಆದರೆ, ಅದು ಕೈಗೂಡದೇ ಅವರು ಪದತ್ಯಾಗ ಮಾಡುವುದಾಗಿ ಘೋಷಿಸಿದ್ದಾರೆ. ಇದರಿಂದಾಗಿ ಬ್ರಿಟನ್ ಮತ್ತೆ ರಾಜಕೀಯ ಬಿಕ್ಕಟ್ಟು ಎದುರಿಸುವಂತಾಗಿದೆ. ಐರೋಪ್ಯ ಒಕ್ಕೂಟದಿಂದ ಹೊರಬಂದ ಹತ್ತು ವರ್ಷದಲ್ಲಿ ಬ್ರಿಟನ್ ಆರು ಮಂದಿ ಪ್ರಧಾನಿಗಳನ್ನು ಕಂಡಿದ್ದು, ಪದೇ ಪದೇ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದೆ

ಪ್ರಜಾವಾಣಿ ವಾರ್ತೆ


ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಪಕ್ಷದೊಳಗಿನ ಒತ್ತಡ ಮತ್ತು ಒತ್ತಾಯಕ್ಕೆ ಮಣಿದು ಹುದ್ದೆಯಿಂದ ಕೆಳಗಿಳಿಯುವ ಘೋಷಣೆ ಮಾಡಿದ್ದಾರೆ. ಇದರೊಂದಿಗೆ, ಸ್ಟಾರ್ಮರ್ ಅವರು ತಮ್ಮ ಹೊಸ ರಾಜಕೀಯ ಶೈಲಿಯಿಂದ ಬ್ರಿಟನ್‌ನಲ್ಲಿ ಸ್ಥಿರತೆ ಮತ್ತು ಬೆಳವಣಿಗೆಗೆ ಕಾರಣರಾಗುತ್ತಾರೆ ಎನ್ನುವ ನಿರೀಕ್ಷೆ ಹುಸಿಯಾಗಿದೆ. ಲೇಬರ್ ಪಕ್ಷದ ಅತಿ ಕಡಿಮೆ ಅವಧಿಯ ಪ್ರಧಾನಿ ಎನ್ನುವ ದಾಖಲೆಯೂ ಅವರದ್ದಾಗಿದೆ.

2024ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರ ನೇತೃತ್ವದಲ್ಲಿ ಲೇಬರ್ ಪಕ್ಷವು ಪ್ರಚಂಡ ಗೆಲುವು ಸಾಧಿಸಿತ್ತು. ಹೌಸ್ ಆಫ್ ಕಾಮನ್ಸ್‌ನ 650 ಸ್ಥಾನಗಳ ಪೈಕಿ 411 ಸ್ಥಾನಗಳಲ್ಲಿ ಗೆದ್ದು 14 ವರ್ಷಗಳ ಕನ್ಸರ್ವೇಟಿವ್ ಪಕ್ಷದ ಆಡಳಿತವನ್ನು ಅಂತ್ಯಗೊಳಿಸಿತ್ತು. ಆದರೆ, ಹೆಚ್ಚು ಸ್ಥಾನಗಳನ್ನು ಗೆದ್ದಿದ್ದರೂ ಪಕ್ಷದ ಮತಪ್ರಮಾಣದಲ್ಲಿ ದಾಖಲೆಯ ಕುಸಿತ ಉಂಟಾಗಿತ್ತು.

ಕಿಯರ್ ಸ್ಟಾರ್ಮರ್ ಹಿಂದಿನ ಲೇಬರ್ ನಾಯಕರಂತಿರಲಿಲ್ಲ. ಪ್ರಖ್ಯಾತ ವಕೀಲರಾಗಿದ್ದ ಅವರು ತಡವಾಗಿ, ತಮ್ಮ 50ನೇ ವಯಸ್ಸಿನ ನಂತರ, ರಾಜಕೀಯ ಪ್ರವೇಶಿಸಿದ್ದರು. ಸಹಜವಾದ ನಾಯಕರ ರಾಜಕೀಯ ನೈಪುಣ್ಯ ಮತ್ತು ಗುಂಪುಗಳನ್ನು ಸಂಭಾಳಿಸುವ ಕಲೆ ಅವರಿಗೆ ಸಿದ್ಧಿಸಿರಲಿಲ್ಲ. ಹೀಗಾಗಿ ಅವರು ರಾಜಕಾರಣಕ್ಕೆ ಎಷ್ಟರಮಟ್ಟಿಗೆ ಸಲ್ಲುತ್ತಾರೆ ಎನ್ನುವ ಅನುಮಾನ ಪಕ್ಷದಲ್ಲಿಯೇ ಇತ್ತು. ಅನನುಭವವೇ ತಮಗೆ ವರದಾನವಾಗಲಿದೆ ಎಂದು ಅವರು ಪ್ರತಿಪಾದಿಸಿದ್ದರು. ಗಂಭೀರ ಸ್ವಭಾವದ ಅವರು, ಆಡಳಿತದಲ್ಲಿ ಕಠಿಣ ನಿಯಮಗಳನ್ನು ಅಳವಡಿಸಿಕೊಂಡರು. ಆದರೆ, ಯಾವುದೂ ಅವರ ಕೈಹಿಡಿಯಲಿಲ್ಲ. ಪ್ರಧಾನಿ ಪಟ್ಟವೇರಿದ ಕೆಲವೇ ದಿನಗಳಲ್ಲಿ ಲೇಬರ್ ಪಕ್ಷದ ಸ್ವೀಕಾರಾರ್ಹತೆ ಇಳಿಯಿತು. ಆಡಳಿತ ವೈಖರಿ, ಅವರ ತಣ್ಣನೆಯ ಶೈಲಿ, ಅವರು ತೆಗೆದುಕೊಂಡ ತಪ್ಪು ನಿರ್ಧಾರಗಳು ಅವರ ಬಗ್ಗೆ ಪಕ್ಷದವರೇ ಭ್ರಮನಿರಸನಗೊಳ್ಳುವಂತೆ ಮಾಡಿದವು.

ಕನ್ಸರ್ವೇಟಿವ್ ಪಕ್ಷದ 14 ವರ್ಷಗಳ ಆಡಳಿತದಿಂದ ದೇಶದ ಆರ್ಥಿಕತೆ ತೀವ್ರವಾಗಿ ಕುಸಿದಿತ್ತು. ಅದನ್ನು ಹಳಿಗೆ ತರುವ ಜವಾಬ್ದಾರಿ ಸ್ಟಾರ್ಮರ್ ಸರ್ಕಾರದ್ದಾಗಿತ್ತು. ಆರ್ಥಿಕತೆ ಸರಿದಾರಿಗೆ ತರುವ ಪ್ರಯತ್ನದ ಭಾಗವಾಗಿ ಅವರು ಹಲವು ತಪ್ಪು ನಿರ್ಧಾರಗಳನ್ನು ಕೈಗೊಂಡರು. ಆರಂಭದಲ್ಲೇ ಅವರ ಆಡಳಿತದ ಬಗ್ಗೆ ಜನರು ಭ್ರಮನಿರಸನ ಕಂಡುಕೊಂಡರು. ಎಪ್‌ಸ್ಟೀನ್ ಫೈಲ್ಸ್‌ನಲ್ಲಿ ಹೆಸರು ಉಲ್ಲೇಖವಾಗಿದ್ದ ಪೀಟರ್ ಮ್ಯಾಂಡಲ್ಸನ್ ಮತ್ತು ಉಪಪ್ರಧಾನಿ ಏಂಜೆಲಾ ರೇನರ್ ರಾಜೀನಾಮೆ ಅವರ ಜನಪ್ರಿಯತೆ ಕುಸಿಯಲು ಕಾರಣವಾದವು. ಅವರ ಆಯ್ಕೆಗಳ ಬಗ್ಗೆ ಜನರಲ್ಲಿ ಅಸಮಾಧಾನ ಮೂಡಿತು. ಸ್ಟಾರ್ಮರ್ ಜನಪ್ರಿಯತೆ ಕುಸಿಯುತ್ತಲೇ ಹೋಯಿತು. ನಂತರ ತಮ್ಮ ತಪ್ಪಿನ ಅರಿವಾಗಿ ಸರಿಪಡಿಸಿಕೊಳ್ಳಲು ಪ್ರಯತ್ನಿಸಿದರಾದರೂ, ಅದು ಮತ್ತಷ್ಟು ಗೊಂದಲದ ಸ್ಥಿತಿಗೆ ಕಾರಣವಾಯಿತು.

ಸ್ಟಾರ್ಮರ್ ಅವರ ತಂದೆ ಒಬ್ಬ ಕಾರ್ಮಿಕ, ತಾಯಿ ನರ್ಸ್. 'ನನಗೆ ಜನಸಾಮಾನ್ಯರ ಕಷ್ಟ ಗೊತ್ತಿದೆ, ಉತ್ತಮ ಆಡಳಿತ ನೀಡುತ್ತೇನೆ' ಎಂದಿದ್ದರು. ಆದರೆ, ಅವರಿಗೆ ರಾಜಕಾರಣ ಗೊತ್ತಿರಲಿಲ್ಲ. ಜತೆಗೆ, ಅವರು ಪ್ರಧಾನಿಯಾಗಿದ್ದ ಕಾಲಮಾನವೂ ಸವಾಲಿನದ್ದಾಗಿತ್ತು. ಬ್ರಿಟನ್ ರಾಜಕೀಯವಾಗಿ, ಆರ್ಥಿಕವಾಗಿ ಅನೇಕ ಸಮಸ್ಯೆ–ಸವಾಲು ಎದುರಿಸುತ್ತಿತ್ತು. ರಾಜಕಾರಣದ ಬಗ್ಗೆ ಜನರ ವಿಶ್ವಾಸ ಮರುಕಳಿಸುವಂತೆ ಮಾಡುವುದಾಗಿ, ಸ್ಥಿರ ಸರ್ಕಾರ ನೀಡುವುದಾಗಿ ಚುನಾವಣಾ ಗೆಲುವಿನ ಸಮಯದಲ್ಲಿ ವಾಗ್ದಾನ ನೀಡಿದ್ದ ಕಿಯರ್ ಸ್ಟಾರ್ಮರ್ ನಡುಹಾದಿಯಲ್ಲೇ ನಿರ್ಗಮಿಸಿದ್ದಾರೆ. ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬಂದ ಹತ್ತು ವರ್ಷಗಳ ನಂತರ ಅದೇ ದಿನ ಪ್ರಧಾನಿ ಹುದ್ದೆಗೆ ಸ್ಟಾರ್ಮರ್ ರಾಜೀನಾಮೆ ಘೋಷಿಸಿರುವುದು ವಿಶೇಷವಾಗಿದೆ. 10 ವರ್ಷದಲ್ಲಿ ಆರು ಮಂದಿ ಪ್ರಧಾನಿಗಳನ್ನು ಕಂಡಿರುವ, ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಬ್ರಿಟನ್ ಜನರು, ಏಳನೆಯ ಪ್ರಧಾನಿಯ ಆಗಮನಕ್ಕಾಗಿ ಎದುರು ನೋಡುತ್ತಿದ್ದಾರೆ.



ಬರ್ನ್‌ಹಮ್‌ಗೆ ಪಟ್ಟ?

ಮೇಕರ್‌ಫೀಲ್ಡ್ ಸಂಸದ ಮತ್ತು ಮ್ಯಾಂಚೆಸ್ಟರ್ ಮಾಜಿ ಮೇಯರ್ ಆ್ಯಂಡಿ ಬರ್ನ್‌ಹಮ್ ಅವರು ಲೇಬರ್ ಪಕ್ಷದ ಸರ್ಕಾರದ ಚುಕ್ಕಾಣಿ ಹಿಡಿಯುವ ಸಾಧ್ಯತೆ ಹೆಚ್ಚಾಗಿದೆ. ಉಪಚುನಾವಣೆಯಲ್ಲಿ ಗೆದ್ದಿರುವ ಅವರು ಈಗಷ್ಟೇ ಸಂಸದರಾಗಿ ಹೌಸ್ ಆಫ್ ಕಾಮನ್ಸ್ ಪ್ರವೇಶಿಸಿದ್ದಾರೆ. ಸ್ಥಿರ ಆಡಳಿತ ನೀಡುವ ಉದ್ದೇಶದಿಂದ ದೇಶದ ಪ್ರಧಾನಿಯಾಗುವ ತಮ್ಮ ಇಚ್ಛೆಯನ್ನೂ ಅವರು ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಸ್ಪರ್ಧೆಯಲ್ಲಿದ್ದ ವೆಸ್ ಸ್ಟ್ರೀಟಿಂಗ್ ಅವರು ಕೂಡ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

10 ವರ್ಷ ಆರು ಪ್ರಧಾನಿಗಳು



ಡೇವಿಡ್ ಕ್ಯಾಮರೂನ್ (ಕನ್ಸರ್ವೇಟಿವ್ ಪಕ್ಷ) 2010-2016

2010ರಲ್ಲಿ ಪ್ರಧಾನಿಯಾದ ಡೇವಿಡ್ ಕ್ಯಾಮರೂನ್ ನೇತೃತ್ವದ ಕನ್ಸರ್ವೇಟಿವ್ ಪಕ್ಷವು 2015ರ ಚುನಾವಣೆಯಲ್ಲೂ ಬಹುಮತ ಸಾಧಿಸಿ, ಅವರು ಮತ್ತೆ ಪ್ರಧಾನಿಯಾಗಿದ್ದರು. ಬ್ರಿಟನ್, ಐರೋಪ್ಯ ಒಕ್ಕೂಟದಲ್ಲೇ ಮುಂದುವರಿಯಬೇಕು ಎಂದು ಪ್ರತಿಪಾದಿಸುತ್ತಿದ್ದ ಅವರಿಗೆ ಬ್ರೆಕ್ಸಿಟ್ ಬಗ್ಗೆ ಒಲವು ಇರಲಿಲ್ಲ. ಆದರೆ, ಒಕ್ಕೂಟದಿಂದ ಬ್ರಿಟನ್ ಹೊರಬರಬೇಕು ಎಂದು ದೇಶದ ಬಹುಪಾಲು ಜನರು ಜನಾಭಿಪ್ರಾಯ ಸಂಗ್ರಹದ ಸಂದರ್ಭದಲ್ಲಿ ಹೇಳಿದ್ದರು. ಈ ಕಾರಣಕ್ಕೆ 2016ರ ಜುಲೈನಲ್ಲಿ ಅವರು ರಾಜೀನಾಮೆ ನೀಡಿದ್ದರು.



ತೆರೆಸಾ ಮೇ (ಕನ್ಸರ್ವೇಟಿವ್ ಪಕ್ಷ) (2016-2019)

2017ರ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷಕ್ಕೆ ಬಹುಮತ ದೊರೆಯಲಿಲ್ಲ. ಜೊತೆಗೆ, ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬರುವುದಕ್ಕೆ ಸಂಬಂಧಿಸಿದಂತೆ ಎಲ್ಲ ಸಂಸದರ ಒಪ್ಪಿಗೆ ಪಡೆಯಲು ಅವರು ವಿಫಲರಾಗಿದ್ದರು. ಪಕ್ಷದೊಳಗೆ ಅವರ ನಾಯಕತ್ವಕ್ಕೆ ಅಪಸ್ವರ ಕೇಳಿ ಬಂದಿತ್ತು. ಸಂಸದರು ಮತ್ತು ಸಚಿವರ ವಿಶ್ವಾಸವನ್ನೂ ಕಳೆದುಕೊಂಡಿದ್ದರು.



ಬೋರಿಸ್ ಜಾನ್ಸನ್ (ಕನ್ಸರ್ವೇಟಿವ್ ಪಕ್ಷ) (2019-2022)

ಲೈಂಗಿಕ ದುರ್ವರ್ತನೆ ತೋರಿದ ಆರೋಪ ಎದುರಿಸುತ್ತಿದ್ದ ಸಂಸದ ಕ್ರಿಸ್ ಪಿಂಚರ್ ಅವರನ್ನು ಉಪ ಮುಖ್ಯ ಸಚೇತಕರಾಗಿ ಬೋರಿಸ್ ನೇಮಕ ಮಾಡಿದ್ದು ಪಕ್ಷದೊಳಗೆ ಅಸಮಾಧಾನ ಉಂಟುಮಾಡಿತ್ತು. 2020–21ರಲ್ಲಿ ಕೋವಿಡ್ ನಿರ್ಬಂಧಗಳಿದ್ದರೂ, ಪಕ್ಷದ ಮುಖಂಡರು ಮತ್ತು ಸರ್ಕಾರಿ ಅಧಿಕಾರಿಗಳೊಂದಿಗೆ ಪಾರ್ಟಿ ನಡೆಸಿದ್ದು ಕೂಡ ಆಕ್ಷೇಪಕ್ಕೆ ಕಾರಣವಾಗಿತ್ತು. ಹಲವು ಹಗರಣ ಆರೋಪ ಕೇಳಿಬಂದಿದ್ದವು. ಆರ್ಥಿಕ ಕುಸಿತ, ಜೀವನ ವೆಚ್ಚ ಹೆಚ್ಚಾಗಿದ್ದು ಮುಂತಾದ ವಿಚಾರಗಳ ನಿರ್ವಹಣೆಯಲ್ಲಿ ಅವರು ಎಡವಿದ್ದರು.



ಲಿಜ್ ಟ್ರಸ್ (ಕನ್ಸರ್ವೇಟಿವ್ ಪಕ್ಷ) (2022)

2022ರ ಸೆಪ್ಟೆಂಬರ್ 5ರಿಂದ ಅಕ್ಟೋಬರ್ 25ರವರೆಗೆ ಪ್ರಧಾನಿಯಾಗಿದ್ದ ಲಿಜ್ ಟ್ರಸ್ ಅವರ ರಾಜಕಾರಣದ ವೈಖರಿ, ಆರ್ಥಿಕ ನೀತಿಯ ಬಗ್ಗೆ ಪಕ್ಷದ ಒಳಗಡೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ತೆರಿಗೆ ಕಡಿತ ಪ್ಯಾಕೇಜ್ ಸೇರಿದಂತೆ ಅವರ ಕೆಲವು ನೀತಿಗಳನ್ನು ಪಕ್ಷದ ಸಂಸದರೇ ತೀವ್ರವಾಗಿ ವಿರೋಧಿಸಿದ್ದರಿಂದ ಅವರು ರಾಜೀನಾಮೆ ನೀಡಬೇಕಾಯಿತು.



ಕಿಯರ್ ಸ್ಟಾರ್ಮರ್ (ಲೇಬರ್ ಪಕ್ಷ) (2024-2026)



ರಿಷಿ ಸುನಕ್ (ಕನ್ಸರ್ವೇಟಿವ್ ಪಕ್ಷ) (2022-2024)

ಒಂದು ವರ್ಷ ಒಂಬತ್ತು ತಿಂಗಳು ಪ್ರಧಾನಿಯಾಗಿದ್ದ ರಿಷಿ ಸುನಕ್ ಅವರು 2024ರ ಜುಲೈನಲ್ಲಿ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿ, ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದರು. ಆದರೆ, ಆ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷ ಸೋಲು ಕಂಡಿತ್ತು. ಪಕ್ಷದ ಜನಪ್ರಿಯತೆ ಕುಸಿದಿತ್ತು. ಸ್ವತಃ ರಿಷಿ ಸುನಕ್ ಅವರ ಜನಪ್ರಿಯತೆಯೂ ಕಡಿಮೆಯಾಗಿತ್ತು.



ಆಧಾರ: ರಾಯಿಟರ್ಸ್, ಬಿಬಿಸಿ, ಟೈಮ್, ದಿ ಇಂಡಿಪೆಂಡೆಂಟ್

ಸ್ಟಾರ್ಮರ್‌ಗೆ ರಾಜೀನಾಮೆ ಅನಿವಾರ್ಯವಾಗಿದ್ದೇಕೆ?

ಆ್ಯಂಡಿ ಬರ್ನ್‌ಹಮ್ ಗೆಲುವು: ಮೇಕರ್‌ಫೀಲ್ಡ್ ಕ್ಷೇತ್ರಕ್ಕೆ ಕಳೆದ ತಿಂಗಳು ನಡೆದ ಉಪ ಚುನಾವಣೆಯಲ್ಲಿ ಆ್ಯಂಡಿ ಬರ್ನ್‌ಹಮ್ ಅವರು ಗೆಲುವು ಸಾಧಿಸಿದ್ದು, ಪಕ್ಷದ ಒಳಗಡೆ ಸಂಚಲನ ಸೃಷ್ಟಿಸಿತ್ತು. ಯುಕೆ ರಿಫಾರ್ಮ್ ಪಕ್ಷದ ಅಭ್ಯರ್ಥಿಯ ವಿರುದ್ಧ ಆ್ಯಂಡಿ ಜಯ ಸಾಧಿಸಿದ್ದರು. ಇದಕ್ಕೂ ಮೊದಲು ಅವರು ಗ್ರೇಟರ್ ಮ್ಯಾಂಚೆಸ್ಟರ್‌ನ ಮೇಯರ್ ಆಗಿದ್ದರು. ಪಕ್ಷದಲ್ಲಿ ಅಪಾರ ಬೆಂಬಲಿಗರನ್ನೂ ಅವರು ಹೊಂದಿದ್ದಾರೆ

ಸ್ಥಳೀಯ ಚುನಾವಣೆಯಲ್ಲಿ ಹೀನಾಯ ಸೋಲು: 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಬಹುಮತದೊಂದಿಗೆ ಜಯಭೇರಿ ಬಾರಿಸಿದ್ದ ಸ್ಟಾರ್ಮರ್ ನೇತೃತ್ವದ ಲೇಬರ್ ಪಕ್ಷವು ಸ್ಥಳೀಯ ಚುನಾವಣೆಗಳಲ್ಲಿ ಹೀನಾಯ ಪ್ರದರ್ಶನ ನೀಡಿತ್ತು. ಪಕ್ಷದ ಪ್ರಾಬಲ್ಯ ಹೆಚ್ಚು ಇರುವ ಸ್ಕಾಟ್ಲೆಂಡ್ ಮತ್ತು ವೇಲ್ಸ್ ಸೇರಿದಂತೆ ಬ್ರಿಟನ್‌ನಾದ್ಯಂತ ಪಕ್ಷದ ಅಭ್ಯರ್ಥಿಗಳು ಸೋಲು ಅನುಭವಿಸಿದ್ದರು. ಕಳೆದ ವಾರ ಇಂಗ್ಲೆಂಡ್‌ನಲ್ಲಿ ನಡೆದ ಸ್ಥಳೀಯ ಚುನಾವಣೆಗಳಲ್ಲಿ 1,498 ಕೌನ್ಸಿಲರ್‌ಗಳು ಸೋಲು ಕಂಡಿದ್ದರು. 31 ಕೌನ್ಸಿಲ್‌ಗಳಲ್ಲಿ ಬಹುಮತವನ್ನೂ ಕಳೆದುಕೊಂಡಿತ್ತು

ಕುಸಿದ ಜನಪ್ರಿಯತೆ: ದೇಶದಲ್ಲಿ ಕಿಯರ್ ಸ್ಟಾರ್ಮರ್ ಮತ್ತು ಲೇಬರ್ ಪಕ್ಷದ ಜನಪ್ರಿಯತೆ ಕುಸಿಯುತ್ತಿದೆ. ನೈಜೆಲ್ ಫಾರಜ್ ನೇತೃತ್ವದ, ಬಲಪಂಥೀಯ ವಿಚಾರಧಾರೆ ಹೊಂದಿರುವ ರಿಫಾರ್ಮ್ ಯುಕೆ ಪಕ್ಷವು ಹೆಚ್ಚು ಜನಪ್ರಿಯವಾಗುತ್ತಿದೆ. ಸ್ಥಳೀಯ ಚುನಾವಣೆಗಳಲ್ಲಿ ಅದು ಲೇಬರ್ ಪಕ್ಷವನ್ನು ಹಿಂದಿಕ್ಕಿತ್ತು

ಮ್ಯಾಂಡಲ್ಸನ್ ನೇಮಕ ತಂದ ಮುಜುಗರ: ಸ್ಟಾರ್ಮರ್ ಅವರು ಪೀಟರ್ ಮ್ಯಾಂಡಲ್ಸನ್ ಅವರನ್ನು ಅಮೆರಿಕಕ್ಕೆ ಬ್ರಿಟನ್‌ನ ರಾಯಭಾರಿಯಾಗಿ 2024ರಲ್ಲಿ ನೇಮಕ ಮಾಡಿದ್ದರು. ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಅವರೊಂದಿಗೆ ಮ್ಯಾಂಡಲ್ಸನ್ ಸಂಪರ್ಕ ಹೊಂದಿದ್ದ ವಿಷಯ ಬಹಿರಂಗವಾಗಿತ್ತು. ಆ ನಂತರ ಅದು ವಿವಾದ ಸೃಷ್ಟಿಸಿತ್ತು. ಪ್ರಕರಣವು ಲೇಬರ್ ಪಕ್ಷ ಮತ್ತು ಸ್ಟಾರ್ಮರ್ ಅವರಿಗೂ ಮುಜುಗರ ತಂದಿತ್ತು

ಜಾನ್ ಹೀಲಿ ರಾಜೀನಾಮೆ: ಸ್ಟಾರ್ಮರ್ ಅವರ ಆಪ್ತ ಮತ್ತು ರಕ್ಷಣಾ ಕಾರ್ಯದರ್ಶಿಯಾಗಿದ್ದ ಜಾನ್ ಹೀಲಿ ಅವರು ಜೂನ್ 11ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದಕ್ಕೂ ಮೊದಲು ಸಶಸ್ತ್ರ ಪಡೆಗಳ ಸಚಿವರಾಗಿದ್ದ ಎಎಲ್ ಕಾರ್ನ್ಸ್ ಅವರು ಕೂಡ ರಾಜೀನಾಮೆ ನೀಡಿದ್ದರು. ರಕ್ಷಣಾ ಕ್ಷೇತ್ರಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಬಜೆಟ್ ಅನುದಾನ ನೀಡದ ಕಾರಣದಿಂದ ಇಬ್ಬರೂ ಹುದ್ದೆ ತ್ಯಾಗ ಮಾಡಿದ್ದರು. ಈ ಬೆಳವಣಿಗೆ ಕೂಡ ಸ್ಟಾರ್ಮರ್ ಅವರಿಗೆ ಹಿನ್ನಡೆ ಉಂಟು ಮಾಡಿತ್ತು

ಸುಧಾರಣೆ ಕಾಣದ ಜೀವನ ಮಟ್ಟ: ಅಧಿಕಾರಕ್ಕೆ ಏರುವ ಮೊದಲು ಅವರು ದೇಶದ ಆರ್ಥಿಕ ಸ್ಥಿತಿ ಸುಧಾರಿಸುವುದು, ಜೀವನ ವೆಚ್ಚವನ್ನು ಕಡಿಮೆಗೊಳಿಸುವುದು ಸೇರಿದಂತೆ ಜನರ ಬದುಕನ್ನು ಸುಧಾರಿಸುವ ದಿಸೆಯಲ್ಲಿ ಕ್ರಮಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ, ಎರಡು ವರ್ಷಗಳು ಕಳೆದರೂ ಪರಿಣಾಮಕಾರಿಯಾದ ಕ್ರಮಗಳು ಜಾರಿಗೆ ಬಂದಿರಲಿಲ್ಲ. ಇದು ಜನರಲ್ಲಿ ಮತ್ತು ಪಕ್ಷದ ಒಳಗೆ ಅಸಹನೆ ಸೃಷ್ಟಿಸಿತ್ತು

ಪಿವಿ ಫ್ಯಾಕ್ಟ್ ಚೆಕ್

ತಿರುವನಂತಪುರದ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಭಾರತ ಮತ್ತು ಪಾಕಿಸ್ತಾನವನ್ನು ಹೋಲಿಸಿಕೊಂಡು ನೀಡಿದ್ದಾರೆ ಎನ್ನಲಾದ ವಿಡಿಯೊ ತುಣುಕನ್ನು ಪ್ರಿಯಾ ಪಟೇಲ್ ಎಂಬವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಒಂದು ಕಾಲದಲ್ಲಿ ಕೈಗೊಂಬೆ ಎಂದು ಕರೆಸಿಕೊಳ್ಳುತ್ತಿದ್ದ ನಮ್ಮ ನೆರೆಯ ರಾಷ್ಟ್ರವು (ಪಾಕಿಸ್ತಾನ) ಈಗ ಅದರ ರಾಜತಾಂತ್ರಿಕತೆ ಮತ್ತು ಪ್ರಾದೇಶಿಕವಾಗಿ ಅದು ನಿರ್ವಹಿಸುತ್ತಿರುವ ಪಾತ್ರದಿಂದಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿದೆ. ಭಾರತವು ಜಾಗತಿಕ ವೇದಿಕೆಯಲ್ಲಿ ಮೂಲೆಗುಂಪಾಗುತ್ತಿದ್ದರೂ, ಸರ್ಕಾರ ಸುಮ್ಮನಿದೆ ಎಂಬ ಭಾವನೆ ಹಲವರಲ್ಲಿದೆ' ಎಂದು ತರೂರ್ ಅವರು ವಿಡಿಯೊದಲ್ಲಿ ಹೇಳುವುದು ಕೇಳಿಸುತ್ತದೆ. ಆದರೆ, ಇದು ಸುಳ್ಳು



ವಿಡಿಯೊ ತುಣುಕಿನ ಬಲ ಬದಿಯ ಮೇಲ್ಭಾಗದಲ್ಲಿ 'ಮಿಂಟ್' ಪತ್ರಿಕೆಯ ಲೋಗೋ ಇತ್ತು. ಈ ವಿಡಿಯೊವನ್ನು ಇಂಡಿಯಾ–ಥಾಯ್ ಚೇಂಬರ್ ಆಫ್ ಕಾಮರ್ಸ್‌ನ ಯೂಟ್ಯೂಬ್ ಚಾನೆಲ್‌ನಿಂದ ಪಡೆಯಲಾಗಿದೆ ಎಂಬ ಉಲ್ಲೇಖವನ್ನು ಎಡ ಬದಿಯ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, ಮಿಂಟ್ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಮೂರು ವಿಡಿಯೊಗಳು ಸಿಕ್ಕಿದವು. ಮೂರು ವಿಡಿಯೊಗಳಲ್ಲಿರುವ ಸೆಟ್ಟಿಂಗ್, ಈಗ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿರುವ ವಿಡಿಯೊದಲ್ಲಿರುವ ಸೆಟ್ಟಿಂಗ್ ಒಂದೇ ಆಗಿತ್ತು. ಆ ಮೂರೂ ವಿಡಿಯೊಗಳನ್ನು ನೋಡಿದಾಗ, ಪೋಸ್ಟ್‌ನಲ್ಲಿ ಪ್ರತಿಪಾದಿಸಿದಂತೆ ತರೂರ್ ಅವರು ಎಲ್ಲೂ ಹೇಳಿಲ್ಲ ಎಂಬುದು ದೃಢಪಟ್ಟಿತು. ಅನುಮಾನ ಬಂದು ವಿಡಿಯೊ ತುಣುಕಿನಿಂದ ಧ್ವನಿಯನ್ನು ಪ್ರತ್ಯೇಕಿಸಿ ಎಐ ಧ್ವನಿ ಪತ್ತೆ ಟೂಲ್ ರಿಸೆಂಬಲ್ ಎಐ ಮೂಲಕ ಪರೀಕ್ಷೆಗೆ ಒಳಪಡಿಸಿದಾಗ, ಅದು ಎಐ ಮೂಲಕ ತಿರುಚಿದ ಧ್ವನಿ ಎಂಬುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸರಳತೆ ಸಹಜವಾದದ್ದು



ನುಡಿ ಬೆಳಗು

ದೀಪಾ ಹಿರೇಗುತ್ತಿ

ಪಿಂಗಾಣಿ ಪಾತ್ರೆಗಳನ್ನು ತಯಾರಿಸುವ ಮಣ್ಣು ಹೇರಳವಾಗಿ ಸಿಗುವ ಹಳ್ಳಿಯೊಂದರಲ್ಲಿ ಹಲವು ಮಂದಿ ಆ ಪಾತ್ರೆಗಳನ್ನು ತಯಾರಿಸಿ ಮಾರುವ ಉದ್ಯೋಗ ಮಾಡುತ್ತಿದ್ದರು. ಅವರಲ್ಲೊಬ್ಬಳು ಖುಶಿ. ಅವಳ ವೈಶಿಷ್ಟ್ಯ ಕಪ್‌ಗಳನ್ನು ತಯಾರಿಸುವುದರಲ್ಲಿತ್ತು. ಆಕೆ ಅನೇಕ ಬಗೆಯ ಕಪ್‌ಗಳನ್ನು ತಯಾರಿಸುತ್ತಿದ್ದಳು. ಹೊಳೆಯುವ ಬಣ್ಣದ ಆಕರ್ಷಕ ಕಪ್‌ಗಳು, ಚಿನ್ನದ ಬಣ್ಣದ ಗೆರೆಗಳಿಂದ ಅಲಂಕೃತವಾದ ಕಪ್‌ಗಳು, ಬಹುದೊಡ್ಡ ಕಪ್‌ಗಳು, ಪುಟಾಣಿ ಕಪ್‌ಗಳು. ಇವುಗಳ ಜತೆಗೆ ಆಕೆ ಬಿಳಿ ಮತ್ತು ಮಬ್ಬು ಬಣ್ಣಗಳ ಬಹಳ ಸರಳವಾದ ಕಪ್‌ಗಳನ್ನು ಕೂಡ ತಯಾರಿಸುತ್ತಿದ್ದಳು. ಆದರೆ ಜನರು ಆಕರ್ಷಕ ಕಪ್‌ಗಳನ್ನು ತುಂಬ ಇಷ್ಟಪಡುತ್ತಿದ್ದರು ಮತ್ತು ಅವುಗಳನ್ನು ತಾವು ಉಪಯೋಗಿಸಲು ಮತ್ತು ಉಡುಗೊರೆಯಾಗಿ ಕೊಡಲು ಖರೀದಿಸುತ್ತಿದ್ದರು. ಅವು ಮಾರಾಟವಾಗುವುದಕ್ಕೆ ಖುಶಿಗೆ ಸಂತೋಷವೇನೋ ಆಗುತ್ತಿತ್ತು. ಆದರೆ ತಾನು ಪ್ರೀತಿಯಿಂದ ಮಾಡಿದ ಸರಳವಾದ ಕಪ್‌ಗಳು ಅಂಗಡಿಯ ಶೆಲ್ಫ್‌ನಲ್ಲಿ ಧೂಳು ಹಿಡಿದುಕೊಂಡು ಇರುವುದನ್ನು ನೋಡಿ ಅವಳಿಗೆ ಬೇಸರವಾಗುತ್ತಿತ್ತು. ಅವುಗಳನ್ನು ತಾನು ಏಕೆ ತಯಾರಿಸುತ್ತಿದ್ದೇನೆ ಎಂದು ಆಕೆ ಕೆಲವೊಮ್ಮೆ ಯೋಚಿಸುತ್ತಿದ್ದಳು.

ಒಂದು ದಿನ ಒಬ್ಬ ಮಧ್ಯವಯಸ್ಕ ಮಹಿಳೆಯೊಬ್ಬರು ಖುಶಿಯ ಅಂಗಡಿಗೆ ಬಂದರು. ಅವರು ಎಲ್ಲ ಕಪ್‌ಗಳನ್ನು ನೋಡಿ ಅಲ್ಲಿದ್ದ ಅತ್ಯಂತ ಸರಳವಾದ ಕಪ್ ಬೇಕೆಂದು ಕೇಳಿದರು. ಖುಶಿ ಒಂದು ಬೂದು ಬಣ್ಣದ ಕಪ್ ತಂದುಕೊಟ್ಟು, 'ಇದು ನನ್ನಲ್ಲಿರುವ ಅತ್ಯಂತ ಸರಳ ಕಪ್' ಎಂದಳು. ಮಹಿಳೆ ನಗುತ್ತಾ, 'ಇದನ್ನು ನಾನು ಪ್ರತಿದಿನ ಬೆಳಗಿನ ಚಹಾ ಕುಡಿಯಲು ಬಳಸುತ್ತೇನೆ' ಅಂದರು. ಆಗ ಖುಶಿ, 'ಅಲ್ಲ, ಎಲ್ಲರೂ ಅಲಂಕಾರಿಕ ಕಪ್ ಬಳಸಿದರೆ ನೀವು ಸರಳವಾದ ಕಪ್ ಉಪಯೋಗಿಸುತ್ತೇನೆ ಅನ್ನುತ್ತೀರಲ್ಲ' ಎಂದು ಕೇಳಿದಳು. ಆಗ ಆ ಮಹಿಳೆ, 'ನೋಡು, ಅಲಂಕಾರಿಕ ವಸ್ತುಗಳು ವಿಶೇಷ ದಿನಗಳಿಗಾಗಿ. ಆದರೆ ದಿನನಿತ್ಯದ ಉಪಯೋಗಕ್ಕೆ ಸರಳವಾದ ವಸ್ತುಗಳೇ ಬೇಕು' ಎಂದರು.

ಮಹಿಳೆ ಅದನ್ನು ಪ್ರತಿದಿನ ಬಳಸತೊಡಗಿದ್ದನ್ನು ನೋಡಿ ಆಕೆಯ ಕುಟುಂಬದವರು ಅದು ಆರಾಮವಾಗಿದೆಯೆಂದು ಅರಿತುಕೊಂಡರು. ಚಹಾ ಅದರಲ್ಲಿ ಜಾಸ್ತಿ ಹೊತ್ತು ಬಿಸಿಯಾಗಿರುತ್ತದೆಂದೂ ಅರ್ಥ ಮಾಡಿಕೊಂಡರು. ಮನೆಗೆ ಬಂದ ಅತಿಥಿಗಳೂ ಅದನ್ನು ಮೆಚ್ಚಿ, ಅದೇ ರೀತಿಯ ಕಪ್‌ಗಾಗಿ ಬೇಡಿಕೆ ಇಟ್ಟರು. ನಿಧಾನವಾಗಿ ಜನರು ಅಲಂಕೃತ ಕಪ್‌ಗಳ ಜತೆಜತೆಗೆ ಖುಶಿಯ ಸರಳ ಕಪ್‌ಗಳನ್ನೂ ಆಯ್ಕೆ ಮಾಡತೊಡಗಿದರು.


ಆಗ ಖುಶಿಗೆ ಒಂದು ವಿಷಯ ಅರ್ಥವಾಯಿತು. ತಾನು ತಯಾರಿಸಿದ ಅತ್ಯುತ್ತಮ ವಸ್ತು ಅತಿ ಸುಂದರವಾದ ಕಪ್ ಅಲ್ಲ, ಬದಲಿಗೆ ಅತಿ ಉಪಯುಕ್ತವಾದಂತಹ ಸರಳವಾದ ಕಪ್. ಸರಳತೆ ಎಂದರೆ ಕೊರತೆಯಲ್ಲ. ಅದು ಪ್ರದರ್ಶನದ ಬದಲು ಆರಾಮವನ್ನು, ನೆಮ್ಮದಿಯನ್ನು ಆಯ್ಕೆ ಮಾಡಿಕೊಳ್ಳುವುದು. ಬರೀ ಕಪ್ ವಿಚಾರದಲ್ಲಿ ಮಾತ್ರವಲ್ಲ. ಎಲ್ಲ ಸಂಗತಿಗಳೂ ಹೀಗೆಯೇ ಇರುತ್ತವೆ. ಉದಾಹರಣೆಗೆ ಅಪರೂಪಕ್ಕೊಮ್ಮೆ ಭರ್ಜರಿ ಆಹಾರವನ್ನು ತಿಂದರೆ ಖುಷಿಯಾಗುತ್ತದೆ. ಆದರೆ ಸತತವಾಗಿ ನಾಲ್ಕು ದಿನ ತಿಂದುಬಿಟ್ಟರೆ ಆರೋಗ್ಯ ಕೆಡುತ್ತದೆ. ಮನೆಯ ಸರಳ ಆಹಾರವೇ ದಿನವೂ ದೇಹಕ್ಕೆ ಒಗ್ಗುತ್ತದೆಯೇ ಹೊರತು ಭಾರೀ ಆಹಾರವಲ್ಲ. ಝಗಮಗಿಸುವ ಬಟ್ಟೆ, ಆಭರಣ ಹೊರಗಿನ ಕಾರ್ಯಕ್ರಮಗಳಿಗೆ ಹಾಕಿಕೊಂಡು ಹೋಗಲು ಮಾತ್ರ. ಮನೆಗೆ ಬಂದ ಕೂಡಲೇ ದೇಹ ಅತ್ಯಂತ ಸರಳ ಹಗುರ ಉಡುಪುಗಳನ್ನು ಬಯಸುತ್ತದೆ. ಅಷ್ಟೇ ಅಲ್ಲ ಹೊರಗಡೆ ಗಂಭೀರತೆಯ ಮುಖವಾಡ ಹಾಕಿಕೊಳ್ಳುವ ನಾವು ಮನೆಗೆ ಬಂದೊಡನೇ ಮಾಮೂಲಿಯಾಗಿರುತ್ತೇವೆ. ಅಂದರೆ ಸರಳತೆ ಎನ್ನುವುದು ಸಹಜವಾದದ್ದು. ಸರಳತೆಯನ್ನು ಕೊರತೆ ಎಂಬಂತೆ ನೋಡುವ ಮನೋಭಾವ ಕಡಿಮೆಯಾಗಬೇಕಷ್ಟೇ.

ಪದಬಂಧ 6442

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತೊದಲು ಮಾತಲ್ಲ! ಪ್ರತ್ಯುತ್ತರ! (5)
3.ಮೊಸರು ಮಾರುವವನ ನಾಮ (3)
5.ಇದು ಕನ್ನಡಿಗನ ಟೈಟಲ್! (5)
7.ಹೆಂಡತಿಯ ಸೋದರಿಯ ಗಂಡ (3)
9.ಮಲಗಲು ಸೂಕ್ತವಾಗಿರದ ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ (3)
11.ಮಸುಕು ಬೆಳಕಿನಲ್ಲಿ ಬಿರಿದ ಹೂ (3)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಅವನಿರುವ ಭೂಮಿ! (3)
16.ವರದಿಯನ್ನು ಸಿದ್ಧಪಡಿಸುವವನು (5)

ಮೇಲಿಂದ ಕೆಳಕ್ಕೆ
1.ದೇಶಕ್ಕೆ ಬಂದವನ ಮೇಲೆ ತೋರಿದ ಕಡುಹಗೆತನ (4)
2.ಮಾತನ್ನಾಡುತ್ತಲೇ ಆನೆ ನಡೆಸುವಾತ ಬಂದಿದ್ದಾನಲ್ಲಾ! (3)
4.ಸನಿಹ ಬಂದಾಗ ನಡೆಸಿರುವ ಸಿದ್ಧತೆ (3)
6.ಬೈಯ್ಯಲು ಸೂಕ್ತವಾಗಿರುವ ವಿಸ್ತಾರವಾದ ಜಾಗ (3)
8.ಬುದ್ಧಿಯಿಲ್ಲದವನು ತಿರುಗಿದ್ದಾನಲ್ಲಾ! (2)
9.ವನದಲ್ಲಿ ಮಾಡಿರುವ ಯಜ್ಞ (3)
10.ಹಸುಗೂಸಿನ ಹತ್ತಿರವಿರುವ ಆಕಳು (2)
12.ಮರದಲ್ಲಿ ಮಾಡಿರುವ ಹೆಬ್ಬಾಗಿಲು (4)
13.ಪ್ಲವಂಗ ಸಂವತ್ಸರದಲ್ಲಿ ಉಂಟಾದ ಆಂದೋಳನ! (3)
14.ನರನು ನೋಡುತ್ತಿರುವ ಷಹರು (3)



6441ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಿವೇಕ 3.ತಗಲೂಫಿ
4.ವಿಯೋಗ 6.ಅಪವಾದ
8.ತಿದ್ದುಪಡಿ 10.ಅತಿರೇಕ
12.ಅನುಮತಿ 13.ರಶೀತಿ
15.ಆಪ್ತಮಿತ್ರ 16.ಮಲಯಜ

ಮೇಲಿಂದ ಕೆಳಕ್ಕೆ:
1.ಅಲೆ 2.ಕಲಾವಿದ
3.ತರಗತಿ 5.ನಾಡಿ
7.ಪದ್ಧತಿ 9.ಪರಮ
10.ಅಶ್ವ 11.ಕರಪತ್ರ
12.ಅತಿಕ್ರಮ 14.ಹುಂಜ

ಸುಡೊಕು 6825

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5		8		4		
	8		7		5		1	9
7		1		6		2		
							3	2
3	6		5		7	8		
		8					4	7
		7		5		1		
5			9		8		2	4
2		3					8	

6824 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಜೂನ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ನವಮಿ ಗಂ. 16-40 ನಕ್ಷತ್ರ: ಹಸ್ತ ಗಂ. 11-54 ಯೋಗ: ವರಿಯಾನ್ ಗಂ. 10-14 ಕರಣ: ಕೌಲವ ಗಂ. 16-40, ಮಿಥುನ ಮಾಸದ 08 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-09 ಸೂರ್ಯಾಸ್ತ : 06-56, ಮುಸ್ಲಿಂ ದಿನಾಂಕ : 07 ಮೊಹರಂ, **ಅದೃಷ್ಟ ಸಂಖ್ಯೆ :** 8, 11

ಮೇಷ: ಕ್ಷಿಪ್ರ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಉದ್ಯೋಗದ ನಿಮಿತ್ತ ಕಚೇರಿಯಲ್ಲಿ ಇದ್ದ ಸಮಸ್ಯೆ ತನ್ನಿಂತಾನೆ ಬಗೆಹರಿಯಲಿದೆ. ಮಗಳ ವಿವಾಹ ಪ್ರಸ್ತಾವ ನಡೆದು ಶುಭದಲ್ಲಿ ಮುಕ್ತಾಯವಾಗಲಿದೆ.

ವೃಷಭ: ಪ್ರಸ್ತುತ ಪರಿಸ್ಥಿತಿಯಲ್ಲಿ ಆದಾಗಿಯೇ ಬಂದ ಉದ್ಯೋಗ ಅವಕಾಶವನ್ನು ತಪ್ಪಿಸಿಕೊಳ್ಳಬೇಡಿ. ಸಾಮಾಜಿಕ ಸಂಘ ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕಲಿದೆ. ಮಗುವಿನ ಆರೋಗ್ಯದ ಮೇಲೆ ಗಮನವಿಡಿ.

ಮಿಥುನ: ತಾಯಿ ಆರೋಗ್ಯದಲ್ಲಿ ಗಮನ ಹರಿಸಿ, ಅದರಲ್ಲೂ ಹೊಟ್ಟೆಗೆ ಸಂಬಂಧಿಸಿದ ರೋಗಲಕ್ಷಣಗಳು ಅನುಭವಕ್ಕೆ ಬರಲಿವೆ. ಸರಿಯಾದ ವೈದ್ಯರನ್ನು ಕಂಡು ಚಿಕಿತ್ಸೆ ಪಡೆಯಿರಿ.

ಕರ್ಕಾಟಕ: ಹಲವು ಅವಕಾಶಗಳು ಎದುರಿಗಿದ್ದರೂ ಸರಿಯಾದ್ದುದ್ದನ್ನು ಆಯ್ಕೆ ಮಾಡಿ. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಗಮನ ಹರಿಸುವುದರಿಂದ ಮನಃಶ್ಶಾಂತಿ ಸಿಗುತ್ತದೆ.

ಸಿಂಹ: ಸಂಸಾರದಲ್ಲಿ ಅನುಮಾನಗಳಿಗೆ ಜಾಗ ನೀಡಬೇಡಿ, ವಿಶ್ವಾಸವಿರಲಿ. ಬೇರೆಯವರ ರಕ್ತ ಅಥವಾ ಗಾಯವನ್ನು ನೋಡಿ ಗಾಬರಿಗೊಳ್ಳುವಿರಿ. ಚರ್ಮ ಸಂಬಂಧಿ ರೋಗಗಳು ಬರಬಹುದು.

ಕನ್ಯಾ: ಕಾರ್ಯಸಾಧನೆಗೆ ಕೆಲವರು ಅಡ್ಡಗಾಲು ಹಾಕಬಹುದು. ಧೃತಿಗೆಡಬೇಡಿ. ಖಾದ್ಯ ವಸ್ತುಗಳ ಮಾರಾಟಗಾರರು ಉತ್ತಮ ವ್ಯಾಪಾರದಿಂದ ನೆಮ್ಮದಿ ಕಾಣಬಹುದು.

ತುಲಾ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ತಪ್ಪಿಸಿ. ಕಾರ್ಯದೊತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡಿ.

ವೃಶ್ಚಿಕ: ಗಿಡಮೂಲಿಕೆಯ ಔಷಧಿಯನ್ನು ನೀಡುವವರಿಗೆ ವೈದ್ಯಕೀಯ ಲೋಕದಲ್ಲಿ ಸಾಧನೆ ಮಾಡಿದ ಸಂತೋಷ ಸಿಗಲಿದೆ. ಅನ್ವೇಷಣೆಯ ಸ್ವಭಾವ ವೃತ್ತಿ ಬದುಕಿಗೆ ಉತ್ತಮ ತಿರುವು ನೀಡಲಿದೆ.

ಧನು: ವೃತ್ತಿ ಹಾಗೂ ಸಂಪಾದನೆಗೆ ತಕ್ಕ ಹಾಗೆ ವಾಸಸ್ಥಾನ ಬದಲಾವಣೆ ಆಗಲಿದೆ. ಸಣ್ಣಪುಟ್ಟ ನೋವು ಅಥವಾ ಅನಾರೋಗ್ಯಗಳಿಗೆ ಯೋಗಾಭ್ಯಾಸ ಮಾಡುವುದು ಒಳಿತು.

ಮಕರ: ಮಧುರ ಖಾದ್ಯ ಹಾಗು ತಂಪು ಆಹಾರದ ಮಾರಾಟಗಾರರಿಗೆ ಲಾಭದ ದಿನ. ಸರ್ಕಾರಿ ಕಚೇರಿಗಳಿಗೆ ಅಲೆದಾಡುವಿರಿ. ಪಿತ್ತದೋಷ ಪರಿಹಾರಕ್ಕಾಗಿ ಮನೆಮದ್ದನ್ನು ಬಳಸಿ.

ಕುಂಭ: ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಹೃದಯ ಸಂಬಂಧಿ ಕಾಯಿಲೆ ಇರುವವರು ನಿರ್ಲಕ್ಷಿಸಬೇಡಿ. ಬಂಧುಗಳ ಆಗಮನ ಸಂತೋಷ ಕೊಡಲಿದೆ.

ಮೀನ: ವಾರಾಂತ್ಯದಲ್ಲಿ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಪ್ರವಾಸಕ್ಕೆ ತೆರಳುವಿರಿ. ತಂದೆ ತಾಯಿಯರ ಮಾತು ಸ್ಫೂರ್ತಿ ತಂದು ಕೊಡಲಿದೆ. ಉಪಯುಕ್ತ ಮಾಹಿತಿಗೆ ಗ್ರಂಥಾಲಯಕ್ಕೆ ಹೋಗುವಿರಿ.

ಗುಂಡಣ್ಣ



ಷೇರುಪೇಟೆ ವಹಿವಾಟು — 76,802 ಹಿಂದಿನ ಅಂತ್ಯ | 291 | 77,094 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,013
ಇಂದಿನ ಅಂತ್ಯ:	24,102
ದಿನದ ಗರಿಷ್ಠ:	24,168
	89

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹705
12 ಕ್ಕೆ	₹94
ಮೈಸೂರು: 100 ಕ್ಕೆ	₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹268
ಆರ್‌ಎಸ್‌ಎಸ್-5	₹262
ಗುಡ್ ಲಾಟ್	₹229

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹363-677
ದ್ವಿತಳಿ (ಬಿ.ವಿ)	₹360-820

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1455 (1450)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1470 (1470)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹18000-23000
ತಿಪಟೂರು	₹30500-33333
ತುರುವೇಕೆರೆ	₹31000-33000

ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ಕಲ್ಲಿದ್ದಲು, ಕಚ್ಚಾ ತೈಲದ ಉತ್ಪಾದನೆಯಲ್ಲಿನ ಇಳಿಕೆಯಿಂದ ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಮೇ ತಿಂಗಳಿನಲ್ಲಿ ಏಳು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ಏಪ್ರಿಲ್‌ನಲ್ಲಿ ಈ ವಲಯಗಳ ಉತ್ಪಾದನೆ ಶೇ 1.8ರಷ್ಟಿತ್ತು. ಇದು ಮೇ ತಿಂಗಳಿನಲ್ಲಿ ಶೇ 0.5ಕ್ಕೆ ಇಳಿದಿದೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಿಸಿದ ಉತ್ಪನ್ನಗಳು, ರಸಗೊಬ್ಬರದ ಉತ್ಪಾದನೆಯಲ್ಲಿ ಇಳಿಕೆ ಆಗಿದೆ. ಇದೇ ಬೆಳವಣಿಗೆ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಕಳೆದ 10 ವರ್ಷಗಳಲ್ಲಿ ಬ್ರಿಟನ್ 7 ಪ್ರಧಾನಿಗಳನ್ನು ಕಾಣುತ್ತಿರುವುದಕ್ಕೆ ಕಾರಣವೇನು?

- ವಲಸೆ ನೀತಿ
- ಆರ್ಥಿಕ ಅಸ್ಥಿರತೆ
- ಅಧಿಕಾರಕ್ಕಾಗಿ ಪೈಪೋಟಿ
- ಜನಾಕ್ರೋಶ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

60 ದಿನದಲ್ಲಿ ಒಪ್ಪಂದಕ್ಕೆ ಮಾರ್ಗಸೂಚಿ

ಸ್ವಿಟ್ಜರ್ಲೆಂಡ್‌ನಲ್ಲಿ ನಡೆದ ಮಾತುಕತೆಯಲ್ಲಿ ಅಮೆರಿಕ, ಇರಾನ್ ಒಪ್ಪಿಗೆ

ಇಸ್ಲಾಮಾಬಾದ್/ಜ್ಯೂರಿಚ್ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ಶಾಂತಿ ಒಪ್ಪಂದಕ್ಕೆ ಮಾರ್ಗಸೂಚಿಯನ್ನು 60 ದಿನಗಳಲ್ಲಿ ಪೂರ್ಣಗೊಳಿಸಲು ಇರಾನ್ ಹಾಗೂ ಅಮೆರಿಕ ಸಮ್ಮತಿ ಸೂಚಿಸಿವೆ. ಪಾಕಿಸ್ತಾನ ಹಾಗೂ ಕತಾರ್ ಮಧ್ಯಸ್ಥಿಕೆಯಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ನಡೆದ ಮಾತುಕತೆಯು 'ಉತ್ತೇಜನಕಾರಿಯಾಗಿತ್ತು' ಎಂದು ಉಭಯ ದೇಶಗಳು ಜಂಟಿ ಪತ್ರಿಕಾ ಹೇಳಿಕೆ ಮೂಲಕ ತಿಳಿಸಿವೆ.

'ಮಾತುಕತೆ ಸಕಾರಾತ್ಮಕ ಹಾಗೂ ರಚನಾತ್ಮಕವಾಗಿ ನಡೆದಿದೆ' ಎಂದು ಮಧ್ಯಸ್ಥಿಕೆದಾರರು ಬಿಡುಗಡೆಗೊಳಿಸಿದ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಮುಂದಿನ ತಾಂತ್ರಿಕ ಮಾತುಕತೆಗೆ ಕಾರ್ಯಸೂಚಿ ವಿಧಾನ ಸಿದ್ಧಪಡಿಸುವುದು ಸೇರಿದಂತೆ ಪ್ರೋತ್ಸಾಹದಾಯಕ ಮಾತುಕತೆಯೂ ನಡೆದಿದೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇಸ್ಲಾಮಾಬಾದ್ ತಿಳಿವಳಿಕೆ ಒಪ್ಪಂದಕ್ಕೆ (ಎಂಒಯು) ಅಮೆರಿಕ ಹಾಗೂ ಇರಾನ್ ಜೂನ್ 18ರಂದು ಸಹಿ ಹಾಕಿದ್ದವು. ಸ್ವಿಟ್ಜರ್ಲೆಂಡ್‌ನ ಲೇಕ್ ಲುಸರ್ನ್‌ನಲ್ಲಿ ಸೋಮವಾರ ಮುಕ್ತಾಯಗೊಂಡ ಉನ್ನತ ಮಟ್ಟದ ಸಭೆಯಲ್ಲಿ ಪ್ರಾದೇಶಿಕ ಭದ್ರತೆ ಹಾಗೂ ಇತರೆ ವಿವಾದಾಸ್ಪದ ವಿಚಾರಗಳ ಕುರಿತು ದೃಢ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಅಮೆರಿಕ ನಿಯೋಗದ ನೇತೃತ್ವವನ್ನು ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ಇರಾನ್ ಪ್ರತಿನಿಧಿಗಳ ತಂಡದ ನೇತೃತ್ವವನ್ನು ಮುಖ್ಯ ಮಧ್ಯಸ್ಥಿಕೆದಾರ ಖಾಲೀಬಾಫ್ ವಹಿಸಿದ್ದರು. ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಕತಾರ್‌ನ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರಹಮಾನ್ ಅಲ್ ಥನಿ ಕೂಡ ಸಭೆಯಲ್ಲಿ ಭಾಗವಹಿಸಿ, ಮಾತುಕತೆಯನ್ನು ಯಶಸ್ವಿಗೊಳಿಸಿದರು.

'ಸಭೆಯು ಮುಕ್ತಾಯಗೊಂಡ ಬಳಿಕ ಇರಾನ್, ಅಮೆರಿಕ, ಪಾಕಿಸ್ತಾನ ಹಾಗೂ ಕತಾರ್‌ನ ಪ್ರತಿನಿಧಿಗಳು ಒಪ್ಪಂದದ ಅಡಿಯಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಿದ್ದಾರೆ' ಎಂದು ಮಧ್ಯಸ್ಥಿಕೆದಾರರು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಣಾಮಕಾರಿ ಅನುಷ್ಠಾನ: ಒಪ್ಪಂದದ ಆಧಾರದ ಮೇಲೆ ಉನ್ನತ ಮಟ್ಟದ ಸಮಿತಿ ರಚಿಸಲು ಉಭಯ ದೇಶಗಳು ಒಪ್ಪಿಗೆ ಸೂಚಿಸಿವೆ. ಮಧ್ಯಸ್ಥಿಕೆ ವಿಷಯದಲ್ಲಿ ರಾಜಕೀಯ ಮೇಲ್ವಿಚಾರಣೆಯನ್ನೂ ವಹಿಸಿಕೊಳ್ಳಲಿವೆ. ಈ ಸಮಿತಿಯು ಮುಖ್ಯ ಸಮಾಲೋಚಕರಿಂದ ವರದಿಯನ್ನು ಸ್ವೀಕರಿಸಲಿದೆ.

'60 ದಿನಗಳ ಒಳಗಾಗಿ ಅಂತಿಮ ಒಪ್ಪಂದದ ಕುರಿತು ಮಾರ್ಗಸೂಚಿ ಸಿದ್ಧಪಡಿಸಲು ಉನ್ನತ ಮಟ್ಟದ ಸಮಿತಿಯು ಒಪ್ಪಿಗೆ ಸೂಚಿಸಿದೆ. ತಾಂತ್ರಿಕ ಮಾತುಕತೆಯನ್ನು ತಕ್ಷಣದಿಂದಲೇ ಆರಂಭಿಸಲು ಚಾಲನೆ ನೀಡಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಲೆಬನಾನ್‌ನಲ್ಲಿ ಇಸ್ರೇಲ್ ತನ್ನ ಸೇನಾ ಕಾರ್ಯಾಚರಣೆ ನಿಲ್ಲಿಸಿರುವುದನ್ನು ಖಚಿತಪಡಿಸುವ ನಿಟ್ಟಿನಲ್ಲಿ ಸಂಘರ್ಷ ನಿವಾರಣಾ ಕೋಶ ರಚಿಸಲು ನಿರ್ಧರಿಸಲಾಗಿದೆ. ದಕ್ಷಿಣ ಲೆಬನಾನ್‌ನ ಮೇಲೆ ಸೇನಾ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲೂ ತೀರ್ಮಾನಿಸಲಾಗಿದೆ.

ಇರಾನ್ ಹಾಗೂ ಅಮೆರಿಕ ನಡುವಿನ ಒಪ್ಪಂದದಲ್ಲಿ ಇಸ್ರೇಲ್ ಹಾಗೂ ಹಿಜ್ಬುಲ್ಲಾ ಬಂಡುಕೋರರು ಭಾಗಿಯಾಗಿಲ್ಲ. ಭದ್ರತಾ ಅಪಾಯಗಳು ನಿವಾರಣೆಯಾಗುವವರೆಗೂ ದಕ್ಷಿಣ ಲೆಬನಾನ್‌ನಲ್ಲಿ ಭದ್ರತಾ ಪಡೆಗಳನ್ನು ಹಿಂದಕ್ಕೆ ಪಡೆಯುವುದಿಲ್ಲ ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ. ಇಸ್ರೇಲ್ ತನ್ನ ಪಡೆಯನ್ನು ಹಿಂದಕ್ಕೆ ಪಡೆದರೆ ಮಾತ್ರ ದಾಳಿಯನ್ನು ಸ್ಥಗಿತಗೊಳಿಸುವುದಾಗಿ ಹಿಜ್ಬುಲ್ಲಾ ಬಂಡುಕೋರರು ಸ್ಪಷ್ಟಪಡಿಸಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ, ಲೆಬನಾನ್‌ನ ಗಡಿಭಾಗದಲ್ಲಿ ಜನರ ಓಡಾಟಕ್ಕೆ ಇಸ್ರೇಲ್ ಸೋಮವಾರ ಸಮ್ಮತಿ ನೀಡಿದೆ.

ಮುಖ್ಯಾಂಶಗಳು

- ಸ್ವಿಟ್ಜರ್ಲೆಂಡ್‌ನಲ್ಲಿ 2 ದಿನ ನಡೆದ ಮಾತುಕತೆ
- ತಾಂತ್ರಿಕ ಮಾತುಕತೆ ತಕ್ಷಣದಿಂದಲೇ ಆರಂಭ



ಸ್ವಿಟ್ಜರ್ಲೆಂಡ್‌ನ ಲೇಕ್ ಲುಸರ್ನ್‌ನಲ್ಲಿ ನಡೆದ ಶಾಂತಿ ಮಾತುಕತೆಯ ವೇಳೆ ಕತಾರ್‌ನ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಅಲ್ ಥನಿ ಕೈ ಹಿಡಿದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್. ಅಮೆರಿಕದ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಇದ್ದಾರೆ —ಎಎಫ್‌ಪಿ ಚಿತ್ರ

> ಲೆಬನಾನ್‌ನ ಯುದ್ಧ ಕೊನೆಗೊಳಿಸಲು ಪಾಕ್, ಕತಾರ್‌ನ ಮಧ್ಯಸ್ಥಿಕೆದಾರರರು ಯಶಸ್ಸು ಸಾಧಿಸಿದ್ದಾರೆ. ಲೆಬನಾನ್‌ನ ಸಂಘರ್ಷ ನಿವಾರಣಾ ಕೋಶವು ನಿಜವಾದ ಪರೀಕ್ಷೆಯಾಗಿದೆ
> **ಅಬ್ಬಾಸ್ ಅರಾಘ್ಚಿ**, ಇರಾನ್ ಸಚಿವ

> ಯುದ್ಧ ಕೊನೆಗೊಳಿಸುವ ಒಪ್ಪಂದಕ್ಕೆ ನಾವು ನಾಂದಿ ಹಾಡಿದ್ದೇವೆ. ಮನೆ ಕಟ್ಟಿಲ್ಲವಾದರೂ ಅಮೆರಿಕದ ಜನರಿಗೆ ಒಳ್ಳೆಯ ಸ್ಥಳವನ್ನು ತಲುಪಲು ಯಶಸ್ವಿ ಅಡಿಪಾಯ ಹಾಕಿದ್ದೇವೆ
> **ಜೆ.ಡಿ.ವ್ಯಾನ್ಸ್**, ಅಮೆರಿಕ ಉಪಾಧ್ಯಕ್ಷ

ಮಾತುಕತೆಯ ಪ್ರಮುಖಾಂಶ

- ಹೊರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಸುರಕ್ಷಿತ ಪ್ರಯಾಣಕ್ಕೆ ಅವಕಾಶ
- ಮಾತುಕತೆಗಾಗಿಯೇ ಉಭಯ ರಾಷ್ಟ್ರಗಳ ನಡುವೆ ಪ್ರತ್ಯೇಕ ಸಂವಹನ ಮಾರ್ಗಗಳ ಸ್ಥಾಪನೆ
- ದಕ್ಷಿಣ ಲೆಬನಾನ್‌ನಲ್ಲಿಯೂ ಕದನ ವಿರಾಮ ಜಾರಿಗೆ
- ಅಮೆರಿಕದ ಸೋಯಾ, ಜೋಳ, ಗೋಧಿ ಖರೀದಿಗಾಗಿ ಇರಾನ್‌ನ ಆಸ್ತಿಗಳ ಮೇಲಿನ ನಿರ್ಬಂಧ ತೆರವು

ಸುದ್ದಿ 2 ನಿಮಿಷ

ವ್ಯಾಪಾರ ಒಪ್ಪಂದ ಚರ್ಚೆ: ಭಾರತಕ್ಕೆ ಬರಲಿರುವ ಅಮೆರಿಕ ಅಧಿಕಾರಿ

ವಾಷಿಂಗ್ಟನ್ (ಪಿಟಿಐ): ಕಳೆದ ಫೆಬ್ರುವರಿಯಲ್ಲಿ ಮಾಡಿಕೊಳ್ಳಲಾದ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಅಮೆರಿಕದ ವ್ಯಾಪಾರ ಪ್ರತಿನಿಧಿ ಜೆಮಿಸನ್ ಗ್ರೀರ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ.

'ಭಾರತ–ಅಮೆರಿಕ ನಡುವಿನ ವ್ಯಾಪಾರಕ್ಕೆ ಸಂಬಂಧಿಸಿದ ಮಧ್ಯಂತರ ಒಪ್ಪಂದದ ಕುರಿತು ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹಾಗೂ ಇತರ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಲು ಇದೇ ವಾರದಲ್ಲಿ ನವದೆಹಲಿಗೆ ಗ್ರೀರ್ ಭೇಟಿ ನೀಡಲಿದ್ದಾರೆ' ಎಂದು ಅವರ ಕಾರ್ಯಾಲಯವು ತಿಳಿಸಿದೆ.

ಕಳೆದ ವಾರ ಫ್ರಾನ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ, 'ಭಾರತದೊಂದಿಗಿನ ವ್ಯಾಪಾರ ಒಪ್ಪಂದವು ಅಂತಿಮ ಹಂತದಲ್ಲಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು.



'ಪಿಎಫ್‌ಆರ್‌ಡಿಎ ಪಿಂಚಣಿ ಸಹಾಯಕ್' ವೇದಿಕೆ ಆರಂಭ

ನವದೆಹಲಿ (ಪಿಟಿಐ): ತನ್ನ ಚಂದಾದಾರರಿಗೆ ಪಿಂಚಣಿ ಸೇವೆಗಳು ಹೆಚ್ಚು ಸಮಗ್ರ ಮತ್ತು ಸುಲಭವಾಗಿ ಸಿಗುವಂತೆ ಮಾಡಲು ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಕುಂದುಕೊರತೆ ಪರಿಹಾರ ವೇದಿಕೆಯನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಆರಂಭಿಸಿದೆ.

'ಪಿಎಫ್‌ಆರ್‌ಡಿಎ ಪಿಂಚಣಿ ಸಹಾಯಕ್' ವೇದಿಕೆಯು ಹಲವಾರು ಪಿಂಚಣಿ ಸೇವೆಗಳನ್ನು ಬೆರಳ ತುದಿಯಲ್ಲೇ ಒದಗಿಸಲಿದೆ. ಇದು ಡಿಜಿಟಲ್ ರೂಪಾಂತರದತ್ತ ಮಹತ್ವದ ಹೆಜ್ಜೆ ಆಗಿದೆ ಎಂದು ತಿಳಿಸಿದೆ.

ಈ ವೇದಿಕೆಯು ದೇಶದ 22 ಭಾಷೆಗಳಲ್ಲಿ ಲಭ್ಯವಿದೆ. ಧ್ವನಿ ಆಧಾರಿತವಾಗಿ ಕುಂದುಕೊರತೆಗಳನ್ನು ದಾಖಲಿಸಬಹುದಾಗಿದೆ. ಹಿರಿಯ ನಾಗರಿಕರು, ಗ್ರಾಮೀಣ ಚಂದಾದಾರರು ಮತ್ತು ಬಳಕೆದಾರರಿಗೆ ಹೆಚ್ಚು ಅನುಕೂಲಕರವಾಗಿದ್ದು, ಪ್ರಾದೇಶಿಕ ಭಾಷೆಗಳಲ್ಲಿ ಸಂವಹನ ಮಾಡಬಹುದಾಗಿದೆ ಎಂದು ತಿಳಿಸಿದೆ.

ಚಂದಾದಾರರು ತಮಗೆ ಬೇಕಾದ ಭಾಷೆಯಲ್ಲಿಯೇ ಪ್ರತಿಕ್ರಿಯೆ ಪಡೆಯಬಹುದಾಗಿದೆ. ಈ ವೇದಿಕೆಯು ಸ್ವಯಂಚಾಲಿತವಾಗಿ ನಿಗದಿತ ಗಡುವಿನಲ್ಲಿ ಕುಂದುಕೊರತೆಗಳನ್ನು ಪರಿಹಾರ ಮಾಡುವ ವ್ಯವಸ್ಥೆ ಹೊಂದಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	30189-33999
ಕೋಕ	17019-32999
ಫ್ಯಾಕ್ಟರಿ	10879-26129
ಹಳೆಚಾಲಿ	45099-47398
ಹೊಸಚಾಲಿ	40099-46399
ಪುತ್ತೂರು	
ಕೋಕ	20000-33500
ಹೊಸತು	30000-47000
ಸಾಗರ	
ಬಿಳಿಗೋಟು	17710-19109
ಚಾಲಿ	34510-40009
ಕೋಕ	16709-30010
ಕೆಂಪುಗೋಟು	36099-37509
ರಾಶಿ	42001-52299
ಸಿಪ್ಪೆಗೋಟು	8010-21010
ಸಿದ್ದಾಪುರ	
ಬಿಳಿಗೋಟು	25899-35389
ಚಾಲಿ	38300-46599
ಕೋಕ	21999-31599
ಕೆಂಪುಗೋಟು	33819-33819
ರಾಶಿ	44619-50199
ತಟ್ಟಿಬೆಟ್ಟೆ	38889-41299
ಶಿರಸಿ	
ಬೆಟ್ಟೆ	40000-49899
ಬಿಳಿಗೋಟು	26011-34699
ಚಾಲಿ	44100-48315
ಕೆಂಪುಗೋಟು	28158-34699
ರಾಶಿ	49259-51600
ಯಲ್ಲಾಪುರ	
ಆಪಿ	53379-53379
ಬಿಳಿಗೋಟು	20000-33199
ಚಾಲಿ	36899-47229
ಕೋಕ	14909-26900
ಕೆಂಪುಗೋಟು	21600-33709
ರಾಶಿ	48899-51199
ತಟ್ಟಿಬೆಟ್ಟೆ	40620-46699
ಶಿವಮೊಗ್ಗ	
ರಾಶಿ	46569-53011
ಗೊರಬಲು	19001-40888

ಭಾರತಕ್ಕೆ ಹಣಕಾಸು ನೆರವು ನೀಡಿದ ವಿಶ್ವಬ್ಯಾಂಕ್

ಉದ್ಯೋಗ ಸೃಷ್ಟಿಗೆ ₹14,188 ಕೋಟಿ

ನವದೆಹಲಿ (ಪಿಟಿಐ): ಭಾರತದ ಆರ್ಥಿಕ ಬೆಳವಣಿಗೆಗೆ ವೇಗ ನೀಡಲು ಮತ್ತು ಖಾಸಗಿ ವಲಯದಲ್ಲಿ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಲು ₹14,188 ಕೋಟಿ (1.5 ಬಿಲಿಯನ್ ಡಾಲರ್) ಸಾಲ ನೀಡಲು ವಿಶ್ವಬ್ಯಾಂಕ್ ಅನುಮೋದನೆ ನೀಡಿದೆ.

ಉದ್ಯೋಗ ಸೃಷ್ಟಿಯನ್ನು ಹೆಚ್ಚಿಸುವ ಅಡಿಯಲ್ಲಿ ಒದಗಿಸಲಾದ ಈ ಹಣಕಾಸು ನೆರವಿನಿಂದ, ಮುಂದಿನ ಎರಡು ದಶಕದಲ್ಲಿ 1.1 ಕೋಟಿಗೂ ಹೆಚ್ಚು ಉದ್ಯೋಗದ ಅವಕಾಶಗಳು ಸೃಷ್ಟಿ ಆಗುವ ನಿರೀಕ್ಷೆ ಇದೆ ಎಂದು ವಿಶ್ವಬ್ಯಾಂಕ್ ಸೋಮವಾರ ತಿಳಿಸಿದೆ.

ಜಿಎಸ್‌ಟಿ ದರ ಪರಿಷ್ಕರಣೆ, ವ್ಯಾಪಾರ ಒಪ್ಪಂದಗಳು, ಸರ್ಕಾರದ ನಿಯಮಗಳಲ್ಲಿನ ಬದಲಾವಣೆಗಳು, ವ್ಯಾಪಾರಕ್ಕೆ ಉತ್ತೇಜನ ನೀಡಲು ಹಲವಾರು ಕ್ರಮಗಳನ್ನು ಭಾರತವು ತೆಗೆದುಕೊಂಡಿದೆ ಎಂದು ತಿಳಿಸಿದೆ.

ಉದ್ಯಮಶೀಲತೆಗೆ ಇರುವ ಅಡೆತಡೆಗಳನ್ನು ಇದು ಕಡಿಮೆ ಮಾಡಲಿದೆ. ಮಹಿಳೆಯರು, ವ್ಯಾಪಾರಿಗಳು ಮತ್ತು ಹೂಡಿಕೆದಾರರಿಗೆ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಜೊತೆಗೆ ವ್ಯವಹಾರಕ್ಕೆ ಬಂಡವಾಳವನ್ನು ಒದಗಿಸಲಿದೆ ಎಂದು ಹೇಳಿದೆ.

ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸುವ ಮತ್ತು ಉದ್ಯೋಗಾವಕಾಶಗಳನ್ನು ವಿಸ್ತರಿಸುವ ಮೂಲಕ ವಿಕಸಿತ ಭಾರತದ ಗುರಿಗೆ ವಿಶ್ವಬ್ಯಾಂಕ್ ಬೆಂಬಲ ನೀಡುತ್ತದೆ ಎಂದು ತಿಳಿಸಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರವು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಿದೆ. 2017–18ರ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಉದ್ಯೋಗ ಮಾಡುವವರ ಪ್ರಮಾಣ 45.2 ಕೋಟಿಯಷ್ಟಿತ್ತು. ಇದು 2023–24ರ ವೇಳೆಗೆ 60.4 ಕೋಟಿಗೆ ತಲುಪಿದೆ. ಆರು ವರ್ಷದಲ್ಲಿ 15 ಕೋಟಿಯಷ್ಟು ಉದ್ಯೋಗ ಸೃಷ್ಟಿ ಆಗಿವೆ. ಇದೇ ಅವಧಿಯಲ್ಲಿ ನಿರುದ್ಯೋಗ ಪ್ರಮಾಣವು ಶೇ 6ರಿಂದ ಶೇ 3.2ಕ್ಕೆ ಇಳಿದಿದೆ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ.

ಅನಿಲ ಸಂಸ್ಕರಣಾ ಘಟಕ ಸ್ಫೋಟ: 13 ಮಂದಿ ಸಾವು

ದುಬೈ (ಎಪಿ): ಕತಾರ್‌ನಲ್ಲಿ ಸ್ಥಗಿತಗೊಳಿಸಲಾಗಿದ್ದ ಸ್ವಾಭಾವಿಕ ಅನಿಲ ಸಂಸ್ಕರಣಾ ಘಟಕವು ಮತ್ತೆ ಕಾರ್ಯಾರಂಭ ಮಾಡಿದ ನಂತರ ಸ್ಫೋಟ ಸಂಭವಿಸಿದ್ದು, 13 ಮಂದಿ ಮೃತಪಟ್ಟಿದ್ದು, 66 ಮಂದಿ ಗಾಯಗೊಂಡಿದ್ದಾರೆ.

ರಾಸ್ ಲಫನ್ ಕೈಗಾರಿಕಾ ಪ್ರದೇಶದಲ್ಲಿ ಸಂಭವಿಸಿದ ಸ್ಫೋಟವು ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಮತ್ತಷ್ಟು ಅವ್ಯವಸ್ಥೆಗೆ ಕಾರಣವಾಗಬಹುದು ಎಂದು ಹೇಳಲಾಗುತ್ತಿದೆ.

ಇರಾನ್, ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದ ಬಳಿಕ ಕತಾರ್ ಸ್ವಾಭಾವಿಕ ಅನಿಲ ಉತ್ಪಾದನೆಯನ್ನು ನಿಲ್ಲಿಸಿತ್ತು. ಅಮೆರಿಕದ ಜೊತೆಗಿನ ಒಪ್ಪಂದದ ಭಾಗವಾಗಿ ಹೊರ್ಮುಜ್ ಜಲಸಂಧಿಯ ಮೇಲಿನ ನಿಯಂತ್ರಣವನ್ನು ಇರಾನ್ ಸಡಿಲಗೊಳಿಸಿದ ಬಳಿಕ ಸಂಸ್ಕರಣಾ ಘಟಕವನ್ನು ಪುನಃ ತೆರೆಯಲು ಕತಾರ್ ನಿರ್ಧರಿಸಿತ್ತು. ಭಾನುವಾರ ಸಂಜೆ ಘಟಕದಲ್ಲಿ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆಯೇ ಸ್ಫೋಟ ಸಂಭವಿಸಿತು ಎಂದು ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಎಷ್ಟು ಪ್ರಮಾಣದಲ್ಲಿ ಹಾನಿ ಉಂಟಾಗಿದೆ ಎಂಬ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿಲ್ಲ.

ಕಳೆದ ಮಾರ್ಚ್‌ನಲ್ಲಿ ಇರಾನ್, ರಾಸ್ ಲಫನ್ ಪ್ರದೇಶದ ಮೇಲೆ ಕ್ಷಿಪಣಿ ದಾಳಿ ನಡೆಸಿದಾಗಲೂ ಅಪಾರ ಪ್ರಮಾಣದ ಹಾನಿ ಉಂಟಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಲದ ಮರುಪಾವತಿ ಮೇಲೆ ಹಣದುಬ್ಬರ ಒತ್ತಡ

ನವದೆಹಲಿ (ಪಿಟಿಐ): ಹಣದುಬ್ಬರದ ಒತ್ತಡ ಮತ್ತು ಕುಟುಂಬಗಳ ವೆಚ್ಚದಲ್ಲಿನ ಇಳಿಕೆಯು ಕಿರು ಹಣಕಾಸು ಸಂಸ್ಥೆಗಳಲ್ಲಿ (ಎಂಎಫ್‌ಐ) ಸಾಲ ಪಡೆದಿರುವವರ ಸಾಲದ ಮರುಪಾವತಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಕ್ರಿಸಿಲ್ ವರದಿ ತಿಳಿಸಿದೆ.



ಗ್ರಾಮೀಣ ಪ್ರದೇಶದಲ್ಲಿನ ಜನರ ಆದಾಯದ ಮೇಲೆ ಎಲ್‌ನಿನೊ ಪರಿಣಾಮ ಬೀರಬಹುದು. ಪಶ್ಚಿಮ ಏಷ್ಯಾ ಸಂಘರ್ಷವು ಸಾಲಗಾರರ ಮರುಪಾವತಿ ನಡವಳಿಕೆಯ ಮೇಲೆ ಪರಿಣಾಮ ಬೀರದೇ ಇರಬಹುದು ಎಂದು ಹೇಳಿದೆ.

ಕರ್ನಾಟಕ, ತಮಿಳುನಾಡು ಮತ್ತು ಬಿಹಾರದಂತಹ ರಾಜ್ಯಗಳು ಕಿರು ಹಣಕಾಸು ಸಂಸ್ಥೆಗಳ ಸಾಲ ಪದ್ಧತಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ಜಾರಿಗೆ ತಂದಿವೆ.

ಕಿರು ಹಣಕಾಸು ಸಂಸ್ಥೆಗಳಿಂದ ಸಾಲಗಾರರಿಗೆ ಆಗುತ್ತಿದ್ದ ಕಿರುಕುಳ ತಪ್ಪಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಕಳೆದ ವರ್ಷದ ಫೆಬ್ರುವರಿಯಲ್ಲಿ ಜಾರಿಗೆ ತಂದಿದ್ದ ಸುಗ್ರೀವಾಜ್ಞೆಯಿಂದ ಸಂಸ್ಥೆಗಳ ಸಂಗ್ರಹದಲ್ಲಿ ಶೇ 5ರಿಂದ ಶೇ 6ರಷ್ಟು ತಕ್ಷಣವೇ ಇಳಿಕೆ ಆಗಿತ್ತು. ಕರ್ನಾಟಕದಲ್ಲಿ ಜಾರಿಗೆ ಬಂದ ಈ ಸುಗ್ರೀವಾಜ್ಞೆಯ ಪಾಠ ಕಲಿತು, ತಮ್ಮ ಕಾರ್ಯಾಚರಣೆಯ ವಿಧಾನಗಳನ್ನು ಅದಕ್ಕೆ ತಕ್ಕಂತೆ ಅಳವಡಿಸಿಕೊಂಡಿದ್ದರಿಂದ ತಮಿಳುನಾಡು ಮತ್ತು ಬಿಹಾರ ರಾಜ್ಯಗಳ ಸಂಗ್ರಹದ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

22-06-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1468 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,400 (1,44,900)
ಬೆಳ್ಳಿ ಕೆ.ಜಿಗೆ	2,38,000 (2,34,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ



ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮವು 2024–25ನೇ ಸಾಲಿನಲ್ಲಿ ಗಳಿಸಿದ ನಿವ್ವಳ ಲಾಭದಲ್ಲಿ ₹143.12 ಕೋಟಿ ಲಾಭಾಂಶವನ್ನು ಸಚಿವ ಎಂ.ಬಿ. ಪಾಟೀಲ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸೋಮವಾರ ಹಸ್ತಾಂತರಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ₹3 ಕೋಟಿ ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾಯಿತು. ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬೂ ಗೋಯಲ್, ಕಾರ್ಯನಿರ್ವಾಹಕ ನಿರ್ದೇಶಕ ಚಿದಾನಂದ್ ಉಪಸ್ಥಿತರಿದ್ದರು

ಕಚ್ಚಾ ತೈಲ ದರ ಇಳಿಕೆ: ಲಾಭದತ್ತ ಕಂಪನಿಗಳು

ನವದೆಹಲಿ (ಪಿಟಿಐ): ಕಚ್ಚಾ ತೈಲ ದರ ಇಳಿಕೆಯಿಂದ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರುಕಟ್ಟೆ ಕಂಪನಿಗಳ ಲಾಭವು ಹೆಚ್ಚಳ ಆಗುತ್ತಿದೆ ಎಂದು ಜೆ.ಪಿ. ಮೋರ್ಗನ್ ವರದಿ ತಿಳಿಸಿದೆ.

ಕಚ್ಚಾ ತೈಲ ದರ ಮತ್ತು ಎಕ್ಸೈಸ್ ಸುಂಕ ಇಳಿಕೆಯಿಂದ ಗಳಿಕೆ ಹೆಚ್ಚಳವಾಗುತ್ತಿದ್ದು, ಪಶ್ಚಿಮ ಏಷ್ಯಾದ ಬಿಕ್ಕಟ್ಟು ಶುರುವಾಗುವ ಮುನ್ನದ ಮಟ್ಟಕ್ಕೆ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರುಕಟ್ಟೆ ಕಂಪನಿಗಳು ಮತ್ತು ಇಂಧನ ಮಾರಾಟಗಾರರು ಲಾಭ ಪಡೆಯುತ್ತಿದ್ದಾರೆ.

ಎಲ್‌ಪಿಜಿ ದರದಲ್ಲಿ ಮಾತ್ರ ನಷ್ಟವಿದೆ. ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಗಳು ನಷ್ಟ ಕಾಣುವ ಸಾಧ್ಯತೆ ಇವೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಲಾಭ ಕಾಣಬಹುದು ಎಂದು ಹೇಳಿದೆ.

ತೈಲ ದರ ನಿರಂತರ ಇಳಿಕೆಯಾದರೆ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಹೆಚ್ಚಿನ ಲಾಭ ಪಡೆಯುವ ನಿರೀಕ್ಷೆಯಿದೆ ಎಂದು ಹೇಳಿದೆ.

'ಬಾಸ್ ಸ್ಕ್ಯಾಮ್' ಸೈಬರ್ ವಂಚನೆ: ಎಚ್ಚರಿಕೆ

ನವದೆಹಲಿ: ದೊಡ್ಡದೊಡ್ಡ ಕಂಪನಿಗಳ ಸಿಇಒಗಳನ್ನು (ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು) ಗುರಿಯಾಗಿಸಿ ಸೈಬರ್ ವಂಚನೆಯ ಖೆಡ್ಡಾಕ್ಕೆ ಬೀಳಿಸಿಕೊಳ್ಳುವ ಹೊಸ ತಂತ್ರ ದೇಶದಲ್ಲಿ ಹೆಚ್ಚಾಗುತ್ತಿದೆ. ಇಂತಹ 'ಬಾಸ್ ಸ್ಕ್ಯಾಮ್'ಗಳ ಬಗ್ಗೆ ಎಚ್ಚರವಾಗಿರಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಸಲಹೆ ನೀಡಿದೆ.

ತನಿಖಾ ಸಂಸ್ಥೆಗಳು ಅಥವಾ ಅದರ ಉನ್ನತಾಧಿಕಾರಿಗಳ ಸೋಗಿನಲ್ಲಿ ವಂಚಕರು ಕಂಪನಿ ಸಿಇಒಗಳ ವಾಟ್ಸ್‌ಆ್ಯಪ್ ಖಾತೆಗಳನ್ನು ಪ್ರವೇಶಿಸಿ, ಅಧೀನ ಅಧಿಕಾರಿಗಳಿಗೆ ಸಂದೇಶಗಳನ್ನು ಕಳಿಸುವ ಮೂಲಕ ಇನ್ನೊಬ್ಬರ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾಯಿಸಿಕೊಳ್ಳುತ್ತಿದ್ದಾರೆ ಎಂದು ಎಚ್ಚರಿಸಿದೆ.

15 ಮಂದಿ ಸಜೀವ ದಹನ

ಒಂದನೇ ಪುಟದಿಂದ...

ಅಗ್ನಿಶಾಮಕ ದಳದ ಸಿಬ್ಬಂದಿ ಕಟ್ಟಡದ ಗೋಡೆಯನ್ನು ಎರಡು ಕಡೆ ಕೊರೆದು ಒಳಗೆ ಪ್ರವೇಶಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ.

'15 ಮೃತದೇಹಗಳನ್ನು ಆಸ್ಪತ್ರೆಗೆ ತರಲಾಗಿದೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಕಟ್ಟಡದಿಂದ ಜಿಗಿಯುವಾಗ ಬಿದ್ದಿದ್ದರಿಂದ ಇಬ್ಬರ ಬೆನ್ನಿಗೆ ಗಾಯಗಳಾಗಿವೆ' ಎಂದು ಲಖನೌದ ಕಿಂಗ್ ಜಾರ್ಜ್ ಮೆಡಿಕಲ್ ಯೂನಿವರ್ಸಿಟಿಯ ವೈದ್ಯಕೀಯ ಅಧೀಕ್ಷಕ ಡಾ.ಅನಿಲ್ ಅಗರವಾಲ್ ತಿಳಿಸಿದ್ದಾರೆ.

ಬೆಂಕಿ ಅನಾಹುತದ ಮಾಹಿತಿ ದೊರೆತ ತಕ್ಷಣ ಪೊಲೀಸರು ಮತ್ತು ಅಗ್ನಿಶಾಮಕ ಠಾಣೆಗಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆ ನಂತರ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ನಾಗರಿಕ ರಕ್ಷಣಾ ತಂಡಗಳೂ ರಕ್ಷಣಾ ಕಾರ್ಯಾಚರಣೆಯಲ್ಲಿ ಸೇರಿಕೊಂಡವು.

ಉತ್ತರ ಪ್ರದೇಶ ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಂಜಯ್ ಪ್ರಸಾದ್, ಡಿಜಿಪಿ ರಾಜೀವ್ ಕೃಷ್ಣ ಮತ್ತು ಲಖನೌ ಪೊಲೀಸ್ ಕಮಿಷನರ್ ಅಮರೇಂದ್ರ ಸೆಂಗರ್ ಅವರು ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಿದರು.

'ಮುಝೆ ಜಾನೆ ದೊ'

ಅಗ್ನಿ ಅವಘಡದ ಸುದ್ದಿ ತಿಳಿದು ಸಂತ್ರಸ್ತರ ಕುಟುಂಬ ಸದಸ್ಯರು ಮತ್ತು ಸಂಬಂಧಿಕರು ಸ್ಥಳಕ್ಕೆ ಧಾವಿಸಿದ್ದಾರೆ. ಒಳಗೆ ಸಿಲುಕಿದವರನ್ನು ರಕ್ಷಿಸಲು ತಮ್ಮನ್ನೂ ಕಟ್ಟಡದೊಳಗೆ ಬಿಡುವಂತೆ ಕೆಲವು ಮಹಿಳೆಯರು ಪೊಲೀಸ್ ಸಿಬ್ಬಂದಿಯನ್ನು ಬೇಡಿಕೊಂಡ ದೃಶ್ಯ ಕಂಡುಬಂತು. ಮಹಿಳೆಯೊಬ್ಬರು 'ಮುಝೆ ಜಾನೆ ದೊ ಅಪ್ನೆ ಬೇಟೆ ಕೆ ಪಾಸ್' (ನನ್ನ ಮಗನ ಬಳಿ ಹೋಗಲು ಬಿಡಿ) ಎಂದು ಪದೇ ಪದೇ ಬೇಡಿಕೊಂಡರು.

ಎಬೋಲಾ: ಕಾಂಗೊದಲ್ಲಿ 1003 ಪ್ರಕರಣ ದೃಢ

ಬುನಿಯಾ (ಕಾಂಗೊ) (ಎಪಿ): ಪೂರ್ವ ಕಾಂಗೊದಲ್ಲಿ ಎಬೋಲಾ ಪ್ರಕರಣಗಳ ಸಂಖ್ಯೆಯು 1003 ದಾಟಿದ್ದು, 254 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಡರಾತ್ರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೇ 15ರಿಂದ ಕಾಂಗೊದ ಇಟುರಿ ಪ್ರಾಂತ್ಯದಲ್ಲಿ ಸುಮಾರು 100 ಎಬೋಲಾ ಸೋಂಕಿತರು ಗುಣಮುಖರಾಗಿದ್ದಾರೆ ಎಂದು ಕಾಂಗೊ ಆರೋಗ್ಯ ಸಚಿವಾಲಯ ತಿಳಿಸಿದೆ.

'ಕಳೆದ ವಾರ ಸೋಂಕು ದೃಢಪಟ್ಟ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದಿರುವ 35,000ಕ್ಕೂ ಹೆಚ್ಚು ಜನರನ್ನು ಪತ್ತೆಹಚ್ಚಬೇಕಾಗಿದೆ. ದೃಢಪಡದ ಇನ್ನೂ ಅನೇಕ ಪ್ರಕರಣಗಳಿರಬಹುದು. ಎಬೋಲಾ ಸೋಂಕಿತರ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು' ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಬ್ರಿಟನ್ ಪ್ರಧಾನಿ ರಾಜೀನಾಮೆ ಘೋಷಣೆ

ಒಂದನೇ ಪುಟದಿಂದ...

ರಾಜೀನಾಮೆ ಘೋಷಣೆ ಬಳಿಕ ಮಾತನಾಡಿದ ಸ್ಟಾರ್ಮರ್ ಅವರು, 'ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲು ನಾನು ಸೂಕ್ತ ವ್ಯಕ್ತಿಯೇ ಎಂಬ ಪ್ರಶ್ನೆಯನ್ನು ಪಕ್ಷ ಈಗ ಕೇಳುತ್ತಿದೆ' ಎಂದು ಹೇಳುತ್ತಾ ಭಾವುಕರಾದರು.

'ಈ ಪ್ರಶ್ನೆಗೆ ಸಂಸದರು ನೀಡಿದ ಉತ್ತರವನ್ನು ನಾನು ವಿನಮ್ರವಾಗಿ ಸ್ವೀಕರಿಸಿದ್ದೇನೆ. ನಾನು ತೆಗೆದುಕೊಂಡ ಪ್ರತಿ ನಿರ್ಧಾರವೂ ದೇಶದ ಮೇಲಿನ ನನ್ನ ಪ್ರೀತಿಯ ಸಂಕೇತವಾಗಿದೆ. ಹೀಗಾಗಿಯೇ ಲೇಬರ್ ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ' ಎಂದರು.

'ರಾಜೀನಾಮೆ ನಿರ್ಧಾರದ ಬಗ್ಗೆ ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ಅವರಿಗೆ ಮಾಹಿತಿ ನೀಡಿದ್ದೇನೆ. ಅವರು ನೂತನ ಪ್ರಧಾನಿ ಆಯ್ಕೆ ಸಂಬಂಧ ಪ್ರಕ್ರಿಯೆ ಆರಂಭಿಸಲು ಲೇಬರ್ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ಸೂಚಿಸುವರು. ಜುಲೈ 9ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ಮುಂದಿನ ಸಂಸತ್ ಅಧಿವೇಶನದ ಒಳಗಾಗಿ ನೂತನ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದರು.

'ದೇಶದ ಅತಿದೊಡ್ಡ ಜವಾಬ್ದಾರಿಯನ್ನು ತ್ಯಜಿಸಿದ ಸಂದರ್ಭದಲ್ಲಿ, ಜೀವನದ ಪ್ರಮುಖ ಕೆಲಸದಲ್ಲಿ ಹೆಚ್ಚಿನ ಸಮಯವನ್ನು ಕಳೆಯಲು ಇಚ್ಛಿಸುತ್ತೇನೆ. ಬದುಕಿನ ಕಷ್ಟ, ಸುಖ ಎರಡಕ್ಕೂ ಹೆಗಲಾದ ಪತ್ನಿಗೆ ಅತ್ಯುತ್ತಮ ಪತಿಯಾಗಿ ಮತ್ತು ನನ್ನ ಮಕ್ಕಳಿಗೆ ಅತ್ಯುತ್ತಮ ತಂದೆಯಾಗಿ ಸಮಯ ಕಳೆಯುತ್ತೇನೆ' ಎಂದು ಹೇಳುತ್ತಾ ಭಾವುಕರಾದರು.

ಸ್ಟಾರ್ಮರ್ ನೇತೃತ್ವದ ಲೇಬರ್ ಪಕ್ಷವು 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಅಭೂತಪೂರ್ವ ಜಯ ಗಳಿಸಿತ್ತು. ಸ್ಟಾರ್ಮರ್ ಅವರು ಆರಂಭದಲ್ಲಿ ಭಾರಿ ಜನಪ್ರಿಯತೆ ಪಡೆದಿದ್ದರು. ಆದರೆ ತಮ್ಮ ವಿವಾದಾತ್ಮಕ ನಿರ್ಧಾರಗಳ ಕಾರಣದಿಂದ ಅವರ ಜನಪ್ರಿಯತೆ ಕುಗ್ಗಿತ್ತು.

ಆ್ಯಂಡಿ ಬರ್ನ್‌ಹಮ್ ನೂತನ ಪ್ರಧಾನಿ?

ಗ್ರೇಟರ್ ಮ್ಯಾಂಚೆಸ್ಟರ್‌ನ ಮಾಜಿ ಮೇಯರ್ ಆ್ಯಂಡಿ ಬರ್ನ್‌ಹಮ್ ಅವರು ಬ್ರಿಟನ್‌ನ ನೂತನ ಪ್ರಧಾನಿಯಾಗುವ ಸಾಧ್ಯತೆ ಇದೆ.




ಆ್ಯಂಡಿ ಬರ್ನ್‌ಹಮ್

ಪ್ರಧಾನಿ ಹುದ್ದೆಯ ರೇಸ್‌ನಲ್ಲಿದ್ದ ಮಾಜಿ ಆರೋಗ್ಯ ಕಾರ್ಯದರ್ಶಿ ವೆಸ್ ಸ್ಟ್ರೀಟಿಂಗ್ ಅವರು ಆ್ಯಂಡಿ ಬರ್ನ್‌ಹಮ್ ಅವರನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ. ಹೀಗಾಗಿ ಬರ್ನ್‌ಹಮ್ ಅವರೇ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದೆ.

'ಸ್ಟಾರ್ಮರ್ ಅವರ ರಾಜೀನಾಮೆಯು ಪರಿವರ್ತನೆಯನ್ನು ಸೂಚಿಸುತ್ತದೆ. ಈ ಪ್ರಕ್ರಿಯೆಯು ಕ್ರಮಬದ್ಧವಾಗಿ ಮತ್ತು ಜವಾಬ್ದಾರಿಯುತವಾಗಿ ನಡೆಯುವುದು ಮುಖ್ಯ. ಉತ್ತರಾಧಿಕಾರಿ ಸ್ಪರ್ಧೆಯಲ್ಲಿ ನಾನು ಮುಂಚೂಣಿಯಲ್ಲಿದ್ದೇನೆ' ಎಂದು ಬರ್ನ್‌ಹಮ್ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ದೇಶವು ಸ್ಥಿರತೆ, ಗಂಭೀರತೆ ಮತ್ತು ಪ್ರಮುಖ ವಿಷಯಗಳಿಗೆ ಹೆಚ್ಚಿನ ಗಮನವನ್ನು ನಿರೀಕ್ಷಿಸುತ್ತಿದೆ. ಜನರು ದೇಶದ ಆರ್ಥಿಕ ಬೆಳವಣಿಗೆಯನ್ನು ಬಯಸುತ್ತಿದ್ದಾರೆ. ಮುಂದಿನ ಪೀಳಿಗೆಯ ಅವಕಾಶಗಳತ್ತ ಎದುರು ನೋಡುತ್ತಿದ್ದಾರೆ. ರಾಜಕೀಯದಲ್ಲಿನ ಬದಲಾವಣೆಯು ಜನರ ಜೀವನವನ್ನು ಸುಧಾರಿಸುವ ಜವಾಬ್ದಾರಿಯಿಂದ ಸರ್ಕಾರವನ್ನು ವಿಮುಖಗೊಳಿಸಬಾರದು' ಎಂದು ಹೇಳಿದ್ದಾರೆ.

ಜುಲೈ 24ಕ್ಕೆ ಕರಾವಳಿ ತೆರೆಗೆ



ಗುರುದತ್ ಗಾಣಿಗ ನಿರ್ದೇಶನದ, ಪ್ರಜ್ವಲ್ ದೇವರಾಜ್ ಮುಖ್ಯ-ಭೂಮಿಕೆಯಲ್ಲಿರುವ 'ಕರಾವಳಿ' ಸಿನಿಮಾ ಜುಲೈ 24ರಂದು ತೆರೆಕಾಣಲಿದೆ.

ಕಳೆದ ವರ್ಷ ಇದೇ ದಿನದಂದು 'ಸು ಫ್ರಮ್ ಸೋ' ಸಿನಿಮಾ ತೆರೆಕಂಡು ಹಿಟ್ ಆಗಿತ್ತು. ಈ ವರ್ಷವೂ ಇದೇ ರೀತಿಯ ಮ್ಯಾಜಿಕ್ ನಡೆಯಲಿದೆ ಎನ್ನುವ ನಿರೀಕ್ಷೆಯಲ್ಲಿ ಚಿತ್ರತಂಡವಿದೆ.

ಸಿನಿಮಾದಲ್ಲಿ ರಾಜ್ ಬಿ.ಶೆಟ್ಟಿ, ರಮೇಶ್ ಇಂದಿರಾ, ಮಿತ್ರ, ಸಂಪದಾ, ಸುಷ್ಮಿತಾ ಭಟ್ ಸೇರಿದಂತೆ ದೊಡ್ಡ ತಾರಾಬಳಗವೇ ಇದೆ. 'ಇದುವರೆಗೂ ತೆರೆ ಮೇಲೆ ನೋಡಿರದ ಕಥೆಯನ್ನು ತರುವ ಪ್ರಾಮಾಣಿಕ ಪ್ರಯತ್ನವಿದು. ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರಿಗೆ 'ಕರಾವಳಿ' ಅದ್ಭುತ ಅನುಭವ ನೀಡಲಿದೆ' ಎನ್ನುತ್ತಾರೆ ಗುರುದತ್ ಗಾಣಿಗ.

'ಕರಾವಳಿ' ಶೀರ್ಷಿಕೆ ಹೇಳುವ ಹಾಗೆ ಅಲ್ಲಿನ ಸಂಸ್ಕೃತಿ, ಸೊಗಡಿನ ಸಿನಿಮಾ. ಕರಾವಳಿ ಸುತ್ತಮುತ್ತ ಚಿತ್ರೀಕರಣ ನಡೆದಿದ್ದು, ಕಂಬಳ, ಯಕ್ಷಗಾನ ಈ ಸಿನಿಮಾದ ಹೈಲೈಟ್ಸ್. ಪ್ರಜ್ವಲ್ ದೇವರಾಜ್‌ಗೆ ನಾಯಕಿಯಾಗಿ ಸಂಪದಾ ನಟಿಸಿದ್ದಾರೆ. ಮನುಷ್ಯ ಮತ್ತು ಪ್ರಾಣಿ ಮಧ್ಯೆ ನಡೆಯುವ ಸಂಘರ್ಷದ ಕಥೆ ಇದಾಗಿದೆ. ರಾಜ್ ಬಿ.ಶೆಟ್ಟಿ 'ಮಾವೀರ'ನಾಗಿ ಕಾಣಿಸಿಕೊಳ್ಳಲಿದ್ದಾರೆ. ಕರಾವಳಿಗೇ ದೊಡ್ಡವರು ಎಂದು ಗುರುತಿಸುವ, ಕಂಬಳ ಪ್ರಪಂಚವೇ ಗೌರವಿಸುವ ಒಂದು ಪಾತ್ರಕ್ಕೆ ರಮೇಶ್ ಇಂದಿರಾ ಬಣ್ಣಹಚ್ಚಿದ್ದಾರೆ.

ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ಈ ಸಿನಿಮಾ ಮೂಡಿಬಂದಿದ್ದು, ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅಭಿಮನ್ಯು ಸದಾನಂದನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಕೆವಿಎನ್ ಪ್ರೊಡಕ್ಷನ್ಸ್ 'ಕರಾವಳಿ' ಸಿನಿಮಾವನ್ನು ಪ್ರಸ್ತುತಪಡಿಸುವುದರ ಜೊತೆಗೆ ವಿತರಣೆಯನ್ನೂ ಮಾಡುತ್ತಿದೆ.

ಆಗಸ್ಟ್ 7ಕ್ಕೆ ತೆರೆಗೆ 'ಅಯೋಗ್ಯ–2'



ರಚಿತಾ ರಾಮ್, ಸತೀಶ್ ನೀನಾಸಂ

'ಅಯೋಗ್ಯ', 'ಮದಗಜ' ಸಿನಿಮಾ ಖ್ಯಾತಿಯ ಎಸ್.ಮಹೇಶ್ ಕುಮಾರ್ ನಿರ್ದೇಶನದ, ಸತೀಶ್ ನೀನಾಸಂ ಹಾಗೂ ರಚಿತಾ ರಾಮ್ ಮುಖ್ಯಭೂಮಿಕೆಯಲ್ಲಿರುವ 'ಅಯೋಗ್ಯ-2' ಸಿನಿಮಾ ಆ.7ರಂದು ತೆರೆಗೆ ಬರಲಿದೆ.

ಸಿನಿಮಾದ ಆಡಿಯೊ ಹಕ್ಕುಗಳು ₹2 ಕೋಟಿಗೆ ಮಾರಾಟವಾದ ಸುದ್ದಿಯನ್ನು ನೀಡಿದ್ದ ಚಿತ್ರತಂಡ ಇದೀಗ ಹಾಡೊಂದನ್ನು ಬಿಡುಗಡೆ ಮಾಡಿದೆ. 'ಮುದ್ದು ಮುದ್ದು ಪುಟ್ಟಲಕ್ಷ್ಮಿ..' ಹಾಡನ್ನು ಚೇತನ್ ಕುಮಾರ್ ಬರೆದಿದ್ದು, ಸಿದ್ ಶ್ರೀರಾಮ್ ಹಾಗೂ ಪೃಥ್ವಿ ಭಟ್ ದನಿಯಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತ ಹಾಡಿಗಿದೆ.

'ಎಂಟು ವರ್ಷದ ಬಳಿಕ ಸಿನಿಮಾದ ಸೀಕ್ವೆಲ್ ಬರುತ್ತಿದೆ. ಮೊದಲ ಭಾಗಕ್ಕಿಂತ ಎರಡನೇ ಭಾಗದಲ್ಲಿ ಹೆಚ್ಚಿನ ಮನರಂಜನೆ ಇರಲಿದೆ' ಎನ್ನುತ್ತಾ ಶೂಟಿಂಗ್ ಸಂದರ್ಭದಲ್ಲಿನ ಘಟನೆಗಳನ್ನು ಮಹೇಶ್ ಕುಮಾರ್ ಮೆಲುಕು ಹಾಕಿದರು. ಚಿತ್ರಕ್ಕೆ ಮಾಸ್ತಿ ಅವರು ಸಂಭಾಷಣೆ ಬರೆದಿದ್ದು, ರವಿಶಂಕರ್, ಸಾಧುಕೋಕಿಲ, ತಬಲಾ ನಾಣಿ, ಸುಂದರ್‌ರಾಜ್, ಶಿವರಾಜ್ ಕೆ.ಆರ್.ಪೇಟೆ, ಮಂಜು ಪಾವಗಡ, ಕಿರಣ್ ನಾಯ್ಕ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಸಿನಿಮಾವನ್ನು ಎಂ.ಮುನೇಗೌಡ ಅವರು ನಿರ್ಮಾಣ ಮಾಡಿದ್ದಾರೆ.

'ರೋಲೆಕ್ಸ್'ನಲ್ಲಿ ವಿನೋದ್ ಪ್ರಭಾಕರ್



ಕೋಮಲ್, ಸೋನಲ್

ಕೋಮಲ್ ಕುಮಾರ್ ಹಾಗೂ ಸೋನಲ್ ಮೊಂತೆರೋ ಜೋಡಿಯಾಗಿ ನಟಿಸಿರುವ 'ರೋಲೆಕ್ಸ್' ಸಿನಿಮಾದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ಸಿನಿಮಾದಲ್ಲಿ ವಿಶೇಷ ಪಾತ್ರಕ್ಕೆ ವಿನೋದ್ ಪ್ರಭಾಕರ್ ಬಣ್ಣಹಚ್ಚಿದ್ದಾರೆ.

ಅಂಬಟಿ ಮಧು ಮೋಹನಕೃಷ್ಣ ನಿರ್ಮಾಣದ ಈ ಚಿತ್ರವನ್ನು ಶ್ರೀನಿವಾಸ್ ಮಂಡ್ಯ ನಿರ್ದೇಶಿಸಿದ್ದಾರೆ. ಈ ಹಿಂದೆ 'ಬಿಲ್‌ಗೇಟ್ಸ್' ಸಿನಿಮಾವನ್ನು ಶ್ರೀನಿವಾಸ್ ನಿರ್ದೇಶಿಸಿದ್ದರು. 'ರೋಲೆಕ್ಸ್'ನಲ್ಲಿ ಭಿನ್ನವಾದ ಲುಕ್‌ನಲ್ಲಿ ಕೋಮಲ್ ಕಾಣಿಸಿಕೊಂಡಿದ್ದಾರೆ. ಈವರೆಗೂ ಮಾಡಿರದ ಪಾತ್ರದಲ್ಲಿ ವಿನೋದ್ ಪ್ರಭಾಕರ್ ಅವರು ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಕಾಮಿಡಿಯೊಂದಿಗೆ ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರದ ಚಿತ್ರೀಕರಣ ಬಹುತೇಕ ಪೂರ್ಣವಾಗಿದೆ. ಅಚ್ಯುತ್‌ಕುಮಾರ್, ನವೀನ್ ಡಿ.ಪಡೀಲ್, ಅರುಣ್ ಬಾಲರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



ವಿನೋದ್ ಪ್ರಭಾಕರ್

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ. ವಿ.ನಾಗೇಂದ್ರಪ್ರಸಾದ್, ಕವಿರಾಜ್, ರಾಜೇಶ್ ವರ್ಮ ಹಾಗೂ ಕಿನ್ನಾಳ್ ರಾಜ್ ಗೀತರಚನೆ ಮಾಡಿದ್ದಾರೆ. ರಾಕೇಶ್ ಸಿ.ತಿಲಕ್ ಛಾಯಾಚಿತ್ರಗ್ರಹಣ, ಅರವಿಂದ್ ರಾಜ್ ಸಂಕಲನ, ಯೋಗಾನಂದ್ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ವೆಂಕಟೇಶ್‌ಗೆ ಅನಿಲ್ ರವಿಪುಡಿ ಆ್ಯಕ್ಷನ್ ಕಟ್



ಕೀರ್ತಿ, ವೆಂಕಟೇಶ್, ಅನಿಲ್, ನಂದಮೂರಿ ಕಲ್ಯಾಣ್ ರಾಮ್, ಕೃತಿ ಶೆಟ್ಟಿ

ಅನಿಲ್ ರವಿಪುಡಿ ನಿರ್ದೇಶನದ ಮತ್ತೊಂದು ಮಲ್ಟಿಸ್ಟಾರರ್ ಸಿನಿಮಾ ಹೈದರಾಬಾದ್‌ನಲ್ಲಿ ಸೆಟ್ಟೇರಿದೆ. ಸಿನಿಮಾದಲ್ಲಿ ವಿಕ್ಟರಿ ವೆಂಕಟೇಶ್, ನಂದಮೂರಿ ಕಲ್ಯಾಣ್ ರಾಮ್ ನಾಯಕರಾಗಿ ನಟಿಸುತ್ತಿದ್ದು, ಕೀರ್ತಿ ಸುರೇಶ್ ಮತ್ತು ಕೃತಿ ಶೆಟ್ಟಿ ಅವರಿಗೆ ಜೋಡಿಯಾಗಿದ್ದಾರೆ.

ಮೊದಲ ದೃಶ್ಯಕ್ಕೆ ನಿರ್ಮಾಪಕ ಅಲ್ಲು ಅರವಿಂದ್ ಕ್ಲ್ಯಾಪ್ ಮಾಡಿದರು. ಶೈನ್ ಸ್ಕ್ರೀನ್ಸ್ ಬ್ಯಾನರ್ ಅಡಿಯಲ್ಲಿ ಸಾಹು ಗರಪತಿ ನಿರ್ಮಿಸುತ್ತಿರುವ ಈ ಚಿತ್ರವನ್ನು ಸುರೇಶ್ ಪ್ರೊಡಕ್ಷನ್ಸ್, ಅರ್ಚನಾ ಮತ್ತು ಜೀ ಸ್ಟುಡಿಯೋಸ್ ಪ್ರಸ್ತುತಪಡಿಸುತ್ತಿವೆ. ಇದೊಂದು ಪಕ್ಕಾ ಕಾಮಿಡಿ ಎಂಟರ್‌ಟೇನರ್ ಸಿನಿಮಾ. 2027ರ ಸಂಕ್ರಾಂತಿಗೆ ಈ ಚಿತ್ರ ಬಿಡುಗಡೆಯಾಗಲಿದೆ. ಅನುಭವಿ ತಾಂತ್ರಿಕ ವರ್ಗ ಚಿತ್ರದಲ್ಲಿದ್ದು, ಜಿವಿ ಪ್ರಕಾಶ್ ಕುಮಾರ್ ಸಂಗೀತ ಒದಗಿಸಲಿದ್ದಾರೆ. ಸಮೀರ್ ರೆಡ್ಡಿ ಛಾಯಾಚಿತ್ರಗ್ರಹಣ, ತಮ್ಮಿರಾಜು ಸಂಕಲನ, ಎ.ಎಸ್.ಪ್ರಕಾಶ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಸದ್ಯದಲ್ಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ.

6 ಬಂಡಾಯ ಸಂಸದರು ಶಿಂದೆ ಬಣಕ್ಕೆ

'ಆಪರೇಷನ್ ಟೈಗರ್' ಯಶಸ್ವಿ: ಶಿಂದೆ • ಉದ್ಧವ್ ಬಣದ ಸಂಸದರ ಸಂಖ್ಯೆ ಕುಸಿತ

ಮುಂಬೈ(ಪಿಟಿಐ): ಶಿವಸೇನಾದ ಉದ್ಧವ್ ಠಾಕ್ರೆ ಬಣದ ಆರು ಬಂಡಾಯ ಸಂಸದರು ಸೋಮವಾರ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಶಿವಸೇನಾಕ್ಕೆ ಸೇರಿದ್ದಾರೆ.

ಸಂಸದರಾದ ನಾಗೇಶ್ ಬಾಪುರಾವ್ ಪಾಟೀಲ್ ಅಷ್ಟೀಕರ್, ಸಂಜಯ್ ದೇಶ್‌ಮುಖ್, ಸಂಜಯ್ ಜಾಧವ್, ಸಂಜಯ್ ಡಿ. ಪಾಟೀಲ್, ಓಂಪ್ರಕಾಶ್ ರಾಜೆ ನಿಂಬಾಳ್ಕರ್, ಬಾಬಾಸಾಹೇಬ್ ವಾಗ್ಚುರೆ ಅವರನ್ನು ಶಿಂದೆ ಮತ್ತು ಹಿರಿಯ ನಾಯಕರು ಪಕ್ಷಕ್ಕೆ ಬರಮಾಡಿಕೊಂಡರು.

ಈ ಮೂಲಕ ಶಿವಸೇನಾದ ಉದ್ಧವ್ ಬಣದ ಸಂಸದರ ಸಂಖ್ಯೆ ಮೂರಕ್ಕೆ ಕುಸಿದಿದೆ. ಬಿಜೆಪಿ ಮತ್ತು ಎನ್‌ಸಿಪಿ (ಸುನೇತ್ರಾ ಬಣ)ಯನ್ನು ಒಳಗೊಂಡಿರುವ ಮಹಾಯುತಿ ಮೈತ್ರಿಕೂಟದಲ್ಲಿ ಶಿಂದೆ ಬಣದ ಬಲ ಹೆಚ್ಚಿದೆ.

ಕಳೆದ ವಾರ ದೆಹಲಿಯಲ್ಲಿ ನಡೆದ ಪಕ್ಷದ(ಯುಬಿಟಿ) ಸಂಸದೀಯ ಸಭೆಗೆ ಗೈರಾಗಿ, ವಿಪ್ ಉಲ್ಲಂಘಿಸುವ ಮೂಲಕ ಈ ಆರು ಮಂದಿ ಬಂಡಾಯದ ಮುನ್ಸೂಚನೆಯನ್ನು ನೀಡಿದ್ದರು.

ದೇಶದ್ರೋಹಿಗಳಿಗೆ ಜನ್ಮ ನೀಡಿದ ಶಿಂದೆ

'ಏಕನಾಥ್ ಶಿಂದೆ ಅವರು ಸಿಸೇರಿಯನ್‌ಗೆ ಒಳಗಾಗಿ, ಆರು ದೇಶದ್ರೋಹಿಗಳಿಗೆ ಜನ್ಮ ನೀಡಿದ್ದಾರೆ' ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಅವರು ಸೋಮವಾರ ಟೀಕಿಸಿದರು.

ಕೆನ್ಯಾದ ಮಹಿಳೆಯೊಬ್ಬರು ಐದು ಮಕ್ಕಳಿಗೆ ಜನ್ಮನೀಡುವ ಮೂಲಕ ದಾಖಲೆ ಬರೆದಿದ್ದರು. ಆದರೆ ಶಿಂದೆ ಅವರ ಅಧಿಕೃತ ನಿವಾಸ ನಂದನವನದಲ್ಲಿ ಆರು ದೇಶದ್ರೋಹಿಗಳ ತೊಟ್ಟಿಲುಗಳು ತೂಗುತ್ತಿವೆ ಎಂದು ಹೇಳಿದರು.



ಆರು ಬಂಡಾಯ ಸಂಸದರನ್ನು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ತಮ್ಮ ಬಣಕ್ಕೆ ಬರಮಾಡಿಕೊಂಡರು — ಪಿಟಿಐ ಚಿತ್ರ

ಸುದ್ದಿಗಾರರೊಂದಿಗೆ ಮಾತನಾಡಿದ ಶಿಂದೆ ಅವರು, 'ಆಪರೇಷನ್ ಟೈಗರ್' ಪೂರ್ಣಗೊಂಡಿದೆ ಮತ್ತು ಯಶಸ್ವಿಯಾಗಿದೆ' ಎಂದು ಹೇಳಿದರು.

ಪಕ್ಷ ಸೇರ್ಪಡೆಗೊಂಡ ಆರು ಸಂಸದರು ಧುರಂಧರರು ಎಂದು ಉಲ್ಲೇಖಿಸಿದ ಶಿಂದೆ, 'ನನ್ನ ಕಾರ್ಯಾಚರಣೆಯು ಗುರಿ ತಪ್ಪುವುದಿಲ್ಲ. ನಮ್ಮ ಶಿವಸೇನಾ ಈಗ ಮಹಾರಾಷ್ಟ್ರದ ಎರಡನೇ ದೊಡ್ಡ ಸಂಸದೀಯ ಪಕ್ಷವಾಗಿದೆ' ಎಂದು ಹೇಳಿದರು.

'ಬಾಳಾ ಸಾಹೇಬ್ ಠಾಕ್ರೆ ಅವರ ವಿಚಾರಗಳನ್ನು ಅನುಸರಿಸಿ ಆರು ಸಂಸದರು ಮೂಲ ಶಿವಸೇನಾಗೆ ಸೇರಿದ್ದಾರೆ. ಶಿವಸೇನೆಯನ್ನು ಉಳಿಸುವ ಸಲುವಾಗಿ ನಾಲ್ಕು ವರ್ಷಗಳ ಹಿಂದೆ ನಾನು ದೃಢವಾದ ಹೆಜ್ಜೆಯನ್ನು ಇಟ್ಟಿದ್ದೆ ಮತ್ತು ಈಗ 'ಸಿಕ್ಸರ್' ಬಾರಿಸಿದ್ದೇನೆ. ಇದೀಗ ಎರಡನೇ ಹಂತದಲ್ಲಿ ಶಿವಸೇನಾ ವಿಸ್ತಾರಗೊಂಡಿದೆ' ಎಂದರು.

'2029ರ ಲೋಕಸಭಾ ಚುನಾವಣೆಯಲ್ಲಿ ಎಲ್ಲರೂ ಶಿವಸೇನಾ ಚಿಹ್ನೆಯಿಂದಲೇ ಸ್ಪರ್ಧಿಸಲಿದ್ದಾರೆ ಮತ್ತು ಜಯಶಾಲಿಗಳಾಗಲಿದ್ದಾರೆ' ಎಂದರು.

ಠಾಕ್ರೆ ಬಣದ ಸಂಸದರನ್ನು ಪಕ್ಷಾಂತರ ಮಾಡಿಸುವ ಪ್ರಕ್ರಿಯೆಯನ್ನು 'ಆಪರೇಷನ್ ಟೈಗರ್' ಎಂದು ಕರೆಯಲಾಗಿದೆ. 2022 ಜೂನ್‌ನಲ್ಲಿ ಶಿಂದೆ ನೇತೃತ್ವದಲ್ಲಿ ಹಲವು ಶಾಸಕರು ಶಿವಸೇನಾದಿಂದ ಹೊರಬಂದು ಪ್ರತ್ಯೇಕ ಬಣ ಕಟ್ಟಿಕೊಂಡಿದ್ದರು.

3ನೇ ದಿನವೂ ಧರಣಿ • ಪ್ರಧಾನ್ ರಾಜೀನಾಮೆಗೆ ಆಗ್ರಹ

ಪ್ರತಿಭಟನಾ ಸ್ಥಳದಲ್ಲಿ ಗ್ರಂಥಾಲಯ

ನವದೆಹಲಿ (ಪಿಟಿಐ): ನೀಟ್–ಯುಜಿ ಪರೀಕ್ಷಾ ಅಕ್ರಮವನ್ನು ಖಂಡಿಸಿ ಕಾಕ್ರೋಚ್ ಜನತಾ ಪಾರ್ಟಿಯು (ಸಿಜೆಪಿ) ಇಲ್ಲಿನ ಜಂತರ್ ಮಂತರ್‌ನಲ್ಲಿ ಕಳೆದ ಮೂರು ದಿನಗಳಿಂದ ನಡೆಸುತ್ತಿರುವ ಪ್ರತಿಭಟನಾ ಸ್ಥಳದಲ್ಲಿ 'ಉಚಿತ ಗ್ರಂಥಾಲಯ'ವನ್ನು ಸ್ಥಾಪಿಸಿದ್ದು, ಗಮನ ಸೆಳೆಯುತ್ತಿದೆ.

ದೆಹಲಿ ವಿಶ್ವವಿದ್ಯಾಲಯದ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟವು (ಎಐಎಸ್‌ಎಫ್) ಪ್ರತಿಭಟನಾ ಸ್ಥಳದ ಮೂಲೆಯೊಂದರಲ್ಲಿ ಗ್ರಂಥಾಲಯವನ್ನು ಸ್ಥಾಪಿಸಿದೆ. ಸಿಜೆಪಿ ಬೆಂಬಲಿಗರು, ವಿದ್ಯಾರ್ಥಿಗಳು ತಮ್ಮ ಸಂಗ್ರಹದಲ್ಲಿದ್ದ ಸುಮಾರು 100 ಪುಸ್ತಕಗಳನ್ನು ಈ ಗ್ರಂಥಾಲಯಕ್ಕೆ ಕೊಡುಗೆ ನೀಡಿದ್ದಾರೆ.

ಗ್ರಂಥಾಲಯದ ಸುತ್ತಲೂ ಅನೇಕ ಪ್ರತಿಭಟನಕಾರರು ಜಮಾಯಿಸಿದ್ದು, ಜೀವನಚರಿತ್ರೆ, ಮಾನವಶಾಸ್ತ್ರ, ಇತಿಹಾಸ, ಕಾನೂನು ಹಾಗೂ ನಾಗರಿಕ ಹಕ್ಕುಗಳ ಕುರಿತ ಪುಸ್ತಕಗಳನ್ನು ಓದುವುದರಲ್ಲಿ ಮಗ್ನರಾಗಿದ್ದರು.

'ಶಿಕ್ಷಣದೊಂದಿಗೆ ಶಿಕ್ಷಣಕ್ಕಾಗಿ ಹೋರಾಟ' ಅಭಿಯಾನದ ಭಾಗವಾಗಿ ಗ್ರಂಥಾಲಯವನ್ನು ಸ್ಥಾಪಿಸಿದ್ದೇವೆ. ಈ ಪ್ರತಿಭಟನೆಯು ಇತರ ಪ್ರತಿಭಟನೆಗಳಿಗಿಂತ ಎಷ್ಟು ಭಿನ್ನವಾಗಿದೆ ಎಂಬುದನ್ನು ಇದು ತೋರಿಸುತ್ತದೆ' ಎಂದು ಎಐಎಸ್‌ಎಫ್ ಸದಸ್ಯ ದೇವಾಂಗ್ ಅನಿಕೇತ್ ತಿಳಿಸಿದ್ದಾರೆ.



ನವದೆಹಲಿಯ ಜಂತರ್ ಮಂತರ್‌ನಲ್ಲಿ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ತಮ್ಮ ಬೆಂಬಲಿಗರೊಂದಿಗೆ ಸೋಮವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ಭ್ರಷ್ಟ ಶಿಕ್ಷಣ ವ್ಯವಸ್ಥೆಯ ವಿರುದ್ಧ ಹೋರಾಡಲು ಸಾಕ್ಷರತೆ ಮತ್ತು ಜಾಗೃತಿ ಮಾತ್ರ ಏಕೈಕ ಮಾರ್ಗವಾಗಿದೆ. ಈ ಪುಸ್ತಕಗಳು ನಮ್ಮ ನಾಗರಿಕ ಹಕ್ಕುಗಳು, ದೇಶದ ಇತಿಹಾಸ ಮತ್ತು ಅದರ ಪ್ರಸ್ತುತ ಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಿವೆ' ಎಂದು ಹೇಳಿದ್ದಾರೆ.

'ಈ ಪುಸ್ತಕಗಳು ಶಾಂತಿಯುತ ಪ್ರತಿಭಟನೆಯನ್ನು ಬಿಂಬಿಸುತ್ತದೆ. ಪ್ರತಿಭಟನೆ ಯಲ್ಲಿ ಭಾಗವಹಿಸಿದ್ದ ಅನೇಕ ಯುವಕರು ಇಲ್ಲಿರುವ ಕೃತಿಗಳನ್ನು ಓದುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದ್ದಾರೆ. ಸ್ಥಳದಲ್ಲಿ ಪೊಲೀಸ್ ಬಿಗಿಭದ್ರತೆ ಕಲ್ಪಿಸಲಾಗಿದೆ.

ಸಿಬಿಎಸ್‌ಇ 12ನೇ ತರಗತಿ ಪರಿಷ್ಕೃತ ಅಂಕಪಟ್ಟಿ ಲಭ್ಯ

ನವದೆಹಲಿ: ಮರುಪರಿಶೀಲನೆ ಅಥವಾ ಮರುಮೌಲ್ಯಮಾಪನದ ನಂತರ ಅಂಕಗಳಲ್ಲಿ ಬದಲಾವಣೆಯಾಗಿರುವ 12ನೇ ತರಗತಿ ವಿದ್ಯಾರ್ಥಿಗಳ ಭೌತಿಕ ಅಂಕಪಟ್ಟಿಯು ಸಿಬಿಎಸ್‌ಇ ಪ್ರಾದೇಶಿಕ ಕಚೇರಿಗಳಲ್ಲಿ ಲಭ್ಯವಾಗಲಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪರಿಶೀಲನೆ ಅಥವಾ ಮರುಮೌಲ್ಯಮಾಪನದ ನಂತರ 12ನೇ ತರಗತಿಯ ಅಂಕಗಳು ಬದಲಾದ ವಿದ್ಯಾರ್ಥಿಗಳ ಭೌತಿಕ ಅಂಕಪಟ್ಟಿಗಳನ್ನು ಸಿಬಿಎಸ್‌ಇಯ ಪ್ರಾದೇಶಿಕ ಕಚೇರಿಗಳಲ್ಲಿ ಸಕಾಲದಲ್ಲಿ ಲಭ್ಯವಾಗುವಂತೆ ಮಾಡಲಾಗುವುದು ಎಂದು ಮೂಲಗಳು ಸೋಮವಾರ ತಿಳಿಸಿವೆ.

ಹೊಸ ಅಂಕಪಟ್ಟಿಯನ್ನು ಪಡೆಯುವ ಮೊದಲು ಅಭ್ಯರ್ಥಿಗಳು ತಮ್ಮ ಹಳೆಯ ಮೂಲ ಅಂಕಪಟ್ಟಿಯನ್ನು ಮರಳಿ ಸಲ್ಲಿಸುವುದು ಕಡ್ಡಾಯವಾಗಿದೆ.

ವಿದ್ಯಾರ್ಥಿಗಳಿಗೆ ತಕ್ಷಣವೇ ಅಂಕಪಟ್ಟಿಯ ಅಗತ್ಯವಿದ್ದರೆ, ಅವರು ಡಿಜಿಲಾಕರ್ ಆ್ಯಪ್‌ನಲ್ಲಿ ಲಭ್ಯವಿರುವ ಡಿಜಿಟಲ್ ಅಂಕಪಟ್ಟಿಯನ್ನು ಬಳಸಿಕೊಳ್ಳಬಹುದು. ಈ ನವೀಕೃತ ಡಿಜಿಟಲ್ ಅಂಕಪಟ್ಟಿಯು ಎಲ್ಲಾ ರೀತಿಯ ಉನ್ನತ ಶಿಕ್ಷಣದ ಪ್ರವೇಶಾತಿ, ಇತರೆ ಅಧಿಕೃತ ಉದ್ದೇಶಗಳಿಗೂ ಸಂಪೂರ್ಣವಾಗಿ ಮಾನ್ಯವಾಗಿರುತ್ತದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ.

ಸಿಬಿಎಸ್‌ಇ ಭಾನುವಾರವಷ್ಟೇ 12ನೇ ತರಗತಿಯ ಮರುಮೌಲ್ಯಮಾಪನ ಫಲಿತಾಂಶಗಳನ್ನು ಪ್ರಕಟಿಸಿದೆ. ಅರ್ಜಿ ಸಲ್ಲಿಸಿದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇಕಡ 87ಕ್ಕಿಂತ ಹೆಚ್ಚು ಅಭ್ಯರ್ಥಿಗಳ ಫಲಿತಾಂಶವನ್ನು ಮೊದಲ ಹಂತದಲ್ಲೇ ಬಿಡುಗಡೆ ಮಾಡಲಾಗಿದೆ. ಉಳಿದವರ ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಸಿಬಿಎಸ್‌ಇ ಹೇಳಿದೆ.

'ಸಿಬಿಎಸ್‌ಇ ಪರೀಕ್ಷೆ ರದ್ದು: ಮೌಲ್ಯಮಾಪನಕ್ಕೆ ಹೊಸ ನೀತಿ'

ಅಮೆರಿಕ– ಇರಾನ್ ಯುದ್ಧದ ಕಾರಣಕ್ಕೆ ಕೊಲ್ಲಿ ರಾಷ್ಟ್ರಗಳಲ್ಲಿ 12ನೇ ತರಗತಿ ಪರೀಕ್ಷೆ ರದ್ದಾಗಿದ್ದರಿಂದ ತೊಂದರೆಗೆ ಒಳಗಾದ ಖಾಸಗಿ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಸಿಬಿಎಸ್‌ಇ ಹೊಸ ನೀತಿಯನ್ನು ರೂಪಿಸಿದೆ ಎಂದು ಕೇಂದ್ರ ಸರ್ಕಾರವು, ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಎಸ್.ವಿ.ಎನ್. ಭಟ್ಟಿ, ವಿಪುಲ್ ಎಂ. ಪಂಚೋಲಿ ಅವರಿದ್ದ ಪೀಠದ ಮುಂದೆ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಸಿಬಿಎಸ್‌ಇ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ವಿದ್ಯಾರ್ಥಿಗಳ ಕಳವಳವನ್ನು ನಿವಾರಿಸಲು ಹೊಸದಾಗಿ ಅಖಿಲ ಭಾರತ ನೀತಿಯೊಂದನ್ನು ರೂಪಿಸಲಾಗಿದೆ' ಎಂದರು.

'ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಪಡೆದ ಅಂಕದ ಶೇ 40ರಷ್ಟು ಹಾಗೂ ಕೊನೆಯದಾಗಿ ಬರೆದ 12ನೇ ತರಗತಿ ಪರೀಕ್ಷೆಯ ಅಂಕಗಳ ಶೇ 60ರಷ್ಟು ಪರಿಗಣಿಸಿ, ಪರೀಕ್ಷೆ ಬರೆಯಲು ಸಾಧ್ಯವಾಗದ ವಿಷಯಗಳಿಗೆ ಮೌಲ್ಯಮಾಪನ ಮಾಡಲಾಗುತ್ತದೆ' ಎಂದು ಅವರು ತಿಳಿಸಿದರು.

ರಾಮ ಮಂದಿರ: ಕೇಜ್ರಿವಾಲ್ ಭೇಟಿ 26ರಂದು

ನವದೆಹಲಿ (ಪಿಟಿಐ): ಅಯೋಧ್ಯೆಯ ರಾಮಮಂದಿರದಲ್ಲಿ ಹಣ ದುರುಪಯೋಗ ನಡೆದಿದೆ ಎಂಬ ಆರೋಪ– ಪ್ರತ್ಯಾರೋಪಗಳು ತೀವ್ರವಾಗಿರುವ ಬೆನ್ನಲ್ಲೇ, ಜೂನ್ 26ರಂದು ದೇವಸ್ಥಾನಕ್ಕೆ ಭೇಟಿ ನೀಡುವುದಾಗಿ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಸೋಮವಾರ ತಿಳಿಸಿದ್ದಾರೆ.

'ಸಿಬಿಐ ನೇತೃತ್ವದಲ್ಲಿ ತನಿಖೆ ನಡೆಯಲಿ'

ನವದೆಹಲಿ (ಪಿಟಿಐ): ಅಯೋಧ್ಯೆಯ ರಾಮಮಂದಿರದಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಿಸಬೇಕು ಹಾಗೂ ಕಾಲ ಮಿತಿಯೊಳಗೆ ತನಿಖೆ ಪೂರ್ಣಗೊಳಿಸಬೇಕು ಎಂದು ಕೋರಿ ವಕೀಲರಿಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ಅರ್ಜಿ ಸಲ್ಲಿಸಿದ್ದಾರೆ.

'ಹಣಕಾಸಿನ ಅಕ್ರಮ ಮತ್ತು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ವ್ಯವಹಾರಗಳು– ಆಡಳಿತಕ್ಕೆ ಸಂಬಂಧಿಸಿದ ಅಕ್ರಮಗಳ ಆರೋಪಗಳ ಕುರಿತು ಸಿಬಿಐ ನೇತೃತ್ವದಲ್ಲಿ ಬಹುಶಿಸ್ತೀಯ ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ಮತ್ತು ಲಕ್ಷಾಂತರ ಭಕ್ತರು, ದಾನಿಗಳ ನಂಬಿಕೆಯನ್ನು ಉಳಿಸಿಕೊಳ್ಳುವಂತಹ ಲೆಕ್ಕ ಪರಿಶೋಧನೆ ಮತ್ತು ಕಾರ್ಯವಿಧಾನಗಳನ್ನು ರೂಪಿಸಬೇಕು ಎಂಬುದಾಗಿ ಕೇಂದ್ರ ಸರ್ಕಾರ, ಉತ್ತರ ಪ್ರದೇಶ ಸರ್ಕಾರ ಹಾಗೂ ಟ್ರಸ್ಟ್‌ಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರಾದ ಅಜಯ್ ಕುಮಾರ್ ರಾಯ್ ಮತ್ತು ದಿನೇಶ್ ಕುಮಾರ್ ಯಾದವ್ ಕೋರಿದ್ದಾರೆ.

'ಅಕ್ರಮಗಳ ಕುರಿತ ವರದಿಗಳು, ಅಯೋಧ್ಯೆಯ ವೈಭವದ ಮರುಸ್ಥಾಪನೆಗೆ ಶ್ರಮಿಸಿದ ಜನರಲ್ಲಿ ತೀವ್ರ ಕಳವಳವನ್ನು ಉಂಟುಮಾಡಿವೆ. ಇದು ನಂಬಿಕೆಗೆ ಸಂಬಂಧಿಸಿದ ವಿಚಾರವಾಗಿದ್ದು, ತನಿಖಾ ತಂಡವು ಸಾರ್ವಜನಿಕರಲ್ಲಿ ಭರವಸೆಯನ್ನು ಮೂಡಿಸುವಂತಿರಬೇಕು' ಎಂದು ಒತ್ತಾಯಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದಿರುವ ವಿಡಿಯೊ ನಕಲಿ: ಎನ್‌ಟಿಎ

'ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ'

ನವದೆಹಲಿ (ಪಿಟಿಐ): 'ನೀಟ್–ಯುಜಿ ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಹರಡಲಾಗುತ್ತಿದ್ದು, ಯಾರೂ ವದಂತಿಗಳಿಗೆ ಕಿವಿಗೊಡಬೇಡಿ' ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಸೋಮವಾರ ತಿಳಿಸಿದೆ.

'ಬಿಗಿ ಭದ್ರತೆಯಲ್ಲಿ ನೀಟ್ ಮರು ಪರೀಕ್ಷೆಯನ್ನು ಭಾನುವಾರ ಯಶಸ್ವಿಯಾಗಿ ನಡೆಸಲಾಗಿದೆ' ಎಂದು 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದೆ.

'ನೀಟ್–ಯುಜಿ ಮರುಪರೀಕ್ಷೆ 2026ರ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗುತ್ತಿರುವ ವಿಡಿಯೊ ಎನ್‌ಟಿಎ ಗಮನಕ್ಕೆ ಬಂದಿದೆ. ನಕಲಿ ವಿಡಿಯೊ ಅದಾಗಿದ್ದು, ಅದರಲ್ಲಿ ಸುಳ್ಳು ಮಾಹಿತಿ ನೀಡಲಾಗಿದೆ' ಎಂದಿದೆ.

'ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸಲು ಇಂತಹ ವಿಡಿಯೊಗಳನ್ನು ಸೃಷ್ಟಿಸಿ, ಪ್ರಸಾರ ಮಾಡುವುದು 'ಗಂಭೀರ ಅಪರಾಧ'ವಾಗಿದೆ. ಸುಳ್ಳು ಸುದ್ದಿ ಹರಡಿದವರ ವಿರುದ್ಧ ಕಾನೂನು ಜಾರಿ ಸಂಸ್ಥೆಗಳ ನೆರವಿನೊಂದಿಗೆ ಕ್ರಮ ಕೈಗೊಳ್ಳಲಾಗುವುದು' ಎಂದಿದೆ.

ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರು ನೀಟ್ ಪರೀಕ್ಷೆ ಕುರಿತ ಮಾಹಿತಿಗೆ ಅಧಿಕೃತ ವೆಬ್‌ಸೈಟ್ ಮತ್ತು ಏಜೆನ್ಸಿಯ ಅಧಿಕೃತ ಸಾಮಾಜಿಕ ಮಾಧ್ಯಮ ಹ್ಯಾಂಡಲ್‌ಗಳನ್ನು ಮಾತ್ರ ಅವಲಂಬಿಸುವಂತೆ ಎನ್‌ಟಿಎ ಮನವಿ ಮಾಡಿದೆ.

'ನೀಟ್ ಪರೀಕ್ಷೆ ಬರೆದ ನಮ್ಮ 20 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪಾರದರ್ಶಕ ಮತ್ತು ನ್ಯಾಯಯುತ ಪ್ರಕ್ರಿಯೆಗೆ ಅರ್ಹರು' ಎಂದು ಹೇಳಿದೆ.

ವಿದ್ಯಾರ್ಥಿನಿಗೆ ನೆರವಾದ ಪೊಲೀಸರು

ಕೊಚ್ಚಿ: ಇಲ್ಲಿನ ಇಳಮಕ್ಕರ ಎಂಬಲ್ಲಿ ಪೊಲೀಸರ ಸಕಾಲಿಕ ನೆರವಿನಿಂದಾಗಿ ನೀಟ್ ಅಭ್ಯರ್ಥಿಯೊಬ್ಬರಿಗೆ ಪರೀಕ್ಷೆ ಬರೆಯಲು ಸಾಧ್ಯವಾಗಿದೆ.

ಸನಾ ಜೋಸ್ ಎಂಬ ವಿದ್ಯಾರ್ಥಿನಿ ಪರೀಕ್ಷಾ ಕೇಂದ್ರಕ್ಕೆ ಬರುವಾಗ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ತರಲು ಮರೆತಿದ್ದರು. ಪರೀಕ್ಷೆಯು ಅಲ್ಪ ಸಮಯದಲ್ಲೇ ಆರಂಭವಾಗಲಿರುವುದರಿಂದ ಅವರು ಒತ್ತಡಕ್ಕೆ ಒಳಗಾದರು. ಸ್ಥಳದಲ್ಲಿದ್ದ ಪೊಲೀಸರು ವಿದ್ಯಾರ್ಥಿನಿಯ ಪರಿಸ್ಥಿತಿಯನ್ನು ಗಮನಿಸಿ, ಹಿರಿಯ ಅಧಿಕಾರಿಗೆ ಮಾಹಿತಿ ನೀಡಿದ್ದಾರೆ.

ಸಬ್ ಇನ್‌ಸ್ಪೆಕ್ಟರ್ ಲಾಲು ಜೋಸೆಫ್ ಅವರು ತಕ್ಷಣ ಪರೀಕ್ಷಾ ಕೇಂದ್ರಕ್ಕೆ ಧಾವಿಸಿದ್ದಾರೆ. ಭಾನುವಾರವಾದ್ದರಿಂದ ಹೆಚ್ಚಿನ ಸ್ಟುಡಿಯೊಗಳು ಬಾಗಿಲು ಮುಚ್ಚಿದ್ದವು. ಲಾಲು ಅವರು ಸ್ಟುಡಿಯೊವೊಂದರ ಮಾಲೀಕ ಬಿನು ಎಂಬವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ಬಿನು ಅವರು ಮನೆಯಿಂದ ಬಂದು ಸ್ಟುಡಿಯೊ ಬಾಗಿಲು ತೆರೆದು ವಿದ್ಯಾರ್ಥಿನಿಗೆ ಪಾಸ್‌ಪೋರ್ಟ್ ಅಳತೆಯ ಹೊಸ ಭಾವಚಿತ್ರ ದೊರಕಿಸಿಕೊಟ್ಟಿದ್ದಾರೆ. ಪೊಲೀಸರ ಸಕಾಲಿಕ ನೆರವಿನಿಂದ ಸನಾ ಅವರಿಗೆ ಪರೀಕ್ಷೆ ಬರೆಯಲು ಸಾಧ್ಯವಾಗಿದೆ.

ಹಲವು ಅಭ್ಯರ್ಥಿಗಳು ಪೊಲೀಸ್ ವಶಕ್ಕೆ

- ಹೈದರಾಬಾದ್‌ನ ಕೇಂದ್ರವೊಂದರ ಶೌಚಾಲಯದಲ್ಲಿ ಅಡಗಿಸಿಟ್ಟಿದ್ದ ಮೊಬೈಲ್ ಫೋನ್‌ನಲ್ಲಿ ಉತ್ತರ ಹುಡುಕುತ್ತಿದ್ದ ಅಭ್ಯರ್ಥಿಯೊಬ್ಬರು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ
- ಬಿಹಾರದಲ್ಲಿ ವಿವಿಧ ರೀತಿಯ ಪರೀಕ್ಷಾ ಅಕ್ರಮ ಎಸಗಿದ 28 ಅಭ್ಯರ್ಥಿಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ
- ಜೈಪುರದ ಪರೀಕ್ಷಾ ಕೇಂದ್ರವೊಂದರಲ್ಲಿ ಮೊಬೈಲ್ ಬಳಸಿದ ಆರೋಪದಲ್ಲಿ ಮಹಿಳಾ ಅಭ್ಯರ್ಥಿಯನ್ನು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ

ಟಿಎಂಸಿಗೆ ಹೊಸ ಅಧ್ಯಕ್ಷರನ್ನು ನೇಮಿಸಿದ ಬಂಡಾಯ ಬಣ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮೇಲೆ ಹಿಡಿತ ಸಾಧಿಸುವ ಪ್ರಯತ್ನದ ಭಾಗವಾಗಿ, ಬಂಡಾಯ ಬಣದ ಶಾಸಕರು ಶಾಸಕ ಅರೂಪ್ ರಾಯ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಸೋಮವಾರ ನೇಮಕ ಮಾಡಿದ್ದಾರೆ.

ವಿರೋಧ ಪಕ್ಷದ ನಾಯಕ ರುತಬ್ರತಾ ಬ್ಯಾನರ್ಜಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದಾರೆ. ಆ ಮೂಲಕ ಪಕ್ಷದ ಸಂಸ್ಥಾಪಕಿ ಮಮತಾ ಬ್ಯಾನರ್ಜಿ ಅವರಿಗೆ ಬಂಡಾಯ ಗುಂಪು ಬಲುದೊಡ್ಡ ಸವಾಲು ಎಸೆದಿದೆ.

ವಿಧಾನಸಭೆಯಲ್ಲಿ ಪ್ರಾರಂಭವಾಗಿ ಆ ಬಳಿಕ ಸಂಸತ್ತಿಗೂ ಹಬ್ಬಿದ ಬಂಡಾಯದ ಬಿಸಿ ಇದೀಗ ಪಕ್ಷದ ಸಂಘಟನೆಗೂ ತಲುಪಿದೆ ಎಂಬುದನ್ನು ಈ ಬೆಳವಣಿಗೆಯು ಸೂಚಿಸಿದೆ.

ಬಂಡಾಯ ಶಾಸಕರು, ಪಾಲಿಕೆ ಸದಸ್ಯರು ಮತ್ತು ಇತರ ನಾಯಕರು ಭಾಗವಹಿಸಿದ್ದ ವಿಶೇಷ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಬ್ಯಾನರ್ಜಿ, 'ರಾಯ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ' ಎಂದು ಘೋಷಿಸಿದರು.

ಮಾಜಿ ಸಚಿವರಾದ ಅರೂಪ್ ಬಿಸ್ವಾಸ್ ಮತ್ತು ಶಾಸಕರಾದ ಫರ್ಹಾದ್ ಹಕೀಮ್, ರತಿನ್ ಘೋಷ್ ಹಾಗೂ ಸಬಿನಾ ಯಾಸ್ಮಿನ್ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಅನಿಲ ಸೋರಿಕೆ: ಸಾವಿನ ಸಂಖ್ಯೆ 7ಕ್ಕೆ



ಚೆನ್ನೈ (ಪಿಟಿಐ): 'ತಿರುವಳ್ಳೂರ್ ಜಿಲ್ಲೆಯ 'ಸೇಂಟ್ ಪೀಟರ್ಸ್ ಪೌಲ್ ಸೀಫುಡ್ ಎಕ್ಸ್‌ಪೋರ್ಟ್ ಪ್ರೈವೆಟ್ ಲಿಮಿಟೆಡ್' ಹೆಸರಿನ ಮೀನು ಸಂಸ್ಕರಣಾ ಘಟಕದಲ್ಲಿ ಅಮೋನಿಯಂ ಅನಿಲ ಸೋರಿಕೆಯಿಂದಾದ ಅವಘಡದಲ್ಲಿ ಸಾವಿನ ಸಂಖ್ಯೆ 7ಕ್ಕೆ ಏರಿಕೆಯಾಗಿದೆ' ಎಂದು ಕಾರ್ಮಿಕ ಅಭಿವೃದ್ಧಿ ಸಚಿವ ಜೆ. ಮೊಹಮ್ಮದ್ ಫರ್ವಾಸ್ ಅವರು ಸೋಮವಾರ ವಿಧಾನಸಭೆಗೆ ಮಾಹಿತಿ ನೀಡಿದರು.

'ಅನಿರೀಕ್ಷಿತವಾಗಿ ಪೈಪ್‌ಲೈನ್‌ನಲ್ಲಿ ಅನಿಲ ಸೋರಿಕೆಯಾಗಿದೆ. ಇದರಿಂದ 74 ಕಾರ್ಮಿಕರಿಗೆ ಉಸಿರಾಟದ ಸಮಸ್ಯೆ ಉಂಟಾಯಿತು. ಈ ಪೈಕಿ 70 ಮಂದಿ ಮಹಿಳೆಯರಿದ್ದರು' ಎಂದರು.

ಮೃತ ಏಳೂ ಮಹಿಳೆಯರು ಒಡಿಶಾದವರು. 'ಮೃತದೇಹಗಳನ್ನು ವಾಪಸು ತರಿಸಿಕೊಳ್ಳುವ ಕಾರ್ಯ ನಡೆಯುತ್ತಿದೆ' ಎಂದು ಒಡಿಶಾದ ಕಾರ್ಮಿಕ ಸಚಿವ ಗಣೇಶ್ ರಾಮ್ ಸಿಂಹಖುಟಿಯಾ ಸೋಮವಾರ ಹೇಳಿದ್ದಾರೆ.

ಮೆಸ್ಸಿ ವಿಶ್ವದಾಖಲೆಯ ಗೋಲು

ಆಸ್ಟ್ರಿಯಾ ತಂಡವನ್ನು ಮಣಿಸಿ ನಾಕೌಟ್ ಪ್ರವೇಶಿಸಿದ ಹಾಲಿ ಚಾಂಪಿಯನ್

ಆರ್ಲಿಂಗ್ಟನ್ (ಅಮೆರಿಕ) (ಎಎಫ್‌ಪಿ): ಅರ್ಜೆಂಟೀನಾ ತಂಡದ ನಾಯಕ ಲಯೊನೆಲ್ ಮೆಸ್ಸಿ ಅವರು ಫಿಫಾ ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲೇ ಅತಿ ಹೆಚ್ಚು ಗೋಲು ಹೊಡೆದ ಆಟಗಾರನೆಂಬ ದಾಖಲೆ ಬರೆದರು.

ಸೋಮವಾರ ನಡೆದ ಆಸ್ಟ್ರಿಯಾ ವಿರುದ್ಧದ 'ಜೆ' ಗುಂಪಿನ ಪಂದ್ಯದಲ್ಲಿ ಕಾಲ್ಚಳಕ ಮೆರೆದ ದಿಗ್ಗಜ ಆಟಗಾರ ಅವಳಿ ಗೋಲು ಹೊಡೆದರು. ಇದರೊಂದಿಗೆ ವಿಶ್ವಕಪ್‌ನಲ್ಲಿ ಅವರ ಗೋಲುಗಳ ಸಂಖ್ಯೆ 18ಕ್ಕೆ ಏರಿಕೆಯಾಯಿತು. ಇದರೊಂದಿಗೆ ಜರ್ಮನಿಯ ಸ್ಟ್ರೈಕರ್ ಮಿರೋಸ್ಲಾವ್ ಕ್ಲೋಸ್ ಅವರ (16) ದಾಖಲೆಯನ್ನು ಮೀರಿನಿಂತರು.

ಕಳೆದ ವಾರ ಅಲ್ಜೀರಿಯಾ ವಿರುದ್ಧ ಹ್ಯಾಟ್ರಿಕ್ ಗೋಲು ಬಾರಿಸಿದ್ದ 38 ವರ್ಷ ವಯಸ್ಸಿನ ಮೆಸ್ಸಿ ಅವರು ಕ್ಲೋಸ್ ಅವರ ದಾಖಲೆಯನ್ನು ಸರಿಗಟ್ಟಿದ್ದರು. ಎರಡು ಪಂದ್ಯಗಳಲ್ಲಿ ಒಟ್ಟು 5 ಗೋಲು ಗಳಿಸಿರುವ ಅವರು ಪ್ರಸಕ್ತ ಟೂರ್ನಿಯಲ್ಲಿ 'ಅತ್ಯಧಿಕ ಸ್ಕೋರರ್' ಎನಿಸಿದ್ದಾರೆ.

ಮೆಸ್ಸಿ ಅವರ ಅಮೋಘ ಆಟದ ನೆರವಿನಿಂದ ಹಾಲಿ ಚಾಂಪಿಯನ್ ಅರ್ಜೆಂಟೀನಾ 2–0 ಅಂತರದಿಂದ ಆಸ್ಟ್ರಿಯಾ ತಂಡವನ್ನು ಮಣಿಸಿ ನಾಕೌಟ್ ಪ್ರವೇಶಿಸಿತು. ಅಲ್ಜೀರಿಯಾವನ್ನು ಮಣಿಸಿ ಭರ್ಜರಿಯಾಗಿ ಅಭಿಯಾನ ಆರಂಭಿಸಿದ್ದ ತಂಡವು, ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಇದೇ 28ರಂದು ಜೋರ್ಡಾನ್ ತಂಡವನ್ನು ಎದುರಿಸಲಿದೆ.

ಪಂದ್ಯದ ಆರಂಭದಲ್ಲಿ ಅಭಿಯದ್ದ ಪೆನಾಲ್ಟಿ ಅವಕಾಶದಲ್ಲಿ ಎಡವಿದ್ದ ಮೆಸ್ಸಿ 38ನೇ ನಿಮಿಷದಲ್ಲಿ ಮೈಲಿಗಲ್ಲಿನ 17ನೇ ಗೋಲು ಹೊಡೆದರು. ಈ ವೇಳೆ ಭಾವುಕರಾದ ಅವರನ್ನು ತಂಡದ ಸಹ ಆಟಗಾರರು ಬಿಗಿದಪ್ಪಿ ಸಂಭ್ರಮಿಸಿದರು. ಪಂದ್ಯದ ಕೊನೆಯ ಹೆಚ್ಚುವರಿ ಅವಧಿಯಲ್ಲಿ ಮತ್ತೊಮ್ಮೆ ಪಾರಮ್ಯ ಮೆರೆದ ಮೆಸ್ಸಿ (90 + 5ನೇ) ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಮೆಸ್ಸಿ ಅವರಿಗೆ ಇದು ಆರನೇ ವಿಶ್ವಕಪ್ ಟೂರ್ನಿಯಾಗಿದೆ. 2011 ಅಂತರ ರಾಷ್ಟ್ರೀಯ ಪಂದ್ಯಗಳನ್ನು ಆಡಿರುವ ಅವರು 122 ಗೋಲು ಗಳಿಸಿದ್ದಾರೆ.

ಪಂದ್ಯಗಳು

ಜೋರ್ಡನ್– ಅಲ್ಜೀರಿಯಾ
ಮಂಗಳವಾರ ಬೆಳಿಗ್ಗೆ 8.30
ಪೋರ್ಚುಗಲ್– ಉಜ್ಬೆಕಿಸ್ತಾನ
ಮಂಗಳವಾರ ರಾತ್ರಿ 10.30
ಇಂಗ್ಲೆಂಡ್– ಘಾನಾ
ಮಂಗಳವಾರ ರಾತ್ರಿ 1.30
ಪನಾಮಾ– ಕ್ರೊಯೇಷಿಯಾ
ಬುಧವಾರ ಬೆಳಗಿನ ಜಾವ 4.30
(ಸಮಯ: ಭಾರತೀಯ ಕಾಲಮಾನ)
ಲೈವ್ ಯುನೈಟೆಡ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಆ್ಯಪ್

ಅರ್ಜೆಂಟೀನಾ	ಆಸ್ಟ್ರಿಯಾ
2	0



ಗೋಲು ದಾಖಲಿಸಿದ ಸಂಭ್ರಮದಲ್ಲಿ ಲಯೊನೆಲ್ ಮೆಸ್ಸಿ (ಎಡ) — ಎಎಫ್‌ಪಿ ಚಿತ್ರ

ವಿಶ್ವಕಪ್‌ನಲ್ಲಿ ಅತಿ ಹೆಚ್ಚು ಗೋಲು ಗಳಿಸಿದವರು

ಗೋಲು	ಆಟಗಾರ	ದೇಶ	ಪಂದ್ಯ	ಅವಧಿ
18	ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ	28	2006ರಿಂದ 2026
16	ಮಿರೊಸ್ಲಾವ್ ಕ್ಲೋಸ್	ಜರ್ಮನಿ	24	2002ರಿಂದ 2014
15	ರೊನಾಲ್ಡೊ	ಬ್ರೆಜಿಲ್	19	1994ರಿಂದ 2006
14	ಜರ್ಡ್ ಮುಲ್ಲರ್	ಜರ್ಮನಿ	13	1970ರಿಂದ 1974
14	ಕೈಲಿಯನ್ ಎಂಬಾಪೆ	ಫ್ರಾನ್ಸ್	15	2018ರಿಂದ 2026

ಕೇಪ್ ವರ್ದೆ ತಂಡದ ಪರ ಕೆವಿನ್ ಪಿನಾ ಚೊಚ್ಚಲ ಗೋಲು

ಮಯಾಮಿ ಗಾರ್ಡನ್ (ಫ್ಲೋರಿಡಾ) (ಎಪಿ): ಮಿಡ್‌ಫೀಲ್ಡರ್ ಕೆವಿನ್ ಪಿನಾ ಅವರ ಅಮೋಘ ಕಾಲ್ಚಳಕದ ಮೂಲಕ ಫಿಫಾ ವಿಶ್ವಕಪ್‌ನಲ್ಲಿ ಕೇಪ್ ವರ್ದೆ ತಂಡದ ಪರ ಚೊಚ್ಚಲ ಗೋಲು ಹೊಡೆದ ಆಟಗಾರ ಎಂಬ ಹಿರಿಮೆಗೆ ಪಾತ್ರರಾದರು.

ವಿಶ್ವಕಪ್ ಟೂರ್ನಿಗೆ ಮೊದಲ ಬಾರಿ ಅರ್ಹತೆ ಪಡೆದಿರುವ ಕೇಪ್ ವರ್ದೆ ತಂಡವು ಭಾನುವಾರ ರಾತ್ರಿ ನಡೆದ 'ಎಚ್' ಗುಂಪಿನ ಪಂದ್ಯದಲ್ಲಿ 2–2ರಿಂದ ಉರುಗ್ವೆ ವಿರುದ್ಧ ಡ್ರಾ ಸಾಧಿಸಿತು. ಇದರೊಂದಿಗೆ ನಾಕೌಟ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.


ಕಳೆದ ವಾರ ತನ್ನ ಮೊದಲ ಪಂದ್ಯದಲ್ಲಿ ಮಾಜಿ ಚಾಂಪಿಯನ್ ಸ್ಪೇನ್ ತಂಡವನ್ನು ಬೆರಗುಗೊಳಿಸಿದ್ದ ಪುಟ್ಟ ದ್ವೀಪ ರಾಷ್ಟ್ರವು ತನ್ನ ಚೊಚ್ಚಲ ಪ್ರಯತ್ನದಲ್ಲೇ ನಾಕೌಟ್ ಪ್ರವೇಶಿಸುವ ತವಕದಲ್ಲಿದೆ. ಇದೇ 27ರಂದು ಸೌದಿ ಅರೇಬಿಯಾ ವಿರುದ್ಧದ ಪಂದ್ಯವು ನಿರ್ಣಾಯಕವಾಗಲಿದೆ.

ಪಂದ್ಯದ 21ನೇ ನಿಮಿಷದಲ್ಲಿ ಕೆವಿನ್ ಅವರು ಫ್ರೀ ಕಿಕ್‌ನಲ್ಲಿ ಒದ್ದ ಚೆಂಡು ಗೋಲುಪೆಟ್ಟಿಗೆಯನ್ನು ಸೇರಿಕೊಂಡಿತು. ಇದು ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿತು. ಆದರೆ, ಮೊದಲಾರ್ಧದ ಕೊನೆಯಲ್ಲಿ ಉರುಗ್ವೆ ತಂಡದ ಮ್ಯಾಕ್ಸಿ ಅರೌಹೊ (44ನೇ) ಮತ್ತು ಅಗಸ್ಟಿನ್ ಕ್ಯಾನೊಬಿಯೊ (45 + 6ನೇ) ಅವರು ಕೆಲವೇ ನಿಮಿಷಗಳ ಅಂತರದಲ್ಲಿ ತಲಾ ಒಂದು ಗೋಲು ಗಳಿಸಿ, ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. 61ನೇ ನಿಮಿಷದಲ್ಲಿ ಕೇಪ್ ವರ್ದೆ ತಂಡದ ಹೆಲಿಯೊ ವಾರೆಲಾ ಅವರು ಚೆಂಡನ್ನು ಗುರಿ ಸೇರಿಸಿದ್ದರಿಂದ ಸ್ಕೋರ್ ಸಮನಾಯಿತು.

ನಂತರ ಉಭಯ ತಂಡಗಳ ಆಟಗಾರರು ಗೆಲುವಿನ ಗೋಲು ದಾಖಲಿಸಲು ಸಾಕಷ್ಟು ಹೋರಾಟ ನಡೆಸಿದರು. ಆದರೆ, ಎದುರಾಳಿ ತಂಡದ ರಕ್ಷಣಾ ಕೋಟೆಯನ್ನು ಭೇದಿಸಲು ಯಾರಿಗೂ ಸಾಧ್ಯವಾಗಲಿಲ್ಲ.

ಉರುಗ್ವೆ ತಂಡವು ತನ್ನ ಮೊದಲ ಪಂದ್ಯದಲ್ಲಿ ಸೌದಿ ಅರೇಬಿಯಾ ವಿರುದ್ಧ 1–1ರಿಂದ ಡ್ರಾ ಮಾಡಿಕೊಂಡಿತ್ತು. ಮುಂದಿನ ಪಂದ್ಯದಲ್ಲಿ ಪ್ರಬಲ ಸ್ಪೇನ್ ತಂಡವನ್ನು ಇದೇ 27ರಂದು ಎದುರಿಸಲಿದೆ.

ಉರುಗ್ವೆ	ಕೇಪ್ ವರ್ದೆ
2	2



ನ್ಯೂಜಿಲೆಂಡ್ ತಂಡವನ್ನು ಮಣಿಸಿ ನಾಕೌಟ್‌ನತ್ತ ಹೆಜ್ಜೆ

ಈಜಿಪ್ಟ್‌ಗೆ 'ಮೊದಲ' ಗೆಲುವು

ವ್ಯಾಂಕೋವರ್ (ಎಎಫ್‌ಪಿ): ಸಾಂಘಿಕ ಆಟ ಪ್ರದರ್ಶಿಸಿದ ಈಜಿಪ್ಟ್ ತಂಡವು 3–1 ಗೋಲುಗಳಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿ, ಫಿಫಾ ವಿಶ್ವಕಪ್ ಇತಿಹಾಸದಲ್ಲೇ ತನ್ನ ಮೊದಲ ಗೆಲುವು ದಾಖಲಿಸಿತು.

ಬಲಿಷ್ಠ ಬೆಲ್ಜಿಯಂ ವಿರುದ್ಧ 1–1ರಿಂದ ಡ್ರಾ ಮಾಡಿಕೊಂಡು ಅಭಿಯಾನ ಆರಂಭಿಸಿದ್ದ ಈಜಿಪ್ಟ್ ತಂಡವು ಈ ಗೆಲುವಿನೊಂದಿಗೆ 'ಜಿ' ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿ ನಾಕೌಟ್ ಹೊಸ್ತಿಲಿಗೆ ಬಂದಿತು.

ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಇದೇ 27ರಂದು ಇರಾನ್ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಡ್ರಾ ಸಾಧಿಸಿದರೂ 32ರ ಘಟ್ಟಕ್ಕೆ ಅರ್ಹತೆ ಪಡೆಯಲಿದೆ.

ವಿಶ್ವಕಪ್‌ನಲ್ಲಿ ನಾಲ್ಕನೇ ಬಾರಿ ಸ್ಪರ್ಧಿಸುತ್ತಿರುವ ಈಜಿಪ್ಟ್ ತಂಡವು ಮೊದಲ ಬಾರಿ ನಾಕೌಟ್ ಪ್ರವೇಶಿಸುವ ಹುಮ್ಮಸ್ಸಿನಲ್ಲಿದೆ. 1934, 1990 ಮತ್ತು 2018ರ ಆವೃತ್ತಿಗಳಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿತ್ತು.

ರಕ್ಷಣಾ ಆಟಗಾರ ಫಿನ್ ಸರ್ಮನ್ ಅವರು ಪಂದ್ಯದ 15ನೇ ನಿಮಿಷದಲ್ಲಿ ಗೋಲು ದಾಖಲಿಸುವ ಮೂಲಕ ನ್ಯೂಜಿಲೆಂಡ್ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಮೊದಲಾರ್ಧವನ್ನು 1–0ಯಿಂದ ಹಿಡಿತ ಕಾಯ್ದುಕೊಳ್ಳುವಲ್ಲಿ ಕಿವೀಸ್ ಪಡೆ ಯಶಸ್ವಿಯಾಯಿತು.

ಆದರೆ, ದ್ವಿತೀಯಾರ್ಧದಲ್ಲಿ ಈಜಿಪ್ಟ್ ತಂಡ ಪಾರಮ್ಯ ಮೆರೆಯಿತು. 58ನೇ ನಿಮಿಷದಲ್ಲಿ ಈಜಿಪ್ಟ್‌ನ ಮುಸ್ತಫಾ ಜಿಕೊ ಅವರು ಕಾಲ್ಚಳಕ ಪ್ರದರ್ಶಿಸಿದರು. ಹೀಗಾಗಿ, ತಂಡಗಳ ಸ್ಕೋರ್ ಸಮನಾಯಿತು. ಇದಾದ ಒಂಬತ್ತು ನಿಮಿಷದಲ್ಲಿ ಮೊಹಮ್ಮದ್ ಸಲಾಹ್ (67ನೇ) ಅವರು ಚೆಂಡನ್ನು ಗುರಿ ಸೇರಿಸಿ ಈಜಿಪ್ಟ್‌ಗೆ ಮುನ್ನಡೆ ತಂದುಕೊಟ್ಟರು. ಬದಲಿ ಆಟಗಾರನಾಗಿ ಕಣಕ್ಕಿಳಿದಿದ್ದ ಟ್ರೆಜೆಗೆಟ್ ಅವರು 82ನೇ ನಿಮಿಷದಲ್ಲಿ ಗೋಲು ದಾಖಲಿಸಿ, ತಂಡದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಈ ಸೋಲಿನೊಂದಿಗೆ ನ್ಯೂಜಿಲೆಂಡ್ ತಂಡದ ನಾಕೌಟ್ ಕನಸು ಬಹುತೇಕ ಕಮರಿದೆ. ತನ್ನ ಮೊದಲ ಪಂದ್ಯದಲ್ಲಿ ಇರಾನ್ ವಿರುದ್ಧ 2–2ರಿಂದ ಡ್ರಾ ಸಾಧಿಸಿದ್ದ ನ್ಯೂಜಿಲೆಂಡ್, ಕೊನೆಯ ಪಂದ್ಯದಲ್ಲಿ ಇದೇ 27ರಂದು ಬೆಲ್ಜಿಯಂ ವಿರುದ್ಧ ಆಡಲಿದೆ.



ಗೋಲು ದಾಖಲಿಸಿದ ಸಂಭ್ರಮದಲ್ಲಿ ಈಜಿಪ್ಟ್‌ನ ಮುಸ್ತಫಾ ಜಿಕೊ — ಎಎಫ್‌ಪಿ ಚಿತ್ರ

ಈಜಿಪ್ಟ್	ನ್ಯೂಜಿಲೆಂಡ್
3	1

ಬೆಲ್ಜಿಯಂ ವಿರುದ್ಧ ಡ್ರಾ ಪಂದ್ಯದಲ್ಲಿ ಇರಾನ್

ಕ್ಯಾಲಿಫೋರ್ನಿಯಾ (ಎಪಿ): ಇರಾನ್‌ನ ಗೋಲ್‌ಕೀಪರ್ ಅಲಿರೇಜಾ ಬೀರನ್‌ವಾಂಡ್ ಅವರ ಪ್ರಬಲ ಬೆಲ್ಜಿಯಂ ವಿರುದ್ಧದ ಪಂದ್ಯದಲ್ಲಿ ಏಳು 'ಸೇವ್‌'ಗಳನ್ನು ಮಾಡಿದರು. ಇದರಿಂದಾಗಿ ವಿಶ್ವಕಪ್ ಟೂರ್ನಿಯ 'ಜಿ' ಗುಂಪಿನ ಪಂದ್ಯವು ಗೋಲಿಲ್ಲದೆ ಡ್ರಾದಲ್ಲಿ ಅಂತ್ಯವಾಯಿತು.

ದ್ವಿತೀಯಾರ್ಧದಲ್ಲಿ ಬೆಲ್ಜಿಯಂನ ಡಿಫೆಂಡರ್ ನೆಥನ್ ನ್ಗೋಯ್ ಅವರಿಗೆ ಕೆಂಪು ಕಾರ್ಡ್ ದರ್ಶನವಾಯಿತು. ಹೀಗಾಗಿ, ಕೊನೆಯ ಅರ್ಧಗಂಟೆ 10 ಆಟಗಾರರೊಂದಿಗೆ ಹೋರಾಟ ನಡೆಸಿದ 'ರೆಡ್ ಡೆವಿಲ್ಸ್'ಗೆ ಸತತ ಎರಡನೇ ಪಂದ್ಯದಲ್ಲೂ ಗೆಲುವಿನ ಖಾತೆ ತೆರೆಯಲು ಸಾಧ್ಯವಾಗಲಿಲ್ಲ.

ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಬೆಲ್ಜಿಯಂ ತಂಡದ ನಾಕೌಟ್ ಹಾದಿ ಕಠಿಣವಾಗಿದೆ. ಈಜಿಪ್ಟ್ ವಿರುದ್ಧ 1–1ರಿಂದ ಡ್ರಾ ಮಾಡಿಕೊಂಡಿದ್ದ ತಂಡಕ್ಕೆ ಇದೇ 27ರಂದು ನಡೆಯುವ ನ್ಯೂಜಿಲೆಂಡ್ ವಿರುದ್ಧದ ಪಂದ್ಯವು ಮಹತ್ವದ್ದಾಗಿದೆ.

ನೆಥನ್ ಅವರು ಪಂದ್ಯದ 66ನೇ ನಿಮಿಷದಲ್ಲಿ ಚೆಂಡನ್ನು ಹಿಮ್ಮುಖವಾಗಿ ಪಾಸ್ ಮಾಡಿದ್ದ ವೇಳೆ ತಪ್ಪಾಗಿ ನಿಭಾಯಿಸಿದ್ದರಿಂದ ಇರಾನ್ ತಂಡದ ಮೆಹದಿ ತರೇಮಿ ಅವರಿಗೆ ಗೋಲು ಹೊಡೆಯುವ ಅವಕಾಶವನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿದರು. ಇದಕ್ಕಾಗಿ ನೆಥನ್ ಅವರಿಗೆ ರೆಫರಿ ಕೆಂಪು ಕಾರ್ಡ್ ತೋರಿಸಿದರು.



ಅಲಿರೇಜಾ ಬೀರನ್‌ವಾಂಡ್

ಸಂಕ್ಷಿಪ್ತ ಸುದ್ದಿ

ಭಾರತದಲ್ಲಿ ವಿಶ್ವ ಬ್ಯಾಡ್ಮಿಂಟನ್: ಟಿಕೆಟ್ ಬಿಡುಗಡೆ

ನವದೆಹಲಿ (ಪಿಟಿಐ): 17 ವರ್ಷಗಳ ನಂತರ ಭಾರತವು ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಲು ಸಜ್ಜಾಗಿದೆ.

ಇದೇ ಆಗಸ್ಟ್ 17ರಿಂದ 23ರವರೆಗೆ ದೇಶದ ರಾಜಧಾನಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ. ಸೋಮವಾರ ಟಿಕೆಟ್‌ಗಳ ಮಾರಾಟ ಆರಂಭಿಸಲಾಯಿತು. ₹499 ರಿಂದ ₹5,500 ಬೆಲೆ ನಿಗದಿ ಮಾಡಲಾಗಿದೆ. ಒಟ್ಟು ಆರು ಸಾವಿರ ಆಸನ ಪ್ರೇಕ್ಷಕರಿಗೆ ಅವಕಾಶ ನೀಡಲಾಗುವುದು. 'ಬುಕ್ ಮೈ ಶೋ' ವೆಬ್‌ಸೈಟ್ ಮೂಲಕ ಖರೀದಿಸಬಹುದು.

ಈ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಆತಿಥೇಯ ತಂಡದಲ್ಲಿ ಲಕ್ಷ್ಯ ಸೇನ್, ಪಿ.ವಿ.ಸಿಂಧು, ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಅವರಿದ್ದಾರೆ.

ಅರ್ಜನ್ ಸಿಂಗ್ ಹಾಕಿ ಟೂರ್ನಿ ಇಂದಿನಿಂದ

ಬೆಂಗಳೂರು: ಏಳನೇ ಆವೃತ್ತಿಯ ಏರ್ ಮಾರ್ಷಲ್ ಅರ್ಜನ್ ಸಿಂಗ್ ಸ್ಮರಣಾರ್ಥ ರಾಷ್ಟ್ರೀಯ ಹಾಕಿ ಟೂರ್ನಿಯು ಮಂಗಳವಾರ ಆರಂಭವಾಗಲಿದೆ. ನಗರದ ಜಾಲಹಳ್ಳಿ ವಾಯುನೆಲೆಯಲ್ಲಿರುವ ಏರ್ ಮಾರ್ಷಲ್ ಅಮಿತ್ ಸಿಂಗ್ ಬಕ್ಷಿ ಹಾಕಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಈ ಬಾರಿ 16 ತಂಡಗಳು ಕಣಕ್ಕಿಳಿಯುತ್ತಿದ್ದು, ಲೀಗ್ ಕಮ್ ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಚಾಂಪಿಯನ್ ತಂಡಕ್ಕೆ ₹10 ಲಕ್ಷ ಹಾಗೂ ರನ್ನರ್ಸ್ ಅಪ್ ತಂಡಕ್ಕೆ ₹8 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ.

ಕ್ಯಾಚ್ ಕೈಚೆಲ್ಲಿದ್ದು ಲೋಪ: ಕೌರ್ ಬೇಸರ

ಮ್ಯಾಂಚೆಸ್ಟರ್ (ಪಿಟಿಐ): ದಕ್ಷಿಣ ಆಫ್ರಿಕಾ ಎದುರು ಭಾನುವಾರ ನಡೆದ ಪಂದ್ಯದಲ್ಲಿ ತಮ್ಮ ತಂಡ ಸೋಲಲು ಕ್ಯಾಚ್‌ಗಳನ್ನು ನೆಲಕ್ಕೆ ಚೆಲ್ಲಿದ್ದು ಕಾರಣ ಎಂದು ಭಾರತ ವನಿತೆಯರ ಬಳಗದ ನಾಯಕಿ ಹರ್ಮನ್‌ಪ್ರೀತ್ ಕೌರ್ ಬೇಸರ ವ್ಯಕ್ತಪಡಿಸಿದ್ದಾರೆ.

ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಫೀಲ್ಡರ್ ರಾಧಾ ಯಾದವ್ ಅವರು ಮರಿಝಾನ್ ಕಾಪ್ ಅವರ ಎರಡು ಸುಲಭ ಕ್ಯಾಚ್ ಕೈಚೆಲ್ಲಿದ್ದರು. ಇದರಿಂದಾಗಿ ಕಾಪ್ ಅವರು 45 ಎಸೆತಗಳಲ್ಲಿ ಅಜೇಯ 81 ರನ್ ಗಳಿಸಿದರು. ಅದರಲ್ಲಿ 7 ಬೌಂಡರಿ ಮತ್ತು 4 ಸಿಕ್ಸರ್‌ಗಳು ಇದ್ದವು. ದಕ್ಷಿಣ ಆಫ್ರಿಕಾ ತಂಡವು 6 ವಿಕೆಟ್‌ಗಳಿಂದ ಜಯಿಸಿತು.

ಪಂದ್ಯದ ನಂತರ ಅಧಿಕೃತ ಪ್ರಸಾರಕರೊಂದಿಗೆ ಮಾತನಾಡಿದ ಹರ್ಮನ್, 'ಒಂದೆರಡು ಒಳ್ಳೆಯ ಅವಕಾಶಗಳು ನಮಗೆ ಲಭಿಸಿದ್ದವು. ಆದರೆ ಅವುಗಳನ್ನು ಬಳಸಿಕೊಳ್ಳುವಲ್ಲಿ ಎಡವಿದೆವು' ಎಂದರು.

ಈ ಪಂದ್ಯವು ಹರ್ಮನ್ ಅವರಿಗೆ 200ನೇ ಅಂತರರಾಷ್ಟ್ರೀಯ ಟಿ20 ಪಂದ್ಯವಾಗಿತ್ತು.

'ಸೋಲಿನಿಂದ ನಾವು ಹತಾಶರಾಗುವುದಿಲ್ಲ. ಮುಂದಿನ ಹಂತದಲ್ಲಿ ಇನ್ನಷ್ಟು ಸಾಮರ್ಥ್ಯದೊಂದಿಗೆ ಮುನ್ನುಗ್ಗುತ್ತೇವೆ. ಸ್ಪಿನ್ನರ್‌ಗಳಾದ ಶ್ರೀಚರಣಿ ಮತ್ತು ಶಫಾಲಿ (ವರ್ಮಾ) ಅವರು ಅಮೋಘವಾಗಿ ಆಡಿದ್ದಾರೆ' ಎಂದರು.



ಹರ್ಮನ್‌ಪ್ರೀತ್ ಕೌರ್

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಇಂದಿನ ಪಂದ್ಯ

ನ್ಯೂಜಿಲೆಂಡ್	V/s	ಸ್ಕಾಟ್ಲೆಂಡ್
ತಾಣ: ಬ್ರಿಸ್ಟಲ್, ಆರಂಭ: ಮಧ್ಯಾಹ್ನ 3		
ಶ್ರೀಲಂಕಾ	V/s	ಐರ್ಲೆಂಡ್
ತಾಣ: ಬ್ರಿಸ್ಟಲ್, ಆರಂಭ: ಸಂಜೆ 7		
ಆಸ್ಟ್ರೇಲಿಯಾ	V/s	ಪಾಕಿಸ್ತಾನ
ತಾಣ: ಹೆಡಿಂಗ್ಲೆ, ಆರಂಭ: ರಾತ್ರಿ 11		
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್		

ಪ್ರೊ ಲೀಗ್ ಹಾಕಿ ಲಂಡನ್ ಚರಣ ಇಂದಿನಿಂದ

ಭಾರತ–ಪಾಕ್ ಮುಖಾಮುಖಿ

ಲಂಡನ್ (ಪಿಟಿಐ): ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್ ವಿರುದ್ಧ ಅಮೋಘ ಜಯಗಳಿಸಿ ಬಂದಿರುವ ಭಾರತ ಪುರುಷರ ಹಾಕಿ ತಂಡವು ಆತ್ಮವಿಶ್ವಾಸದ ಉತ್ತುಂಗದಲ್ಲಿದೆ. ಮಂಗಳವಾರ ಇಲ್ಲಿ ಆರಂಭವಾಗಲಿರುವ ಎಫ್‌ಐಎಚ್ ಪ್ರೊ ಲೀಗ್ ಚರಣದಲ್ಲಿ ಬದ್ಧಪ್ರತಿಸ್ಪರ್ಧಿ ಪಾಕಿಸ್ತಾನವನ್ನು ಎದುರಿಸಲಿದೆ.

2024ರಲ್ಲಿ ಚೀನಾದಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಉಭಯ ತಂಡಗಳು ಕೊನೆಯ ಸಲ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಭಾರತವು 2–1ರಿಂದ ಗೆದ್ದಿತ್ತು.

ಕಳೆದ ಹತ್ತು ವರ್ಷಗಳಲ್ಲಿ ಉಭಯ ತಂಡಗಳು 17 ಬಾರಿ ಸೆಣಸಿವೆ. ಅದರಲ್ಲಿ 15 ಬಾರಿ ಗೆದ್ದಿರುವ ಭಾರತವು ಎರಡರಲ್ಲಿ ಡ್ರಾ ಮಾಡಿಕೊಂಡಿದೆ.

ಈಚೆಗೆ ರಾಟರ್‌ಡ್ಯಾಮ್‌ನಲ್ಲಿ ನಡೆದಿದ್ದ ಪ್ರೊ ಲೀಗ್‌ನಲ್ಲಿ ಭಾರತವು 3–2ರಿಂದ ನೆದರ್ಲೆಂಡ್ಸ್ ಎದುರು ಗೆದ್ದಿತ್ತು. ಅಲ್ಲಿ ಇನ್ನೊಂದು ಪಂದ್ಯದಲ್ಲಿ ಭಾರತ ತಂಡವು ವಿಶ್ವ ರ್‍ಯಾಂಕಿಂಗ್‌ನಲ್ಲಿ 5ನೇ ಸ್ಥಾನದಲ್ಲಿರುವ ಜರ್ಮನಿಯ ವಿರುದ್ಧ ಜಯಿಸಿತ್ತು.

ಉಳಿದ ಇನ್ನೆರಡು ಪಂದ್ಯಗಳಲ್ಲಿ ಭಾರತ ತಂಡವು ನೆದರ್ಲೆಂಡ್ಸ್ ಹಾಗೂ ಜರ್ಮನಿ ವಿರುದ್ಧ ಸೋತಿತ್ತು. ಆದರೆ ಆ ಪಂದ್ಯಗಳಲ್ಲಿ ವಿರೋಚಿತ ಹೋರಾಟ ನಡೆಸಿ ಗಮನ ಸೆಳೆದಿತ್ತು. ಆದರೆ ಭಾರತ ತಂಡವು ನಾಲ್ಕು ಪಂದ್ಯಗಳಲ್ಲಿ ಸೇರಿ 19 ಗೋಲುಗಳನ್ನು ಬಿಟ್ಟುಕೊಟ್ಟಿತ್ತು. ಕೇವಲ ಐದು ಗೋಲು ಗಳಿಸಿತ್ತು.

ಅದರಿಂದಾಗಿ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಮತ್ತು ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಕಟ್ಟುನಿಟ್ಟಿನ ಸೂಚನೆಗಳನ್ನು ತಂಡಕ್ಕೆ ನೀಡಿದ್ದಾರೆ. ಪೆನಾಲ್ಟಿ ಅವಕಾಶಗಳಲ್ಲಿ ಗೋಲು ಗಳಿಸುವತ್ತ ಹೆಚ್ಚು ಗಮನ ನೀಡುವ ಅಭ್ಯಾಸವನ್ನು ತಂಡದ ಆಟಗಾರರು ಮಾಡುತ್ತಿದ್ದಾರೆ.

ಮಂಗಳವಾರ ಪಾಕ್ ಎದುರಿನ ಪಂದ್ಯದ ನಂತರ ಗುರುವಾರ ಇಂಗ್ಲೆಂಡ್ ತಂಡದ ವಿರುದ್ಧ ಆಡಲಿದೆ. ಶುಕ್ರವಾರ ಎರಡನೇ ಲೆಗ್‌ನಲ್ಲಿ ಪಾಕ್ ತಂಡವನ್ನು ಮತ್ತೊಮ್ಮೆ ಎದುರಿಸುವರು. ಅಮ್ಮದ್ ಶಕೀಲ್ ಭಟ್ ನಾಯಕತ್ವದ ಪಾಕ್ ತಂಡವು ಉತ್ತಮ ಆರಂಭದ ನಿರೀಕ್ಷೆಯಲ್ಲಿದೆ. ಆದರೆ ಯುರೋಪಿಯನ್ ಲೀಗ್‌ನಲ್ಲಿ ತಂಡವು ಸತತ ವೈಫಲ್ಯ ಅನುಭವಿಸಿ ಇಲ್ಲಿಗೆ ಬಂದಿದೆ.



ಹರ್ಮನ್‌ಪ್ರೀತ್ ಸಿಂಗ್

ಮಹಾರಾಜ ಟ್ರೋಫಿ: ಅನೀಶ್ವರ್, ತಾಹಾ ಅರ್ಧಶತಕಗಳ ಸೊಬಗು

ಟೈಗರ್ಸ್‌ಗೆ ಮಣಿದ ವಾರಿಯರ್ಸ್

• ಆರ್. ಜಿತೇಂದ್ರ

ಮೈಸೂರು: ಹುಬ್ಬಳ್ಳಿ ಟೈಗರ್ಸ್ ನಾಯಕ ಅನೀಶ್ವರ್ ಗೌತಮ್ (ಔಟಾಗದೇ 60, 41 ಎ, 4X2, 6X4) ಹಾಗೂ ಮೊಹಮ್ಮದ್ ತಾಹಾ (57 ರನ್, 37 ಎ, 4X4, 6X3) ಅವರಿಗೆ ಮೈಸೂರು ವಾರಿಯರ್ಸ್‌ಗೆ ತವರಿನ ಅಂಗಳದಲ್ಲಿ ಎರಡನೇ ಸೋಲಿನ ರುಚಿ ತೋರಿಸಿದರು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ನಡೆದ ಮೊದಲ ಪಂದ್ಯದಲ್ಲಿ ಹುಬ್ಬಳ್ಳಿ 7 ವಿಕೆಟ್ ಅಂತರದಿಂದ ಅಧಿಕಾರಯುತ ಗೆಲುವು ದಾಖಲಿಸಿತು.

162 ರನ್‌ಗಳ ಸಾಧಾರಣ ಮೊತ್ತದ ಬೆನ್ನತ್ತಿದ ಹುಬ್ಬಳ್ಳಿ ಎರಡನೇ ಎಸೆತದಲ್ಲೇ ಪ್ರೀತೇಶ್ (0) ವಿಕೆಟ್ ಕಳೆದುಕೊಂಡರೂ, ಕ್ರೀಸ್‌ನ ಇನ್ನೊಂದು ತುದಿಯಲ್ಲಿದ್ದ ತಾಹಾ ಭದ್ರ ಬುನಾದಿ ಹಾಕಿದರು. ಆರಂಭದಲ್ಲಿ ತಾಳ್ಮೆಯ ಆಟವಾಡಿ, ನಂತರ ಅಬ್ಬರಿಸಿದರು. ಎರಡನೇ ವಿಕೆಟ್‌ಗೆ ಮಯಂಕ್ ಅಗರವಾಲ್ ಜೊತೆ 49 ರನ್‌ಗಳ ಉಪಯುಕ್ತ ಜೊತೆಯಾಟ ನೀಡಿದರು.

ಮೂರನೇ ವಿಕೆಟ್‌ಗೆ ಅನೀಶ್ವರ್ ಹಾಗೂ ತಾಹಾ ಜೋಡಿ 72 ರನ್ ಜೊತೆಯಾಟದ ಮೂಲಕ ತಂಡವನ್ನು ಗೆಲುವಿನತ್ತ ಕೊಂಡೊಯ್ಯಿತು. ತಾಹಾ ನಿರ್ಗಮನದ ನಂತರ ಅಬ್ಬರಿಸಿದ ಅನೀಶ್ವರ್ ಅಜೇಯರಾಗಿ ಉಳಿದರು.

ಮೊದಲು ಬ್ಯಾಟ್ ಮಾಡಿದ ಮೈಸೂರು ತಂಡದ ರಿತೇಶ್ ಭಟ್ಕಳ (44) ಹಾಗೂ ಎಸ್.ಯು. ಕಾರ್ತಿಕ್ ಜೋಡಿ ಎರಡನೇ ವಿಕೆಟ್‌ಗೆ ಕೇವಲ 47 ಎಸೆತದಲ್ಲಿ 74 ರನ್‌ಗಳ ಬಿರುಸಿನ ಆಟವಾಡಿತು. 11ನೇ ಓವರ್‌ನ ಕೊನೆಯ ಎಸೆತದಲ್ಲಿ ಶಿಖರ್ ಶೆಟ್ಟಿ, ಕಾರ್ತಿಕ್ ಅವರನ್ನು ಬೌಲ್ಡ್ ಮಾಡುವ ಮೂಲಕ ಈ ಜೋಡಿಯನ್ನು ಬೇರ್ಪಡಿಸಿದರು. 8ನೇ ವಿಕೆಟ್‌ಗೆ ಕೆ.ಪಿ. ಕಾರ್ತಿಕೇಯ (27) ಹಾಗೂ ಕೆ.ಎಸ್. ಲಂಕೇಶ್ (16) 44 ರನ್ ಜೊತೆಯಾಟದ ಮೂಲಕ ಮೂಲಕ ತಂಡಕ್ಕೆ ಆಸರೆಯಾದರು.

ಹುಬ್ಬಳ್ಳಿ ಪರ ಎಡಗೈ ಸ್ಪಿನ್ನರ್ ಹಾರ್ದಿಕ್ ರಾಜ್ ಕೇವಲ 25 ರನ್ ನೀಡಿ 3 ವಿಕೆಟ್ ಪಡೆಯುವ ಮೂಲಕ ಎದುರಾಳಿಗಳನ್ನು ನಿಯಂತ್ರಿಸಿದರು. ವೇಗಿ ಎಲ್. ಆರ್. ಕುಮಾರ್ 3 ಹಾಗೂ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ ಚನ್ನಪಟ್ಟಣ ಪ್ರತಿಭೆ ವಿಕಾಸ್ ಗೌಡ 2 ವಿಕೆಟ್ ಉರುಳಿಸಿದರು.

ಸಂಕ್ಷಿಪ್ತ ಸ್ಕೋರ್: ಮೈಸೂರು ವಾರಿಯರ್ಸ್: 19.2 ಓವರ್‌ಗಳಲ್ಲಿ 161 (ರಿತೇಶ್ ಭಟ್ಕಳ 44, ಎಲ್.ಆರ್. ಕುಮಾರ್ 14ಕ್ಕೆ 3, ಹಾರ್ದಿಕ್ ರಾಜ್ 25ಕ್ಕೆ 3) ಹುಬ್ಬಳ್ಳಿ ಟೈಗರ್ಸ್: 17.3 ಓವರ್‌ಗಳಲ್ಲಿ 3 ವಿಕೆಟ್‌ಗೆ 162 (ಅನೀಶ್ವರ್ ಗೌತಮ್ ಔಟಾಗದೇ 60, ಮೊಹಮ್ಮದ್ ತಾಹಾ 57, ಮಾಧವ್ ಬಜಾಜ್ 27ಕ್ಕೆ 2) ಪಂದ್ಯದ ಆಟಗಾರ: ಹಾರ್ದಿಕ್ ರಾಜ್



ಹುಬ್ಬಳ್ಳಿ ಟೈಗರ್ಸ್ ತಂಡದ ಅನೀಶ್ವರ್ ಗೌತಮ್ — ಚಿತ್ರ: ಅನೂಪ್ ರಾಘ್ ಟಿ

ಇಂದಿನ ಪಂದ್ಯ

ಗುಲ್ಬರ್ಗ ಮಿಸ್ಟಿಕ್ಸ್	V/s	ಶಿವಮೊಗ್ಗ ಯೋಧಾಸ್
ಆರಂಭ: ಮಧ್ಯಾಹ್ನ 2.30		
ಮೈಸೂರು ವಾರಿಯರ್ಸ್	V/s	ಬೆಂಗಳೂರು ಬ್ಲಾಸ್ಟರ್ಸ್
ಆರಂಭ: ರಾತ್ರಿ 7		
ಲೈವ್: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್‌ಕೋಡ್ ಆ್ಯಪ್		

ನಿಕಿನ್ ಮಿಂಚಿನ ಶತಕ: ಮಂಗಳೂರಿಗೆ ಜಯ

ಮೈಸೂರು: ಆರಂಭಿಕ ನಿಕಿನ್ ಜೋಸ್ ಅಬ್ಬರದ ಅಜೇಯ ಶತಕಕ್ಕೆ (ಔಟಾಗದೇ 100, 47 ಎ, 4X7, 6X8) ನಲುಗಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಕೋಸ್ಟಲ್ ಕಿಂಗ್ಸ್ ಮಂಗಳೂರು ಎದುರು 8 ವಿಕೆಟ್ ಅಂತರದಿಂದ ಸೋಲೊಪ್ಪಿತು.

ಸೋಮವಾರದ ಎರಡನೇ ಪಂದ್ಯದಲ್ಲಿ ಗುಲ್ಬರ್ಗ ನೀಡಿದ 178 ರನ್‌ಗಳ ಗುರಿ ಬೆನ್ನತ್ತಿದ ಮಂಗಳೂರು ಇನ್ನೂ 21 ಎಸೆತ ಇರುವಂತೆಯೇ ಜಯಭೇರಿ ಬಾರಿಸಿತು. ಸ್ಥಳೀಯ ಪ್ರತಿಭೆ ನಿಕಿನ್ ಜೋಸ್ ತವರಿನ ಮೈದಾನದಲ್ಲಿ ಟೂರ್ನಿಯ ಮೊದಲ ಶತಕ ದಾಖಲಿಸಿದರು. ನಾಯಕ ಕರುಣ್ ನಾಯರ್ (56) ಅರ್ಧಶತಕದ ಕಾಣಿಕೆ ನೀಡಿದರು. ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗ ತಂಡ ಆರಂಭಿಕ ಆಘಾತ ಎದುರಿಸಿದ್ದು, ನಾಯಕ ಮನೀಷ್ ಪಾಂಡೆ ಅರ್ಧಶತಕದ (70 ರನ್. 34 ಎ, 4X7, 6X3) ಮೂಲಕ ಆಸರೆ ಆದರು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 19.5 ಓವರ್‌ಗಳಲ್ಲಿ 177 (ಮನೀಷ್ ಪಾಂಡೆ 70. ಶ್ರೇಯಸ್ ಗೋಪಾಲ್ 39ಕ್ಕೆ 3, ಸಿ.ಎ. ಕಾರ್ತಿಕ್ 16ಕ್ಕೆ 2 2). ಕೋಸ್ಟಲ್ ಕಿಂಗ್ಸ್ ಮಂಗಳೂರು: 16.3 ಓವರ್‌ಗಳಲ್ಲಿ 2ಕ್ಕೆ 181 (ನಿಕಿನ್ ಜೋಸ್ ಔಟಾಗದೇ 100, ಕರುಣ್ ನಾಯರ್ 56. ಆದಿತ್ಯ ನಾಯರ್ 30ಕ್ಕೆ 1)

ಅಮೆರಿಕ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ

ಫುಲ್ಲರ್ಟನ್ (ಅಮೆರಿಕ) (ಪಿಟಿಐ): ಅನುಭವಿ ಲಕ್ಷ್ಯ ಸೇನ್ ಮತ್ತು ಉದಯೋನ್ಮುಖ ತಾರೆ ತನ್ವಿ ಶರ್ಮಾ ಮಂಗಳವಾರ ಇಲ್ಲಿ ಆರಂಭವಾಗುವ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 14ನೇ ಸ್ಥಾನದಲ್ಲಿರುವ ಸೇನ್ ಪುರುಷರ ಸಿಂಗಲ್ಸ್‌ನಲ್ಲಿ ಬೆಲ್ಜಿಯಂನ ಜೂಲಿಯನ್ ಕ್ಯಾರಗ್ಗಿ ವಿರುದ್ಧ ಅಭಿಯಾನ ಆರಂಭಿಸುವರು. ಕಿದಂಬಿ ಶ್ರೀಕಾಂತ್ ಅವರು ಮೊದಲ ಸುತ್ತಿನಲ್ಲಿ ಚೀನಾ ತೈಪೆಯ ಲಿಯಾವ್ರೋ ಜುವ್ರೋ ಫು ಅವರನ್ನು ಎದುರಿಸುವರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ತನ್ವಿ ಅವರು ಆರಂಭಿಕ ಸುತ್ತಿನಲ್ಲಿ ಜರ್ಮನಿಯ ಯವೊನೆ ಲಿ ವಿರುದ್ಧ ಕಣಕ್ಕಿಳಿಯುವರು. ದೇವಿಕಾ ಸಿಹಾಗ್, ಪೆರುವಿನ ಇನೆಸ್ ಲೂಸಿಯಾ ಕ್ಯಾಸ್ಟಿಲ್ಲೊ ಸಲಾಜರ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಅಮ್ಮನಾದ ಆಟಗಾರ್ತಿಯರಿಗೆ ಮಾರ್ಗಸೂಚಿ

ದುಬೈ (ಪಿಟಿಐ): ಮಹಿಳಾ ಕ್ರಿಕೆಟಿಗರ ಪ್ರಸವಾನಂತರದ ಆರೋಗ್ಯ ಮತ್ತು ಸುರಕ್ಷತೆಗಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮಾರ್ಗಸೂಚಿಗಳನ್ನು ಸೋಮವಾರ ಪ್ರಕಟಿಸಿದೆ.

ಪ್ರಸವಾನಂತರ ಕ್ರಿಕೆಟ್ ಕಣಕ್ಕೆ ಮರಳುವ ಆಟಗಾರ್ತಿಯರಿಗೆ 16 ವಾರಗಳ ಕಂಡಿಷನಿಂಗ್ ಹಾಗೂ ವಿಶೇಷವಾಗಿ ವಿನ್ಯಾಸಗೊಳಿಸಲಾದ ತರಬೇತಿಯನ್ನು ನೀಡಲು ಉದ್ದೇಶಿಸಿದೆ. ಒಟ್ಟಾರೆ 'ಸಿಕ್ಸ್ ಆರ್' (ರೆಡಿ, ರಿವೀವ್, ರಿಸ್ಟೋರ್, ರಿಕಂಡಿಷನ್, ರಿಟರ್ನ್ ಮತ್ತು ರಿಫೈನ್) ಚೌಕಟ್ಟು ಸಿದ್ಧ ಮಾಡಿದೆ.

'ಮಗು ಜನಿಸಿದ ನಂತರ ತಾಯಿಯು ಶೀಘ್ರ ಗುಣಮುಖರಾಗಲು ವೈದ್ಯಕೀಯ ಮತ್ತು ಆರೈಕೆಯ ಪುನರಾವಲೋಕನ ಮಾಡಲಾಗುತ್ತದೆ. ಹಂತ ಹಂತವಾಗಿ ಅವರಿಗೆ ತರಬೇತಿ ನೀಡಲಾಗುವುದು. ಕ್ರಿಕೆಟ್ ಕೇಂದ್ರಿತ ತರಬೇತಿಗೆ ಒತ್ತು ನೀಡುವುದು ಮತ್ತು ಮೇಲ್ವಿಚಾರಣೆ ಮಾಡುವುದಾಗಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಈ ಪ್ರಕ್ರಿಯೆಗಾಗಿ ಒಬ್ಬ ವೈದ್ಯ ಅಥವಾ ಫಿಸಿಯೊಥೆರಪಿಸ್ಟ್ ಒಬ್ಬರನ್ನು ಮ್ಯಾನೇಜರ್ ಆಗಿ ನೇಮಕ ಮಾಡಲಾಗುತ್ತದೆ. ಈ ರೀತಿಯ ಬೆಂಬಲದಿಂದ ಆಟಗಾರ್ತಿಗೆ ತಾಯ್ತನದೊಂದಿಗೆ ಕ್ರಿಕೆಟ್‌ನತ್ತಲೂ ಗಮನ ವಹಿಸುವ ಮನೋಸ್ಥೈರ್ಯ ಬೆಳೆಯುತ್ತದೆ. ಮೊದಲ ಎಂಟು ವಾರಗಳ ಕಂಡೀಷನಿಂಗ್ ಕುರಿತ ಮೌಲ್ಯಮಾಪನ ನಡೆಸಲಾಗುತ್ತದೆ. ಆಟಗಾರ್ತಿಯು ಪಂದ್ಯಗಳಲ್ಲಿ ಭಾಗವಹಿಸಲು ಫಿಟ್ ಆಗುವ ಮುನ್ನ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ. ಎಲ್ಲವೂ ಆರೋಗ್ಯಕರವಿದ್ದರೆ ಮಾತ್ರ ಪಂದ್ಯವಾಡಲು ಹಸಿರು ನಿಶಾನೆ ನೀಡಲಾಗುತ್ತದೆ' ಎಂದು ಹೇಳಿದೆ.

ವಿಂಬಲ್ಡನ್: ಸೆರೆನಾಗೆ ವೈಲ್ಡ್‌ಕಾರ್ಡ್


ಪ್ಯಾರಿಸ್ (ಎಎಫ್‌ಪಿ): ಏಳು ಬಾರಿಯ ಚಾಂಪಿಯನ್ ಸೆರೆನಾ ವಿಲಿಯಮ್ಸ್ ಅವರು ಇದೇ 29ರಂದು ಆರಂಭವಾಗಲಿರುವ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗಕ್ಕೆ ವೈಲ್ಡ್‌ಕಾರ್ಡ್ ಪಡೆದಿದ್ದಾರೆ.

ಅಮೆರಿಕದ 44 ವರ್ಷ ವಯಸ್ಸಿನ ಆಟಗಾರ್ತಿ ವೃತ್ತಿಪರ ಟೆನಿಸ್‌ಗೆ 2022ರಲ್ಲಿ ನಿವೃತ್ತಿ ಪ್ರಕಟಿಸಿದ್ದರು. ಈಚೆಗೆ ನಡೆದ ಕ್ವೀನ್ಸ್ ಕ್ಲಬ್ ಟೂರ್ನಿಯ ಮೂಲಕ ಡಬಲ್ಸ್‌ಗೆ ಪುನರಾಗಮನ ಮಾಡಿದ್ದರು. ವಿಂಬಲ್ಡನ್‌ನಲ್ಲಿ ಸೋದರಿ ವೀನಸ್ ಜೊತೆಗೆ ಡಬಲ್ಸ್‌ನಲ್ಲಿ ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ. ಇಬ್ಬರು ಹೆಣ್ಣುಮಕ್ಕಳ ತಾಯಿಯಾಗಿರುವ ಅವರು ಸಿಂಗಲ್ಸ್‌ನಲ್ಲೂ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

'ಸೆರೆನಾ ಮರಳಲಿದ್ದಾರೆ..., ಈ ಬಾರಿ ಮಹಿಳೆಯರ ಸಿಂಗಲ್ಸ್‌ನಲ್ಲಿ ವೈಲ್ಡ್‌ಕಾರ್ಡ್ ಸ್ಪರ್ಧಿಯಾಗಿ ಕಣಕ್ಕಿಳಿಯಲಿದ್ದಾರೆ' ಎಂದು 'ವಿಂಬಲ್ಡನ್' ಅಧಿಕೃತ ಎಕ್ಸ್ ಖಾತೆಯಲ್ಲಿ ಸೋಮವಾರ ತಿಳಿಸಿದೆ. ಈ ತಿಂಗಳ ಆರಂಭದಲ್ಲಿ ಫ್ರೆಂಚ್ ಓಪನ್ ಫೈನಲ್ ತಲುಪಿದ್ದ ಪೋಲೆಂಡ್‌ನ ಆಟಗಾರ್ತಿ ಮಾಯಾ ಕಲ್ಪಿನ್‌ಸ್ಕಾ ಅವರೂ ವೈಲ್ಡ್‌ಕಾರ್ಡ್ ಪಡೆದಿದ್ದಾರೆ.

ಸೆರೆನಾ– ವೀನಸ್ ಜೋಡಿ ಇಲ್ಲಿ ಆರು ಬಾರಿ ಡಬಲ್ಸ್ ಕಿರೀಟ ಗೆದ್ದುಕೊಂಡಿದೆ.

ವೊಂದ್ರುಸೋವಾಗೆ ನಿಷೇಧ



ಡೋಪಿಂಗ್ ಪರೀಕ್ಷೆಯನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಂಡಿದ್ದಕ್ಕಾಗಿ ವಿಂಬಲ್ಡನ್ ಮಾಜಿ ಚಾಂಪಿಯನ್, ಜೆಕ್ ಗಣರಾಜ್ಯದ ಮಾರ್ಕೆತಾ ವೊಂದ್ರುಸೋವಾ ಅವರಿಗೆ ನಾಲ್ಕು ವರ್ಷಗಳ ನಿಷೇಧ ಹೇರಲಾಗಿದೆ.

ಡೋಪಿಂಗ್ ನಿಯಂತ್ರಣ ಅಧಿಕಾರಿಯು 2025ರ ಡಿಸೆಂಬರ್‌ನಲ್ಲಿ ವೊಂದ್ರುಸೋವಾ ಅವರ ನಿವಾಸಕ್ಕೆ ತೆರಳಿ, ಮಾದರಿ ಸಂಗ್ರಹಕ್ಕೆ ಮುಂದಾಗಿದ್ದರು. ಆದರೆ, ವೊಂದ್ರುಸೋವಾ ನಿರಾಕರಿಸಿದ್ದರು.

'ದೈಹಿಕ ಮತ್ತು ಮಾನಸಿಕ ಒತ್ತಡ ಹಾಗೂ ಭದ್ರತಾ ಕಾರಣಗಳಿಂದಾಗಿ ಅಧಿಕಾರಿಯನ್ನು ಮನೆಯ ಒಳಗೆ ಸೇರಿಸಿಕೊಂಡಿರಲಿಲ್ಲ. ಮಾದರಿ ಸಂಗ್ರಹಕ್ಕೆ ಬರುವುದಾಗಿ ಅಧಿಕಾರಿಯು ಮುಂಚೆಯೇ ಮಾಹಿತಿ ನೀಡಿರಲಿಲ್ಲ' ಎಂದು ಈ ವರ್ಷದ ಏಪ್ರಿಲ್‌ನಲ್ಲಿ ಹೇಳಿಕೊಂಡಿದ್ದರು. ಆದರೆ, ವೊಂದ್ರುಸೋವಾ ಅವರು ನೀಡಿದ ಕಾರಣವನ್ನು ಒಪ್ಪದ ಸ್ವತಂತ್ರ ನ್ಯಾಯ ಮಂಡಳಿಯು, ನಿಷೇಧ ಹೇರಿ ಸೋಮವಾರ ಆದೇಶಿಸಿದೆ.

ರಾಜ್ಯ 19 ವರ್ಷದೊಳಗಿನವರ ಚೆಸ್: ಮಹಿಳಾ ವಿಭಾಗದಲ್ಲಿ ದೀಪ್ತಾ ರನ್ನರ್ಸ್

ಅಧ್ಭುತ್, ಅರುಷಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಭುತ್ ದಾಸ್ ಪುರಕಾಯಸ್ಥ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ 19 ವರ್ಷದೊಳಗಿನವರ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನ ಓಪನ್ ವಿಭಾಗದ ಕಿರೀಟ ಗೆದ್ದುಕೊಂಡರು. ಮಹಿಳೆಯರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅರುಷಿ ಸೆವೆರಿನ್ ಹೆಲೆನ್ ಡಿಸಿಲ್ವಾ ಚಾಂಪಿಯನ್ ಆದರು.

ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಆಶ್ರಯದಲ್ಲಿ ಗುಲ್ಬರ್ಗಾ ಜಿಲ್ಲಾ ಚೆಸ್ ಅಸೋಸಿಯೇಷನ್ ಆಯೋಜಿಸಿದ್ದ ಈ ಚಾಂಪಿಯನ್‌ಷಿಪ್‌ನಲ್ಲಿ ವಿವಿಧ ಜಿಲ್ಲೆಗಳ 176 ಆಟಗಾರರು ಸ್ಪರ್ಧಿಸಿದ್ದರು. ಓಪನ್ ವಿಭಾಗದಲ್ಲಿ 41 ಮಂದಿ ಹಾಗೂ ಮಹಿಳೆಯರ ವಿಭಾಗದಲ್ಲಿ 24 ಮಂದಿ ಫಿಡೆ ರೇಟೆಡ್ ಆಟಗಾರರು ಕಣಕ್ಕಿಳಿದಿದ್ದರು. ಒಂಬತ್ತು ಸುತ್ತುಗಳ ಸ್ವಿಸ್ ಲೀಗ್ ಮಾದರಿಯಲ್ಲಿ ಸ್ಪರ್ಧೆ ನಡೆಸಲಾಯಿತು.

ಎಸ್‌ಆರ್‌ಎನ್ ಮೆಹ್ತಾ ಶಾಲೆಯಲ್ಲಿ ಮೂರು ದಿನ ನಡೆದ ಈ ಚಾಂಪಿಯನ್‌ಷಿಪ್‌ನ ಓಪನ್ ವಿಭಾಗದಲ್ಲಿ ಅಧ್ಭುತ್ 9 ಸುತ್ತುಗಳಿಂದ 7.5 ಅಂಕ ಪಡೆದು ಅಗ್ರಸ್ಥಾನಿಯಾದರು. ಮೂವರು ಆಟಗಾರರು ತಲಾ 7 ಅಂಕ ಗಳಿಸಿದ್ದರಿಂದ ಟೈ–ಬ್ರೇಕರ್ ಪಂದ್ಯಗಳನ್ನು ಆಡಿಸಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಇನ್ನೊಬ್ಬ ಆಟಗಾರ ವೆಂಕಟನಾಗ ಕಾರ್ತಿಕ್ ಮಲ್ಲಾಡಿ ಎರಡನೇ ಸ್ಥಾನ ಪಡೆದರು. ಅಗ್ರಶ್ರೇಯಾಂಕದ ಆಟಗಾರ, ಬೆಂಗಳೂರು ಜಿಲ್ಲೆಯ ಅಕ್ಷತ್ ಸುರೇಕಾ ಹಾಗೂ ಇಶಾನ್ ಬನ್ಸಾಲಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಅರುಷಿ 9 ಸುತ್ತುಗಳಿಂದ 8 ಅಂಕ ಸಂಪಾದಿಸಿದರು. ಅಗ್ರ ಶ್ರೇಯಾಂಕದ ಆಟಗಾರ್ತಿ, ಬೆಂಗಳೂರಿನ ದೀಪ್ತಾ ಶ್ರೀನಿವಾಸ್ 7.5 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಮೈಸೂರಿನ ಅನಘಾ ಕೆ.ಜಿ.ಆರ್ ತೃತೀಯ ಸ್ಥಾನ ಪಡೆದರೆ ಶಾರದೀ ಶಾಸ್ತ್ರಿ ನಾಲ್ಕನೇ ಸ್ಥಾನ ತಮ್ಮದಾಗಿಸಿಕೊಂಡರು.

ಎರಡೂ ವಿಭಾಗಗಳಲ್ಲಿ ಅಗ್ರ ನಾಲ್ಕು ಸ್ಥಾನ ಗಳಿಸಿದ ಆಟಗಾರರು ನಾಗ್ಪುರದಲ್ಲಿ ನಡೆಯಲಿರುವ ರಾಷ್ಟ್ರೀಯ 19 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡರು.



(ಎಡದಿಂದ) ಪ್ರಶಸ್ತಿಯೊಂದಿಗೆ ಅಧ್ಭುತ್ ದಾಸ್ ಪುರಕಾಯಸ್ಥ, ವೆಂಕಟನಾಗ ಕಾರ್ತಿಕ್ ಮಲ್ಲಾಡಿ, ದೀಪ್ತಾ ಶ್ರೀನಿವಾಸ್ ಹಾಗೂ ಆರುಷಿ ಹೆಲೆನ್ ಡಿಸಿಲ್ವ